ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರು ಸಚಿವರು).—

ಅ) ದಕ್ಷಿಣ ಕನ್ನಡ ಜಿಲ್ಲೆಗೆ ೫೦ ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಮೀನುಗಾರರು ಇದನ್ನು ಪಡೆದು ಕೊಳ್ಳಬೇಕಾಗಿದೆ.

ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಸಿಬ್ಬಂದಿಯಲ್ಲಿನ ಉದ್ದೇಶ ಬಲ್ಲವರ ಬಗ್ಗೆ

೬೨೩ ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ).—ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ—

ಅ) ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯಲ್ಲಿ ಉರ್ದು ಬಲ್ಲವರ ಸಂಖ್ಯೆ ;

ಆ) ಕರ್ನಾಟಕ ಸರ್ಕಾರವು ಉರ್ದು ಪತ್ರಿಕೆಗಳಿಗೆ ಪತ್ರಿಕಾ ಪ್ರಕಟಣೆಗಳನ್ನು ಉರ್ದು ಭಾಷೆಯಲ್ಲಿ ಬಿಡುಗಡೆ ಮಾಡುತ್ತಿದೆಯೇ ?

ಇ) ವಿಶ್ವ ಕನ್ನಡ ಸಮ್ಮೇಳನಕ್ಕೆ ಆಹ್ವಾನಿಸಲಾದ ಉರ್ದು ಕವಿಗಳು, ಪತ್ರಕರ್ತರು, ಬರಹಗಾರರು ಸಾಹಿತಿಗಳ ಸಂಖ್ಯೆ

ಶ್ರೀ ಜೀವರಾಜ ಆಳ್ವ (ವಾರ್ತಾ ಮತ್ತು ಪ್ರಚಾರ ಸಚಿವರು).—

ಅ) ೩೨

ಆ) ಇಲ್ಲ

ಇ) ೪೦

ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯಲ್ಲಿ ಔಷದ ತಯಾರಿಕೆ

೪೭೯ ಶ್ರೀ ಕೆ. ಹೆಚ್. ಶ್ರೀನಿವಾಸ (ಶಿವಮೊಗ್ಗ) ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯಲ್ಲಿ ಔಷಧ ತಯಾರಿಕ ಘಟಕ ಕಟ್ಟಲು ಪ್ರಸ್ತಾವನೆ ಇರುವುದು ನಿಜವಲ್ಲವೆ ?

೨. ಇದಕ್ಕಾಗಿ ಸರ್ಕಾರವು ಆಯವ್ಯಯ ಪಟ್ಟಿಯಲ್ಲಿ ಹಣ ಒದಗಿಸಿದ್ದು ನಿಜವಲ್ಲವೇ ?

೩. ಸರ್ಕಾರಿ ಶಿಲ್ಪಿಯು ಇನ್ನೂ ಒಪ್ಪಿಗೆ ಕೊಟ್ಟಿಲ್ಲವಾದ್ದರಿಂದ ಕೆಲಸವನ್ನು ಪ್ರಾರಂಭಿಸಿಲ್ಲವೆನ್ನುವುದು ನಿಜವೇ ?

೪. ಹಾಗಾದರೆ ಇದನ್ನು ತ್ವರಿತ ಗೊಳಿಸಲು ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುವುದು?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

೧. ನಿಜ

೨. ಹೌದು

೩. ಹೌದು

೪. ಸೂಕ್ತವಾದ ನಿದೇಶನವನ್ನು ನಿಗದಿಪಡಿಸಲು ಮುಖ್ಯ ಶಿಲ್ಪಿಯವರನ್ನು ಕೋರಲಾಗಿದೆ.

ನಿಲುವಳಿ ಸೂಚನೆ ಪ್ರಸ್ತಾಪ

ವಿಧಾನ ಪರಿಷತ್ತನ್ನು ಮುಂದೂಡಿದ ಬಗ್ಗೆ

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೆ .....

Adjornment motion.—regarding Convening Session of Legislative Council

ಅಧ್ಯಕ್ಷರು.—ನೀವು ಈ ಸೂಚನೆಯನ್ನು ೧೦-೫೫ಕ್ಕೆ ಕೊಟ್ಟಿದ್ದೀರಿ. ಒಂದು ತಾಸು ಮೊದಲು ಕೊಟ್ಟಿದ್ದರೆ, ನನಗೂ ಅನುಕೂಲವಾಗುತ್ತಿತ್ತು.

ಶ್ರೀ ಎಸ್. ಬಂಗಾರಪ್ಪ.—೧೦ ಗಂಟೆಗೆ ಕೊಟ್ಟರೆ ಸಾಕೆಂದು ಕಾನೂನು ಇದೆ. ಅದಕ್ಕೋಸ್ಕರ ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ನಿಮ್ಮ ವ್ಯಾಪ್ತಿಯಲ್ಲಿ ಬರುತ್ತದೆಯೋ ಇಲ್ಲವೋ ಎಂಬುದನ್ನು ನೀವು ನೋಡಿದ್ದೀರಾ ಮಾನ್ಯ ಮೊಯಿಲಿಯವರೇ ? Before arguing you must see wheather you are arguing a good case or a bad case, Anyway it is left to you.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನೂ ಮಾನ್ಯ ಮೊಯಿಲಿಯವರೂ, ಶ್ರೀ ಬಸವಲಿಂಗಪ್ಪನವರೂ, ಕೆ. ಹೆಚ್. ಶ್ರೀನಿವಾಸ್, ಶ್ರೀ ಚಿನ್ನಪ್ಪನವರು, ಶ್ರೀಮತಿ ಸುಮಾ ವಸಂತ ರವರೂ ಎಲ್ಲರೂ ಸೇರಿ ಒಂದು ನಿಲುವಳಿ ಸೂಚನೆಯನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಈ ವಿಚಾರದ ಬಗ್ಗೆ ಚರ್ಚೆಗೋಸ್ಕರ, ತಮ್ಮ ಅಂತಿಮ ಒಪ್ಪಿಗೆಯನ್ನು ಪಡೆಯಲು ಪೂರ್ವಭಾವಿಯಾಗಿ ಕೆಲವು ವಿಚಾರಗಳನ್ನು ಹೇಳಬೇಕೆಂಬ ಉದ್ದೇಶದಿಂದ ಕಳುಹಿಸಿಕೊಟ್ಟಿದ್ದೇವೆ. ಈ ಸೂಚನೆಯನ್ನು ತಮ್ಮ ಒಪ್ಪಿಗೆಗಾಗಿ ಮಂಡನೆ ಮಾಡತಕ್ಕ ಸಂದರ್ಭದಲ್ಲಿ ಇದರ ಇತಿಮಿತಿಗಳು ಏನು ಎಂಬ ಅಂಶಗಳನ್ನು ಗಮನದಲ್ಲಿಟ್ಟುಕೊಂಡು...... ..

ಅಧ್ಯಕ್ಷರು.—ನೀವು ಆತ್ಮಸಾಕ್ಷಿಯಾಗಿ ಹೇಳಿ, ಇದು ನನ್ನ ಪವರ್ಸ್‌ನಲ್ಲಿ ಬರುತ್ತದೆಯೋ ?

ಶ್ರೀ ಎಸ್. ಬಂಗಾರಪ್ಪ.—ನಮ್ಮ ಆತ್ಮ ತೆಗೆದುಕೊಂಡು ನೀವು ಮಾತನಾಡಲಾಗುವುದಿಲ್ಲ.

MR. SPEAKER.—You have to convience me. You are more than a lawyer.

ಶ್ರೀ ಎಸ್. ಬಂಗಾರಪ್ಪ.—ನನ್ನ ಆತ್ಮಸಾಕ್ಷಿಯಾಗಿ ನಾನು ಮಾತನಾಡುತ್ತೇನೆ ಎಂದರ್ಥ.

ಶ್ರಿ ಎಸ್. ಆರ್. ಬೊಮ್ಮಾಯಿ.—ಇವರು ಎತ್ತಿರತಕ್ಕ ವಿಚಾರದ ಬಗ್ಗೆ......

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಈ ವಿಚಾರವನ್ನು ನಾನು ಎತ್ತಿದಮೇಲೆ, ನೀವು ತಕರಾರು ಮಾಡಬಹುದೆಂಬ ಅಂಶವನ್ನು ಗಮನದಲ್ಲಿಟ್ಟುಕೊಂಡೇ ಹೇಳುತ್ತೇನೆ.

SRI S. R. BOMMAI.—I rise to a Point or Order.

ಶ್ರೀ ಎಸ್. ಬಂಗಾರಪ್ಪ.—ನಾನು ವಿಷಯವನ್ನು ಹೇಳದೆಯೇ, ಅವರು ಏನು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಕೊಟ್ಟಂತಹ ವಿಚಾರವೇನಿದೆ, ಅದನ್ನು ಈ ಮನೆಯಲ್ಲಿ ಚರ್ಚೆಮಾಡಲು ಅವಕಾಶವಿಲ್ಲ, ಆ ಮನೆ ಸಾರ್ವಭೌಮತ್ವವನ್ನು ಪಡೆದಿದೆ. ಅಲ್ಲಿನ ಅಧ್ಯಕ್ಷರಿಗೆ ಸಂಪೂರ್ಣವಾದ ಅಧಿಕಾರವಿದೆ. ರಾಜ್ಯಾಂಗಕ್ಕೆ ಮತ್ತು ನಿಯಮಾವಳಿಗೆ ಒಳಪಟ್ಟು ಸಭೆಯ ಕಾರ್ಯ ಕಲಾಪಗಳನ್ನು ನಡೆಸುತ್ತಾರೆ. ಈ ಮನೆಯಲ್ಲಿ ಚರ್ಚೆ ಮಾಡಲು ಅವಕಾಶ ಇಲ್ಲದಿರುವುದರಿಂದ, ತಾವು ನಿಯಮ ಮತ್ತು ಸತ್ಸಂಪ್ರದಾಯಗಳನ್ನು ಗಮನದಲ್ಲಿಟ್ಟುಕೊಳ್ಳದೆಯೇ, ಚರ್ಚಿಸುವುದು ಬೇಡ ಎಂದು ಹೇಳಬಯಸುತ್ತೇನೆ. ಇಲ್ಲಿ ಆ ವಿಷಯವನ್ನು ಚರ್ಚಿಸುವುದು ಸೂಕ್ತವಲ್ಲ. ತಮಗೆ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಮನವೊಲಿಸುವ ಪ್ರಯತ್ನ ಮಾಡುವ ಹಕ್ಕು ಇದೆ. ಆದರೆ, ಇದು ಸೂಕ್ಷ್ಮವಾದ, ರಾಜ್ಯಾಂಗಕ್ಕೆ ಸಂಬಂಧಪಟ್ಟಂತಹ ವಿಚಾರ ಅದು ಈ ಸದನದ ವ್ಯಾಪ್ತಿಗೆ ಬರುವುದಿಲ್ಲ. ಮತ್ತು ಚರ್ಚೆ ಮಾಡಲೂ ಅವಕಾಶವಿಲ್ಲ. ಆ ಮನೆಯಲ್ಲಿ ನಡೆದಂತಹ ನಡವಳಿಕೆಗಳನ್ನು ಇಲ್ಲಿ ನಾವು ಚರ್ಚೆ ಮಾಡಲು ಬರುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಇತರೇ ಸದಸ್ಯರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಇದನ್ನು ದಯವಿಟ್ಟು ಒತ್ತಾಯ ಮಾಡಬಾರದು ಮತ್ತು ಪ್ರಸ್ತಾಪ ಮಾಡಬಾರದು. ಬೇಕಾದರೆ, ಅನೌಪಚಾರಿಕವಾಗಿ ಚರ್ಚೆ ಮಾಡಬಹುದು. ಇದನ್ನು ಸರ್ಕಾರದ ಗಮನಕ್ಕೆ ತಂದು, ಏನಾದರೂ ಪರಿಹಾರ ಕಂಡು ಹಿಡಿಯಬಹುದು. ಇಂತಹ ಒಂದು ಸಂಪ್ರದಾಯಕ್ಕೆ ವಿರುದ್ಧವಾಗಿ ಕಾನೂನು ವಿರುದ್ಧವಾಗಿ ನಡವಳಿಕೆಗಳನ್ನು ಮಾಡುವುದು ಬೇಡವೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.. ..ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ಬೊಮ್ಮಾಯಿಯವರು ಸರ್ಕಾರದ ಪರವಾಗಿ ಈ ಒಂದು ಕ್ರಿಯಾ ಲೋಪವನ್ನು ಎತ್ತಿದ್ದಾರೆಂಬ ಅರಿವಿನ ಚೌಕಟ್ಟಿನಲ್ಲೇ ನಾವೂ ಕೂಡ ಈ ವಿಚಾರವನ್ನು ಯೋಚನೆ ಮಾಡಿದ್ದೇವೆ. ಸದನವು ಸಾರ್ವಭೌಮತ್ವವನ್ನು ಪಡೆದಿದೆ. ಅದೇ ರೀತಿ ನಮ್ಮ ಶಾಸಕಾಂಗದ ಮತ್ತೊಂದು ಸದನ ಮೇಲ್ಮನೆ. ಅದೂ ಸಹ ತನ್ನದೇ ಆದಂತಹ ಸ್ವಾಯತ್ತ ಪರಮಾಧಿಕಾರವನ್ನು ಪಡೆದಿದೆಯೆಂದು ನಾವೂ ಕೂಡ ಒಪ್ಪಿಕೊಂಡಿದ್ದೇವೆ. ನಾನು ಪ್ರಸ್ತಾಪ ಮಾಡಬಯಸುವ ವಿಚಾರವೇನೆಂದರೆ, ಈ ಸದನದಲ್ಲಿ ನಾವು ಯಾವುದೇ ವಿಚಾರವನ್ನು ಚರ್ಚೆ ಮಾಡತಕ್ಕ ಕಾಲದಲ್ಲಿ, ಚರ್ಚೆ ಮಾಡತಕ್ಕ ವಿಚಾರಗಳು ಯಾವುದು ಕಡತಕ್ಕೆ ಹೋಗುತ್ತವೆಯೋ, ಆ ವಿಚಾರವನ್ನು ಅಲ್ಲಿ ಇದನ್ನು ಚರ್ಚೆ ಮಾಡಲು ಬರುವುದಿಲ್ಲ ಹಾಗೆಯೇ ಅಲ್ಲಿ ಚರ್ಚೆ ಮಾಡಿರತಕ್ಕ ವಿಚಾರಗಳನ್ನು ಇಲ್ಲಿ ನಾವು ಚರ್ಚೆ ಮಾಡಲು ಬರುವುದಿಲ್ಲ. ಇವತ್ತಿನ ದಿವಸ, ವಿಧಾನ ಪರಿಷತ್ತನ್ನು ಕೆಲವು ರಾಜ್ಯಗಳು ಆರಿಸಿಕೊಂಡಿವೆ. ಅಲ್ಲಿ ಪದವೀಧರ, ಕ್ಷೇತ್ರದಿಂದ, ಸ್ಥಳೀಯ ಸಂಸ್ಥೆಗಳಿಂದ, ಶಿಕ್ಷಕರುಗಳಿಂದ ಮತ್ತು ಈ ಸದನದ ಸದಸ್ಯರುಗಳಿಂದ ಆರಿಸಿ ಬಂದಿರತಕ್ಕ ಸದಸ್ಯರ ಗಳಿದ್ದಾರೆ. ಇದರ ಜೊತೆಗೆ, ನಾಮಕರಣಗೊಂಡಂತಹ ಸದಸ್ಯರೂ ಕೂಡ ಆ ಸದನದಲ್ಲಿದ್ದಾರೆ. ಈ ರೀತಿ ಆ ಸದನವನ್ನು ರಚನೆ ಮಾಡಬೇಕೆಂದು ಕಾನೂನು ಚೌಕಟ್ಟಿನಲ್ಲಿದೆ. ನಾವು ಇದನ್ನು ಮೇಲ್ಮನೆ ಎಂದು ಕರೆಯುತ್ತೇವೆ. ಅವರು ನಮಗೆ ಹಿರಿಯರು, ಅವರು ನಮಗೆ ಅಡ್ವೈಸ್ ಮಾಡಬೇಕು, ಎಂಬ ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ. ಯೂನಿ ಕ್ಯಾಮೆರಲ್ ಅಥವಾ ಬೈ-ಕ್ಯಾಮೆರಲ್ ಲೆಜಿಸ್ಲೇಚರ್ಸ್ ನಮ್ಮ ದೇಶದಲ್ಲಿವೆ. ವೆಸ್ಟ್ ಬೆಂಗಾಲ್‌ನಲ್ಲಿ, ಗುಜರಾತ್‌ನಲ್ಲಿ ಹಾಗೂ ಇತ್ತೀಚೆಗೆ ಆಂಧ್ರ ಪ್ರದೇಶದಲ್ಲಿ ಮೇಲ್ಮನೆಯನ್ನು ರದ್ದು ಮಾಡಿದ್ದಾರೆ. ಮೇಲ್ಮನೆಯನ್ನು ವಿಧಾನಸಭೆಯಲ್ಲಿ ಮೆಜಾರಿಟಿ ವೋಟ್ ಮೂಲಕ ರೆಸಲ್ಯೂಷನ್ ಪಾಸ್‌ಮಾಡಿ ರದ್ದುಮಾಡಿದ್ದಾರೆ. ಇಂತಹ ರಾಜ್ಯಗಳಲ್ಲಿ, ಈಗನಮ್ಮ ರಾಜ್ಯಗಳಲ್ಲಿರತಕ್ಕಂತಹ ಪ್ರಶ್ನೆ ಉದ್ಭವಿಸುವುದಿಲ್ಲ. ನಮ್ಮ ರಾಜ್ಯದಲ್ಲಿ ಬೈ-ಕ್ಯಾಮೆರಲ್ ಪದ್ಧತಿ ಇದೆ. ಇಲ್ಲಿ ನಮ್ಮ ರಾಜ್ಯಪಾಲರು ನಮ್ಮ ಲೆಜಿಸ್ಲೇಚರ್‌ನ ಒಂದು ಅವಿಭಾಜ್ಯ ಅಂಗ. ಹಾಗೂ ಈ ಸದನ, ಮತ್ತು ವಿಧಾನಪರಿಷತ್ತು ಈ ಮೂರನ್ನು ಒಳಗೊಂಡಿರತಕ್ಕ ಶಾಸಕಾಂಗ ಕರ್ನಾಟಕ ರಾಜ್ಯದಲ್ಲಿದೆ, ಈ ಮೂರರಲ್ಲಿ ರಾಜ್ಯಪಾಲರು ಇಲ್ಲವೆಂದರೆ ದಿ ಸ್ಟೇಟ್ ಲೆಜಿಸ್ಲೇಚರ್ ಈಸ್ ನಾಟ್ ಕಂಪ್ಲೀಟ್. ವಿಧಾನಸಭೆ ಇಲ್ಲವೆಂದರೆ ಸಂಪೂರ್ಣ ಶಾಸಕಾಂಗ ಆಗಲು ಸಾಧ್ಯವಿಲ್ಲ. ಇದೇ ರೀತಿ ವಿಧಾನ ಪರಿಷತ್ತು ಇಲ್ಲವೆಂದರೂ ಕೂಡ, ಪೂರ್ಣಗೊಂಡಿರತಕ್ಕ ಶಾಸಕಾಂಗವಾಗಿ ಕಾರ್ಯ ನಿರ್ವಹಣೆ ಮಾಡಲು ಸಾಧ್ಯವಿಲ್ಲ. ರಾಜ್ಯಾಂಗ ಬದ್ಧವಾಗಿ, ಕಾನೂನು ಪ್ರಕಾರ ಈ ಒಂದು ಚೌಕಟ್ಟಿನಲ್ಲೇ ನಾವು ಕೆಲಸ ಮಾಡಬೇಕಾಗುತ್ತದೆ, ಮಾನ್ಯ ಸಚಿವರ ಕ್ರಿಯಾಲೋಪವನ್ನು ಗಮನದಲ್ಲಿಟ್ಟುಕೊಂಡೇ ನಾನು ಮಾತನಾಡುತ್ತಿದ್ದೇನೆ. ಅಲ್ಲಿ ನಡೆಯುವ ನಡವಳಿಕೆಗಳ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿಲ್ಲ. ಇಲ್ಲಿರತಕ್ಕ ಪ್ರಶ್ನೆ ಏನೆಂದರೆ, ರಾಜ್ಯ ವಿಧಾನ ಮಂಡಲದ ಮತ್ತೊಂದು ಮುಖವಾಗಿರತಕ್ಕ ಮೇಲ್ಮನೆಯು ತನ್ನ ಕಾರ್ಯಕಲಾಪಗಳನ್ನು ಸ್ಪಷ್ಟವಾಗಿ ನಡೆಸುವಂತಾಗಬೇಕು. ಅವತ್ತು ಅಲ್ಲಿ ನೋ ಕಾನ್ಫಿಡೆನ್ಸ್ ಮೋಷನ್ ಬಗ್ಗೆ ಚರ್ಚೆಮಾಡಲು ಒಂದು ಸೂಚನೆಯನ್ನು ತಂದಿದ್ದರು. ಅದು ನನಗೆ ಗೊತ್ತಿದೆ. ಅಲ್ಲಿ ಕೆಲವು ಕಾರ್ಯಕ್ರಮಗಳನ್ನು ಮಾಡು ವುದಕ್ಕೆ ಬರುವುದಿಲ್ಲ. ಉದಾಹರಣೆಗೆ, ಡಿಮ್ಯಾಂಡ್ಸ್ ಬಗ್ಗೆ ಹಾಗೂ ಫೈನಾನ್ಸಿಯಲ್ ಬಿಸಿನೆಸ್ ಟ್ರಾನ್ಸಾಕ್ಷನ್ ಮಾಡುವ ಬಗ್ಗೆ ಕೆಲವು ಇತಿಮಿತಿಗಳನ್ನು ಹೊಂದಿರತಕ್ಕದು ಈ ಮೇಲ್ಮನೆ ಆಗಿದೆ. ಇನ್ನು ಬೇರೆ ವಿಚಾರಗಳಲ್ಲಿ ಈ ಒಂದು ಸದನಕ್ಕೆ ಎಷ್ಟು ಪರಮೋಚ್ಚ ಅಧಿಕಾರ ನಮಗೆ ಇದೆಯೋ, ಅಷ್ಟೇ ಆ ಸದನಕ್ಕೂ ಇದೆ.

ಮತ್ತೊಂದು ವಿಚಾರವನ್ನು ಕೂಡ ನಾವು ಗಮನಿಸಬೇಕು. ಇವತ್ತು ಈ ಸದನದಲ್ಲಿ ಯಾವ ಪಕ್ಷಕ್ಕೆ ಬಹುಮತ ಇರುತ್ತದೆಯೋ, ಅದು ಸರ್ಕಾರ ರಚನೆ ಮಾಡಲಿಕ್ಕೆ ಬರುತ್ತದೆ. ಆದರೆ ಆ ಸದನದಲ್ಲಿ ಬಹುಮತ ಯಾವ ಪಕ್ಷಕ್ಕೆ ಬಂದರೂ ಕೂಡ ಅದು ಸರ್ಕಾರ ನಡೆಸತಕ್ಕ ಪ್ರಸ್ತಾಪ ಇಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಇವತ್ತು ಅಲ್ಲಿ ವಿರೋಧಪಕ್ಷಕ್ಕೆ ಬಹುಮತ ಬಾದಿರಬಹುದು, ಆದರೆ ಅದು ಕರ್ನಾಟಕ ರಾಜ್ಯದ ಸರ್ಕಾರವನ್ನು ರಚನೆ ಮಾಡುವುದಕ್ಕೆ ಬರುವುದಿಲ್ಲ. ಈ ಬಹುಮತ ಮತ್ತು ಅಲ ಮತ ಆ ಸದನದಲ್ಲಿ ಇದ್ದಾಗ ಏನಾಗುತ್ತದೆ ಎಂಬ ಅಂಶವನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವ ಉದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮೇಲ್ಮನೆಯಲ್ಲಿ ನಡೆದ ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡದೇ ಇರಬಹುದು, ಮತ್ತು ಇಲ್ಲಿ ನಡೆದ ವಿಚಾರಗಳನ್ನು ಅಲ್ಲಿ ಪ್ರಸ್ತಾಪ ಮಾಡಬಾರದು ಎಂದಿದೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ಇಲ್ಲಿ ಈಗ ನಮ್ಮ ಮುಂದಿರತಕ್ಕಂಥ ಪ್ರಶ್ನೆ

ಏನೆಂದರೆ, ಸದನ ನಿಗದಿಮಾಡಿರತಕ್ಕಂಥ ಕಾರ್ಯಗಳನ್ನು ನಿರ್ವಹಣೆ ಮಾಡತಕ್ಕಂಥ ಸಂದರ್ಭದಲ್ಲಿ ಕಾರ್ಯಕಲಾಪಗಳಿಗೆ ಅಡೆತಡೆ ಉಂಟಾಗದ ಹಾಗೆ ಅವುಗಳನ್ನು ನಡೆಸತಕ್ಕಂಥ ಜವಾಬ್ದಾರಿ ಅಲ್ಲಿರ ತಕ್ಕಂಥ ಎಲ್ಲಾ ಪಕ್ಷಗಳಿಗೆ ಹಾಗೂ ಸದನದ ಅಧ್ಯಕ್ಷರಿಗೆ ಸಂಬಂಧಪಟ್ಟಿರತಕ್ಕಂಥಾದ್ದು. ಆ ಸದನದ ಅಧ್ಯಕ್ಷರ ಬಗ್ಗೆ ನಮಗೆ ಅಪಾರವಾದ ಗೌರವ ಇದೆ ಮತ್ತು ಅವರ ಬಗ್ಗೆ ವಿಶೇಷವಾದ ಅಭಿಮಾನವನ್ನು ಇಟ್ಟುಕೊಂಡಿದ್ದೇವೆ. ಇವೊತ್ತಿನ ದಿವಸ ಈ ಸದನದ ಅಧ್ಯಕ್ಷರ ಬಗ್ಗೆ ಏನು ಗೌರವವನ್ನು ನಾವು ಇಟ್ಟುಕೊಂಡಿದ್ದೇವೊ, ಅದೇ ರೀತಿಯ ಗೌರವನ್ನು ಆ ಮನೆಯ ಅಧ್ಯಕ್ಷರ ಬಗ್ಗೆಯೂ ಇಟ್ಟುಕೊಂಡಿದ್ದೇವೆ. ಅಲ್ಲಾಗಲೀ, ಇಲ್ಲಾಗಲೀ ಅಂತಿಮವಾಗಿ ಏನಾದರೂ ತೀರ್ಪು ಬಂದರೆ ಅದಕ್ಕೆ ನಾವು ತಲೆ ಬಾಗಬೇಕಾಗುತ್ತದೆ. ಇವರಿಗೆ ಗೌರವ ಕೊಡುವುದನ್ನು ಕಲಿತರೆ ಮಾತ್ರ ನಾವು ಮತ್ತೊಬ್ಬರಿಗೆ ಗೌರವವನ್ನು ಕೊಡುವುದನ್ನು ಕಲಿಯುತ್ತೇವೆ. ಆದರೆ ಮಾನ್ಯ ಅಧ್ಯಕ್ಷರೇ, ಅಲ್ಲಿ ಒಂದು ಸೆನ್ಸರ್ ಮೋಶನ್ ಮೂವ್ ಮಾಡುವ ಮುಂಚಿತರ ರೂಲ್ಸ್ ಸಸ್ಪೆಂಡ್ ಮಾಡತಕ್ಕಂಥ ವಿಚಾರದೊಳಗೆ ಅಲ್ಲಿನ ಮಾನ್ಯ ಸದಸ್ಯರುಗಳು ವಿರೋಧ ಪಕ್ಷದ ನಾಯಕರು ಆದಿಯಾಗಿ ಪ್ರಯತ್ನ ಮಾಡಿದ್ದಾರೆ. ಇದನ್ನು ಮಾಡಿರಬೇಕಾದರೆ, ನಾನು ಇದರ ವಿವರಕ್ಕೆ ಹೋಗಲುವುದಿಲ್ಲ. ನಮ್ಮ ಪಕ್ಷದವರು ಒಂದೇ ಅಲ್ಲ, ಭಾರತೀಯ ಜನತಾಪಕ್ಷದವರೂ ಇದನ್ನು ಮಾಡಿದ್ದಾರೆ. ಕೆಲವರು ಧರಣಿ ಹೂಡುವ ಮಟ್ಟಕ್ಕೆ ಹೋಗದಿದ್ದರೂ, ಸಭಾತ್ಯಾಗ ಮಾಡಿರಬಹುದು. ಅವರುಗಳು ಒಂದು ವಿರೋಧವನ್ನು ವ್ಯಕ್ತ ಪಡಿಸಿದಾಗ, ವಿಷಯದ ಪ್ರಾಮುಖ್ಯತೆಯನ್ನು ಅರಿತು ಸಾರ್ವಜನಿಕವಾಗಿರತಕ್ಕಂಥ ಒಂದು ಜರೂರಾತಿಯನ್ನು ಅನುಸರಿಸಿ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಂಥ ಸಂದರ್ಭ ಬಂದಾಗ, ಚರ್ಚೆಗೆ ಅನುವು ಮಾಡಿಕೊಡುವುದಕ್ಕೆ ಸರ್ಕಾರ ಪ್ರಾಮಾಣಿಕವಾಗಿ ಯೋಚಿಸಬೇಕಾಗಿತ್ತು ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಲ್ಲಿ ಸೆನ್ಸರ್ ಮೋಶನ್ ಬಂದರೆ, ಮತ್ತೊಂದು ವಿಚಾರ ಬಂದಾಗಲೂ ಸರ್ಕಾರ ಹೆದರಬಾರದು. ಹೈಕೋರ್ಟ್ ಜಡ್ಜಮೆಂಡ್‌ನಿಂದಾಗಿ ಉದ್ಭವವಾಗಿರತಕ್ಕಂಥ ಪರಿಸ್ಥಿತಿ.........

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ನನ್ನದು ಕ್ರಿಯಾಲೋಪ ಇದೆ. ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಡಬಾರದಿತ್ತು. ತಾವು ಬೇಕಾದರೆ ರೂಲ್ಸ್ ಬುಕ್ ತೆಗೆದುನೋಡಿ. ಆ ಸದನದಲ್ಲಿ ನಡೆದ ಯಾವುದೇ ವಿಷಯದ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಅದೇರೀತಿ ಇಲ್ಲಿಯ ಯಾವುದೇ ಕಾರ್ಯಕಲಾಪದ ಬಗ್ಗೆ, ವಿಷಯದ ಬಗ್ಗೆಯಾಗಲೀ ಅಲ್ಲಿ ಚರ್ಚೆ ಮಾಡುವುದಕ್ಕೆ ಯಾವುದೇ ವಿಧವಾದ ಅವಕಾಶ ಇಲ್ಲ. ಸದನದಲ್ಲಿ ನಡೆದ ಯಾವುದೇ ವಿಷಯದ ಬಗ್ಗೆ ನಿರ್ಣಯ ಕೊಡುವಂಥ ಅಧಿಕಾರ ಈ ಸದನಕ್ಕೆ ಇಲ್ಲ, ಈ ಸರ್ಕಾರಕ್ಕೆ ಕೂಡ ಇಲ್ಲ. ಮೇಲ್ಮನೆಯಲ್ಲಿ ನಡೆದ ಏನೇ ವಿಷಯದ ಬಗ್ಗೆ ಹೇಳಿದರೂ ಅದು ಆ ಸದನದ ಹಕ್ಕಿಗೆ ಸಂಬಂಧಪಟ್ಟಂತೆ ಇರುತ್ತದೆ. ಅದನ್ನು ಇಲ್ಲಿ ಹೇಳಿದರೆ, ಎರಡೂ ಸದನಗಳು ಕ್ಲ್ಯಾಸ್ ಆಗುವ ಹಾಗೆ ಆಗುತ್ತದೆ. ಆದ್ದರಿಂದ ಈ ಪ್ರಸ್ತಾಪವನ್ನು ತಾವು ನೇರವಾಗಿ ತಳ್ಳಿಹಾಕಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ......

ಅಧ್ಯಕ್ಷರು.—ತಾವು ಸ್ವಲ್ಪ ಇರಿ, ಮಾನ್ಯ ಕಾನೂನು ಮಂತ್ರಿಗಳು ಕ್ರಿಯಾಲೋಪ ಎತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಕ್ರಿಯಾಲೋಪ ಇಷ್ಟೆ. ಬಹಳ ಮೂಲಭೂತವಾದ ವಿಷಯದ ಬಗ್ಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಮೂಲಭೂತವಾದ ವಿಷಯಗಳನ್ನು ಪ್ರಸ್ತಾಪ ಮಾಡತಕ್ಕಂಥ ಸಮಯದಲ್ಲಿ ಉಭಯ ಸದನಗಳಿಗೆ ಇರತಕ್ಕಂಥ ಮೂಲಭೂತ ಹಕ್ಕುಗಳಾಗಲೀ, ಕರ್ತವ್ಯಗಳನ್ನಾಗಲೀ ಗಮನದಲ್ಲಿಟ್ಟುಕೊಳ್ಳಬೇಕಾದದ್ದು ಅವಶ್ಯಕವೆಂದು ನಾನು ಈ ಸಂದರ್ಭದಲ್ಲಿ ಭಾವಿಸುತ್ತೇನೆ. ಇದನ್ನು ಕಾನೂನು ಚೌಕಟ್ಟಿನಲ್ಲಿ ಪರಿಶೀಲನೆ ಮಾಡಿದಾಗ ನಮ್ಮ ಸಂವಿಧಾನದ ೨೦೮ನೇ ನಿಯಮಾವಳಿ ಪ್ರಕಾರ ಈ ಸಭೆಯ ನಿಯಮಾವಳಿಗಳನ್ನು ಕೂಡ ಮಾಡಿದ್ದೇವೆ. ಹಾಗೆಯೇ ಮೇಲ್ಮನೆಯ ನಿಯಮಾವಳಿಗಳನ್ನು ಮಾಡಿದ್ದೇವೆ. ಈ ನಿಯಮಾವಳಿಗಳನ್ನು ಮಾಡತಕ್ಕಂಥ ಸಮಯದಲ್ಲಿ ಉಭಯ ಸದನಗಳಿಗೆ ಇರತಕ್ಕಂಥ ಕರ್ತವ್ಯಗಳ ಮತ್ತು ಅಧಿಕಾರಗಳನ್ನು ಕೂಡ ಆ ನಿಬಂಧನೆಗಳಲ್ಲಿ ಸೂಚನೆ ಮಾಡಲಾಗಿದೆ. ಈ ಸದನದ ಕಾರ್ಯಕಲಾಪಗಳನ್ನು ನಡೆಸತಕ್ಕಂಥ ಸಮಯದಲ್ಲಿ ಈ ನಿಯಮಾವಳಿಗಳಿಗೆ ಅನುಸಾರವಾಗಿ ಮತ್ತು ಸಂವಿಧಾನಕ್ಕೆ ಅನುಸಾರವಾಗಿ ಕಾರ್ಯಕಲಾಪಗಳನ್ನು ನಡೆಸಬೇಕೆಂದು ಇರುವುದು ಕೂಡ ನಿರ್ವಿವಾದವಾಗಿರತಕ್ಕಂಥ ವಿಚಾರ. ಸನ್ಮಾನ್ಯ

ಬಂಗಾರಪ್ಪನವರ ವಾದವನ್ನು ನಾವು ಸ್ಥೂಲವಾಗಿ, ಸೂಕ್ಷ್ಮವಾಗಿ ಇಲ್ಲಿ ಒಪ್ಪಿಕೊಂಡಿದ್ದೇ ಆದರೆ ಅದರ ಪರಿಣಾಮ ಏನಾಗುತ್ತದೆ ಎಂದರೆ, ಲಾಜಿಕಲ್ ಕನ್‌ಕ್ಲೂಜನ್‌ಗೆ ಇದನ್ನು ತೆಗೆದುಕೊಂಡು ಒಪ್ಪಿಕೊಂಡರೆ ಮುಂದೆ ಈ ಸಭೆಯ ಕಾರ್ಯಕಲಾಪಗಳನ್ನು ಅಲ್ಲಿ ಪ್ರಶ್ನೆ ಮಾಡಬಹುದು ಮತ್ತು ಅದೇರೀತಿಯಾಗಿ ಇಲ್ಲಿಯ ಕಾರ್ಯಕಲಾಪಗಳನ್ನು ಅಲ್ಲಿ ಪ್ರಶ್ನೆ ಮಾಡಬಹುದು ಎಂದಾಗುತ್ತದೆ. ಈ ರೀತಿ ಆಗಬಾರದಂತೆ ನಾವು ತಡೆಗಟ್ಟಬೇಕಾಗುತ್ತದೆ. ಸಂವಿಧಾನಬದ್ಧವಾಗಿ ಈ ಎರಡೂ ಮನೆಗಳಿಗೆ ಏನು ಅಧಿಕಾರ ಮತ್ತು ವ್ಯಾಪ್ತಿ ಇದೆ, ಇದರ ಬಗ್ಗೆ ಭಿನ್ನಾಭಿಪ್ರಾಯ ಇರುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಅನೇಕ ವರ್ಷಗಳಿಂದ ಅನಿರ್ಭಾದಿತವಾಗಿ ನಡೆದುಕೊಂಡು ಬಂದಿರತಕ್ಕಂಥ ಸಂಪ್ರದಾಯವನ್ನು ಈ ಸದನ ಮೀರಿಯುವ ಪ್ರಯತ್ನ ಮಾಡುವುದು ಬೇಡ. ಎರಡನೆಯದಾಗಿ ಕಾನೂನಿನ ಚೌಕಟ್ಟಿನಲ್ಲಿ ಕೂಡ ಅಲ್ಲಿ ನಡೆದಂಥ ವಿಷಯಗಳ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಇವೆರಡು ಮುಖ್ಯವಾಗಿರತಕ್ಕಂಥ ಪ್ರಶ್ನೆಗಳು ನಮ್ಮ ಮುಂದೆ ಇವೆ.

I will read Rule No. 11 from the Rules of practice and procedure in the L.C. It reads thus.

> "No. 11—Sittings of the Council.–A sitting of the Council is duly constituted when it is presivded over by the Chairman or Deputy Chairman or any other Vice-Chairman or any other member authorised by the Chairman or Deputy Chairman to preside over a sitting of the Council under the constitution of these rules.
>
> No. 12.–The Council shall sit on such days as the Chairman having regard to the state of business of the Council, may from time to time direct.
>
> No. 13.—Sittings of the Council shall subject to the direction of the Chairman ordinarily commence at 12–15 hours. Unless the Chairman otherwise directs sittings of the House on any day shall ordinarily conclude at 8–00 hours.
>
> No. 14.—The Chairman shall determine the time when a sitting of the Council shall be adjourned sine die or to a day or hour or part of the same day.
>
> Provided that the Chairman may, if he thinks fit call a sitting of the Council before the date or time to which it has adjourned or at any time after the Council has been adjourned sine die.

So, that power is given to the Chairman of the Council and his right to Exercise this power is unfettered so far as the rule is concerned, i.e., an ordinary plain reading of the rule is concerned. Therefore, my submission is, everything according to which the proceeding of the L.C., shall be carried on or found in the rules of procedure What happens, why it happens on a particular occasion is a matter which should be solely and absolutely under the consideration of that House as directed by the Chairman of the House or the Vice Chairman or any other authorised persons sitting in the Chair to dis–

charge the functions of the Chairman, We cannot sit in judgment for whatever that happens in that House. We cannot sit in judgment or draw inferences however convinient or otherwise. We cannot go on a dialogue or a discussion over what happens or what has happened in that House. We are completely barred from entering into any kind of discussion about what happens or what has happened in the other. House. Similarly, I will draw your kind attantion to the Rules of Practice and Procedure and Conduct of Business in the L.A. I will read Rule No. 312.

Rule-312 of Rules of Practice and Procedure in the Assembly reads thus.

> "No speech made in the Council shall be quoted in the House unless it is a definite statement of policy by a Minister."

This is ordinarily we have been following and on no occation we have departed from this practice because it has been followed all these years and there is no reason why we should depart now. Then I will invite you kind attention to a passage in Kaul and Shakdhar (Page 78).

> "Each House is the guardian of its own privileges. It is not only the sole judge of any matter that may arise which in any way infringes upon those privilages, but can, if it deems it advisable, punish, either by imprisonment or reprimand, any person whom it considers to be guilty of contempt,"

The point I am trying to make out is that theHouse is absolutely independent and privilaged to take such action as is necessary in all matters conneeted with the functioning of that House within the rules of procedura prescribed therefore under Art 208 of the Constitution. The last point in support of my point that I should like to bring to your kind notice is this. In page 243 also the same point is mentioned to the same effect. My submission, therefore is, this notice of adjournment motion of what has happened in the Legilative Council is ill-conceived, impermissible under the Constitution and it is also equally impermissible under the Rules of Procedure we are attempting to tread upon a dangerous path which will lead to consequences whose repercussions we are not just now in a position to know. Therefore, if the Hon'ble Leader of the Opposition has any grouse, he has got to find remedy elsewhere and not through the instrumentality of this House and not that too through you, Sir. Therefore this matter should not be allowed to be raised. I submit that the matter must be closed at this stage,

ಶ್ರೀ ಎಸ್. ಬಂಗಾರಪ್ಪ.—ನಾನು ಏನು ಹೇಳಿದ್ದೇನೆಂದರೆ, ನಾನು ಹೇಳಬೇಕೆಂದಿರುವಾಗಲೇ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದರು. ಅದಷ್ಟನ್ನೇ ತಾವು ಕೇಳಿಕೊಂಡು ರೂಲಿಂಗ್ ಕೊಡುತ್ತಿದ್ದಾದರೆ ನಾನು ಏನು ಹೇಳುತ್ತೇನೆಂಬುದನ್ನು ಕೇಳುವ ಅವಶ್ಯಕತೆ ತಮಗಿಲ್ಲವೇ ?

ಅಧ್ಯಕ್ಷರು.—ತಮ್ಮ ಅಭಿಪ್ರಾಯ ಏನೆಂಬುದರ ಬಗ್ಗೆ ತಮ್ಮ ನಿಲುವಳಿ ಸೂಚನೆಯನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ. ಅದನ್ನೇ ನಾನು ಹೇಳುತ್ತಿರುವುದು. ಕೇವಲ ನೋಟೀಸನ್ನು ಕೊಟ್ಟಾಕ್ಷಣ ಅದರ ಬಗ್ಗೆ ಮಾತನಾಡಿದ ಹಾಗೆ ಎಲ್ಲಿ ಆಗುತ್ತದೆ ? ಅದಕ್ಕೆ ತಮ್ಮ ಕನ್‌ಸೆಂಟನ್ನು ಕೇಳಬೇಕಲ್ಲವೇ ? ನಾನು ಮಾತನಾಡುತ್ತಿದ್ದಾಗ ಅವರು ಪಾಯಿಂಟ್ ಆಫ್ ಆರ್ಡರ್ ಎಂದು ಎತ್ತಿದ್ದರಿಂದ ನಾನು ಹೇಳುವುದನ್ನು ನಿಲ್ಲಿಸಿ ಕುಳಿತೆ ಅಷ್ಟೆ. ಹಾಗೆಯೇ ನಾನು ಮಾತನಾಡುವುದೂ ಬೇಡ ಎಂದಿದ್ದರೆ ಅದನ್ನೂ ತಾವು ಹೇಳಬಿಡಿ. ನಾನು ನಿಲುವಳಿ ಸೂಚನೆ ಕಳಿಹಿಸಿಕೊಟ್ಟ ಮೇಲೆ ಅದನ್ನು ಮೂವ್ ಮಾಡುವುದಕ್ಕೆ ಕನಸೆಂಟಿಗಾಗಿ ಇಲ್ಲಿ ಮಾತನಾಡಬೇಕಾಗುತ್ತದೆ. ಹೇಗೆ ಅವರ ಅಭಿಪ್ರಾಯವನ್ನು ಕೇಳಿದಿರೋ ಹಾಗೇಯೇ ನಮ್ಮ ಅಭಿಪ್ರಾಯವನ್ನೂ ತಾವು ಕೇಳಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದರ ಬಗ್ಗೆಯೇ ತಾವು ರೂಲಿಂಗ್ ಕೊಡಬೇಕೆಂದು ನಾನು ಕೇಳುತ್ತಿರುವುದು. ನಮ್ಮ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಪಾಯಿಂಟ್ ಆಫ್ ಆರ್ಡರೇ ಮೊದಲು ಬರುವುದಿಲ್ಲ. ಏಕೆಂದರೆ ತಮ್ಮನ್ನು ಅಡ್ಮಿಸಿಬಿಲಿಟಿ ಬಗ್ಗೆ ಅವರು ಕೇಳುತ್ತಿದ್ದಾರೆ ? ಆ ಅಧಿಕಾರ ಅವರಿಗೆ ಇದೆ. ಆದ್ದರಿಂದ ನೀವು ಮೊದಲಿಗೇ ರೂಲಿಂಗ್ ಕೊಡಬೇಕೆಂದು ಕೇಳುವುದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಪಾಯಿಂಟ್ ಆಫ್ ಆರ್ಡರನ್ನು ಅವರು ಎತ್ತಿದ್ದಾರೆ. ಮೇಲ್ಮನೆ ವಿಷಯವನ್ನು ಇಲ್ಲಿ ಮಾತಾಡುವ ಹಾಗಿಲ್ಲ ಎಂದು. that is a question or admissibility. Another point is, ಇದರ ಬಗ್ಗೆ ನಾನು ಹೇಳುವುದು ಇಷ್ಟೆ. ಈ ಮನೆಯಲ್ಲಿ ಚರ್ಚೆ ಮಾಡಿದ್ದನ್ನು ಆ ಮನೆಯಲ್ಲಿ ಚರ್ಚೆಗೆ ಅಲೋ ಮಾಡಿದರೆ ಅವು ಹೇಗೆ ಮಾಡಿದರು ? ಇದರ ಬಗ್ಗೆ ಪೇಪರಲ್ಲೂ ಬಂದಿದೆ. ಹಿಂದೆ ನಾನು ಮೇಲ್ಮನೆಯನ್ನು ರದ್ದುಪಡಿಸಬೇಕು ಎಂದು ಇಲ್ಲಿ ಹೇಳಿದ್ದರ ಮೇಲೆ ಅವರು ಅಲ್ಲಿ ಚರ್ಚೆ ಮಾಡಲಿಲ್ಲವೇ ? ಆದರಿಂದ ಇಲ್ಲೂ ಅವಕಾಶ ಕೊಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈಗ ಮೊದಲು ಇದನ್ನು ಕ್ಲಾರಿಫೈ ಮಾಡಿ. ಅಜರ್ನಮೆಂಟ್ ಮೋಷನ್ನಿನ ಅಡ್ಮಿಸಿಬಿಲಿಟಿ ಬಗ್ಗೆ ಈಗ ಚರ್ಚೆಯಾಗುತ್ತಾ ಇದೆ, ಆಗಬಾರದು ಎಂದು ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅದಕ್ಕೆ ರೂಲಿಂಗ್ ಕೊಡಬೇಕೆಂದೂ ಆ ಕಡೆಯವರು ಕೇಳುತ್ತಿದ್ದಾರೆ. ಆದರೆ ಬಂಗಾರಪ್ಪನವರು ಹೇಳುತ್ತಿರುವುದು ಅದನ್ನಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಪಾಯಿಂಟ್ ಆಫ್ ಆರ್ಡರ್ ಏನಿತ್ತು ಎಂದರೆ...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಬೊಮ್ಮಾಯಿಯವರು ಇದನ್ನು ಅಡ್ಮಿಟ್ ಮಾಡುವುದಕ್ಕೆ ಬರುವುದಿಲ್ಲ ಎಂದು ಒಂದು ಪಾಯಿಂಟ್ ಮಾಡಿದರು ಪಾಯಿಂಟ್ ಆಫ್ ಆರ್ಡರ್ ಅಷ್ಟಕ್ಕೇ ಏಕೆ ಬೇಕಾಗಿತ್ತು ? ನೇರವಾಗಿಯೇ ಇದಕ್ಕೆ ಉತ್ತರ ಕೊಡಬಹುದಾಗಿತ್ತು. ಆಮೇಲೆ ತಾವೂ ರೂಲಿಂಗ್ ಕೊಡಬಹುದಾಗಿತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಮೂಲಭೂತವಾದ ಪ್ರಶ್ನೆಯನ್ನು ಎತ್ತಿದ್ದೇವೆ ಅಜರ್ನಮೆಂಟ್ ಮೋಷನ್ ಕೇಳಿರುವಂಥ ವಿಷಯ ಏನಿದೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಇಲ್ಲಿ ಬರುವುದಿಲ್ಲ ಎಂಬುದು ನಮ್ಮ ಪಾಯಿಂಟ್ ಆಫ್ ಆರ್ಡರೆ ಅಷ್ಟೇ, ಈ ವಿಚಾರದಲ್ಲಿ ಪ್ರಿಲಿಮಿನರಿ ಸ್ಟೇಟ್‌ಮೆಂಟ್ ಮಾಡುವುದಕ್ಕೂ ಕೂಡ ಅಥವಾ ಚರ್ಚೆ ಮಾಡುವುದಕ್ಕೂ ಆಗಲಿ ಅವಕಾಶ ಇರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹಾಗಾದರೆ ಅದರ ಬಗ್ಗೆಯೇ ಚರ್ಚೆಯಾಗಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ಕಾನೂನು ಮಂತ್ರಿಗಳು ಹೇಳಿದ್ದಾರೆ. ನಾನೂ ಕೂಡ ಪ್ರಸ್ತಾಪ ಮಾಡಿದ್ದೇನೆ. ಇದು ರೂಲ್ ೧೪ ಮತ್ತು ರೂಲ್ ೧೧ ಆಫ್ ಕೌನ್ಸಿಲ್ ರೂಲ್ಸ್‌ನಲ್ಲಿದೆ ಎಂದು ಹೇಳಿದ್ದಾರೆ. ಅಲ್ಲಿ ಆ ಸಭೆಯ ನಡವಳಿಕೆಗಳನ್ನು ನಡೆಸುವ ವಿಷಯದಲ್ಲಿ ಸಂಪೂರ್ಣ ಅಧಿಕಾರ ಅಲ್ಲಿಯ ಚೇರ್ಮನ್ನರಿಗಿದೆ. ಅದರ ಬಗ್ಗೆ ಇಲ್ಲಿ ಚರ್ಚೆ ಮಾಡಿದರೆ ಅವರ ನೀತಿಯ ಬಗ್ಗೆ, ನಿರ್ಣಯ

ಬಗ್ಗೆ ಚರ್ಚೆ ಮಾಡಿದಂತಾಗುತ್ತದೆ. ಅಂಥದನ್ನು ಮಾಡುವುದಕ್ಕೆ ಈ ಮನೆಗೆ ಅವಕಾಶ ಇಲ್ಲವೆಂದು ಹೇಳುತ್ತಿದ್ದೇವೆ. ಅದರ ಬಗ್ಗೆಯೇ ನಾವೂ ಪಾಯಿಂಟ್ ಆಫ್ ಆರ್ಡರ್ ಎತ್ತಿರುವುದು. ಇದರ ಬಗ್ಗೆ ಅಭಿಪ್ರಾಯವನ್ನು ಅವರೂ ಹೇಳಲಿ. ಆದರೆ ವಿಷಯದ ಬಗ್ಗೆ ಅಲ್ಲ. preliminary submission for giving permission for moving adjournment motion ಅಲ್ಲ. ಆ ವಿಷಯದ ಮೇಲೆ ಚರ್ಚೆ ಮಾಡುವ ಅವಕಾಶ ಇದೆಯೇ ಎಂಬುದರ ಬಗ್ಗೆ ಬೇಕಾದರೆ ಅವರು ವಾದ ಮಾಡಲಿ. ತಾವೂ ನಿರ್ಣಯ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಪಾಯಿಂಟ್ ಆಫ್ ಆರ್ಡರ್ ಏಕೆ ಇದರಲ್ಲಿ ಬರುವುದಿಲ್ಲ ಎಂಬುದರ ಬಗ್ಗೆ ಮಾತನಾಡಲಿ,

ಶ್ರೀ ಎಸ್. ಬಂಗಾರಪ್ಪ.—ನಾನು ಪೂರ್ವಪೀಠಿಕೆಯಲ್ಲಿ ಏನು ಹೇಳಿದೆ ಎಂದರೆ ಆ ಸದನಕ್ಕೆ ಇರುವ ಸರ್ವೋಚ್ಚ ಅಧಿಕಾರವನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಅದರ ಅಧ್ಯಕ್ಷರ ಬಗ್ಗೆ ನಮಗೆ ಗೌರವ ಇದೆ. ಅವರು ಹೇಳಿದ್ದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಇದನ್ನು ತಾವು ಕೇಳದಿದ್ದರೆ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವ ಆಗತ್ಯವೇ ಇರುತ್ತಿರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಆ ಮನೆಯ ಅಧಿವೇಶನವನ್ನು ಕರೆಯುವ ಬಗ್ಗೆ ಅವರು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡುತ್ತಿದ್ದಾರೆ. ಆದರೆ ಆ ಒಂದು ಅಧಿಕಾರ ಆ ಮನೆಯ ಚೇರ್‌ಮನ್ ಅವರಿಗೆ ಇದೆಯೋ–ಇಲ್ಲವೇ ? ಹಾಗೂ ಇದು ರಾಜ್ಯಪಾಲರಿಗೆ ಇದೆ. ಈ ಒಂದು ಅಧಿಕಾರ ಬೇರೆ ಯಾರಿಗೂ ಇಲ್ಲ. ಸರ್ಕಾರಕ್ಕೂ ಕೂಡ ಇಲ್ಲ. ಈ ಬಗ್ಗೆ ಸರ್ಕಾರ ಸಲಹೆ ಮಾಡುತ್ತದೆ. ಅಷ್ಟೆ. ಆ ಒಂದು ಸಲಹೆ ಮೇರೆಗೆ ರಾಜ್ಯಪಾಲರು ಸಮನ್ ಮಾಡುತ್ತಾರೆ. ಆ ಮನೆಯ ಅಧಿವೇಶನವನ್ನು ಕರೆಯುವಂತೆ ಸೂಚನೆ ಮಾಡಲು ಈ ಮನೆಗೆ ಅಧಿಕಾರ ಇಲ್ಲದಿರುವಾಗ ಅವರು ಚರ್ಚೆ ಮಾಡುವುದಕ್ಕೆ ಹೋಗುತ್ತಿದ್ದಾರೆ. ಅದು ಸರಿಯಲ್ಲ.

ಶ್ರೀ ಎಸ್. ಬಂಗಾರಪ್ಪ.—ಆ ಸದನವಿರಬಹುದು, ಈ ಸದನವಿರಬಹುದು. ಒಂದು ರೀತಿಯ ಪ್ರಶ್ನೆ ಇದರಲ್ಲಿದೆ. ಮುಂದೂಡಿದ ಸಭೆಯನ್ನು ಮತ್ತೆ ಕರೆಯುವ ಅಧಿಕಾರ ರಾಜ್ಯಪಾಲರಿಗೆ ಇದೆ ಮತ್ತು ಇದ್ದಕ್ಕಿದ್ದಂತೆ ಮುಂದೂಡಿದ ಸಭೆಯನ್ನು ಮತ್ತೆ ಕರೆಯುವ ಅಧಿಕಾರ ಆ ಸಭೆಯ ಚೇರ್‌ಮನ್ ಅವರಿಗೆ ಇದೆ.

ಶ್ರೀ ಹೆಚ್. ಡಿ. ದೇವೇಗೌಡ.—ಆ ಸಭೆಯನ್ನು ಮತ್ತೆ ಕರೆಯುವ ಬಗ್ಗೆ ಸೂಚನೆ ಕೊಡಲು ಈ ಸಭೆಗೆ ಅಧಿಕಾರ ಇದೆಯೆ ? ಇದೇ ಇಲ್ಲಿರುವ ಮುಖ್ಯ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನೇ ನಾನು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮುಂದೂಡಿರುವ ಆ ಸಭೆಯನ್ನು ಮತ್ತೆ ಕರೆಸಬೇಕೆಂಬ ಬಗ್ಗೆ ಅವರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಈ ನಿಲುವಳಿ ಸೂಚನೆಯನ್ನು ತಾವು ಪರಿಗಣನೆಗೆ ತೆಗೆದುಕೊಂಡು, ಅದರ ಮೇಲೆ ಚರ್ಚೆ ಮಾಡಿ ಒಂದು ತೀರ್ಮಾನ ಮಾಡುವುದಕ್ಕೆ ಈ ಸಭೆಗೆ ಅಧಿಕಾರ ಇದೆಯೆ ? ಅಧಿಕಾರ ಇಲ್ಲದಿದ್ದರೆ, ನಮಗೆ ಉಳಿದಿರತಕ್ಕಂಥ ಒಂದೇ ಮಾರ್ಗವೆಂದರೆ, ಕಾನೂನು ಮಂತ್ರಿಗಳು ಎತ್ತಿರತಕ್ಕಂಥ ಕ್ರಿಯಾಲೋಪಕ್ಕೆ ತಮ್ಮ ತೀರ್ಪನ್ನು ಇಲ್ಲವೇ ತಮ್ಮ ಹುಕುಂನ್ನು ಕೊಡಬೇಕು. ಆ ಸದನದ ಬಗ್ಗೆ ಈ ಸದನಕ್ಕೆ ಇರುವ ಒಂದೇ ಒಂದು ಅಧಿಕಾರವೆಂದರೆ, ಆ ಸದನವನ್ನು ಇಟ್ಟುಕೊಳ್ಳಬೇಕೇ ಅಥವಾ ಅದನ್ನು ರದ್ದು ಮಾಡಬೇಕೆ ಎಂಬ ಬಗ್ಗೆ ಒಂದು ನಿರ್ಣಯವನ್ನು ಕೈಕೊಳ್ಳತಕ್ಕಂಥ ಅಧಿಕಾರ ಮಾತ್ರ ಇದೆ. ಅಲ್ಲಿಂದ ಮುಂದಕ್ಕೆ ನಮ್ಮ ರಾಜ್ಯಾಂಗದ ಚೌಕಟ್ಟಿನಲ್ಲಿ ಆ ಸದನದ ಕಾರ್ಯಕಲಾಪದ ಬಗ್ಗೆ ಅಲ್ಲಿನ ಸಭಾಪತಿಯವರು ತೆಗೆದುಕೊಂಡ ನಿರ್ಣಯದ ಬಗ್ಗೆಯಾಗಲೀ, ಅಲ್ಲಿನ ಅಧಿವೇಶನವನ್ನು ಮತ್ತೆ ಕರೆಯಬೇಕೆಂದು ಈ ಸದನದ ಮೂಲಕ ನಿರ್ದೇಶನ ಕೊಡುವ ಬಗ್ಗೆಯಾಗಲೀ ನಮ್ಮ ಈ ಸಭೆಯ ನಿಯಮಾವಳಿಯ ಚೌಕಟ್ಟಿನಲ್ಲಿ ಯಾವ ಅಧಿಕಾರವೂ ಇಲ್ಲ. ಆದ್ದರಿಂದ ಈ ವಿಚಾರವನ್ನು ತುಂಬಾ ದೂರ ಎಳೆಯುವುದಕ್ಕೆ ತಾವು ಅವಕಾಶ ಕೊಡುವುದರ ಮೂಲಕ ಆ ಸಭೆಯ ಘನತೆ ಮತ್ತು ಗೌರವಗಳಿಗೆ ಆಗೌರವ ತೋರಿಸುವುದಕ್ಕೆ ತಾವು ಹೋಗಬೇಡಿ ಎಂದು ತಮ್ಮಲ್ಲಿ ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ,

ಶ್ರೀ ಎಸ್. ಬಂಗಾರಪ್ಪ.—ಈ ಸದನವನ್ನು ಮುಂದೂಡುವ ಬಗ್ಗೆ ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಆ ಸದನದ ಸಭಾಪತಿಯವರಿಗೆ ಇದೆ, ಅದನ್ನು ಪ್ರಶ್ನೆ ಮಾಡುವ ಅಧಿಕಾರ ನಮಗಿಲ್ಲ ಎಂದು ಮಾನ್ಯ ದೇವೇಗೌಡರು ಹೇಳಿದರು. ನಾನು ಇಲ್ಲಿ ಆ ಸದನಕ್ಕೆ ಇರುವಂತಹ ಅಧಿಕಾರವನ್ನು ಪ್ರಶ್ನೆ ಮಾಡುತ್ತಿಲ್ಲ. ಈ ಮಾತನ್ನು ನಾನು ಮೊದಲೇ ಹೇಳಿದ್ದೇನೆ.

ಅಧ್ಯಕ್ಷರು.—ಆದರೂ ತಾವು ನೋಟೀಸ್ ಕೊಟ್ಟಿದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸಂಸದೀಯ ನಡವಳಿಕೆಗಳನ್ನು ಮತ್ತು ಸಂಸದೀಯ ಸಂಪ್ರದಾಯಗಳನ್ನು ಕಡೆಗಣಿಸುವುದರ ಮೂಲಕ ಆ ಸಭೆಯವರು ತೆಗೆದುಕೊಂಡ ತೀರ್ಮಾನದ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಇಂತಹ ಸಂಪ್ರದಾಯ ಇಲ್ಲಿಯವರೆಗೆ ನಡೆದಿಲ್ಲ. ಅಷ್ಟೇ ಅಲ್ಲ, ಸಂಸದೀಯ ವ್ಯವಹಾರಗಳು ನಡೆಯುತ್ತಿರುವ ಯಾವ ಒಂದು ದೇಶದಲ್ಲಿಯೂ ಕೂಡ ಇಂತಹ ಒಂದು ಪ್ರಯತ್ನ ನಡೆದಿಲ್ಲ. ಬೇರೆ ಕಾರ್ಯಕಲಾಪಗಳನ್ನು ಮುಂದಕ್ಕೆ ಹಾಕಿ ಇದನ್ನು ಚರ್ಚೆ ಮಾಡಬೇಕೆಂದು ಅವರು ತಮ್ಮ ನಿಲುವಳಿ ಸೂಚನೆಯಲ್ಲಿ ತಿಳಿಸಿದ್ದಾರೆ. What is the central purpose of this adjournment motion? Should we sit in judgment over what happened in the other House? Sir, it is not permissible under the rules and it is also not permissible under the Constitution.

ಶ್ರೀ ಎಸ್. ಬಂಗಾರಪ್ಪ.—ಆ ಸದನವನ್ನು ಮುಂದೂಡುವ ಅಧಿಕಾರ ಅಲ್ಲಿನ ಸಭಾಪತಿ ಅವರಿಗಿದ್ದರೂ ಸಹ......

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈಗ ಎತ್ತಿರುವ ಕ್ರಿಯಾ ಲೋಪದ ಬಗ್ಗೆ ತಾವು ರೂಲಿಂಗ್ ಕೊಡಬೇಕಾಗುತ್ತದೆ. ಏಕೆಂದರೆ......

ಶ್ರೀ ಎಸ್. ಬಂಗಾರಪ್ಪ.—ಆ ಕ್ರಿಯಾಲೋಪದ ಬಗ್ಗೆ ಮಾತನಾಡಲು ನಮಗೆ ಯಾವ ಹಕ್ಕೂ ಇಲ್ಲವೇ?

ಶ್ರೀ ಹೆಚ್ ಡಿ. ದೇವೇಗೌಡ.—ವಿರೋಧಪಕ್ಷದ ನಾಯಕರಿಗೆ ಸಂವಿಧಾನದ ಚೌಕಟ್ಟಿನಲ್ಲಿ ಇರುವಂತಹ ಹಕ್ಕನ್ನು ಕಿತ್ತುಕೊಳ್ಳಲು ಯಾರಿಗೂ ಅಧಿಕಾರ ಇಲ್ಲ. ಅವರ ಹೇಳಿಕೆಯನ್ನು ಮೊಟಕು ಮಾಡಬೇಕು ಅವರು ಈ ಬಗ್ಗೆ ಸಮರ್ಥನೆ ಮಾಡುವುದನ್ನು ಮೊಟಕುಗೊಳಿಸಬೇಕು ಎಂಬುದು ನನ್ನ ಉದ್ದೇಶವಲ್ಲ. ಆದರೆ ಈ ಒಂದು ನಿಲುವಳಿ ಸೂಚನೆಯ ಬಗ್ಗೆ ಪೂರ್ವಭಾವಿಯಾಗಿ ಇಲ್ಲಿ ಚರ್ಚೆ ಮಾಡಲು ಇಲ್ಲವೇ ಸಮರ್ಥನೆ ಮಾಡಲು ತಾವು ಅವಕಾಶ ಕೊಟ್ಟಲ್ಲಿ ಮುಂದೆ ಇತಿಹಾಸಕಾರರು ಈ ಸಭೆಯಲ್ಲಿ ಒಂದು ಕೆಟ್ಟ ಸಂಪ್ರದಾಯ ಹಾಕಿದ್ದಾರೆಂದು ಹೇಳುತ್ತಾರೆ. ಆದ್ದರಿಂದ ಅಲ್ಲಿನ ಕಾರ್ಯಕಲಾಪಗಳ ಬಗ್ಗೆ ಚರ್ಚೆ ಮಾಡಲು ಈ ಸದನಕ್ಕೆ ಯಾವ ಅಧಿಕಾರವೂ ಇಲ್ಲ. It is the basic knowledge of the parliamentary system. Sir, I am very sorry. I humbly submit. Please give your ruling on the point of order raised by the Hon'ble Minister.

ಅಧ್ಯಕ್ಷರು.—ವಿಧಾನ ಪರಿಷತ್ತಿನಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಚರ್ಚೆ ಮಾಡುವ ಅಧಿಕಾರ ಈ ಸದನಕ್ಕೆ ಇಲ್ಲದಿರುವುದರಿಂದ ನಿಮ್ಮ ನಿಲುವಳಿ ಸೂಚನೆಯನ್ನು ತಳ್ಳಿಹಾಕಬೇಕೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆದಕಾರಣ ತಾವು ಅವರ ಕ್ರಿಯಾ ಲೋಪದ ಬಗ್ಗೆ ಮಾತ್ರ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಮಗೆ ಅಧಿಕಾರ ಇಲ್ಲ, ಇದನ್ನು ಇಲ್ಲಿ ಅಡ್ಮಿಟ್ ಮಾಡುವುದಕ್ಕೆ ಬರುವುದಿಲ್ಲ ಎಂದುಕೊಂಡು ಈ ನಿಲುವಳಿ ಸೂಚನೆಯ ಅಡ್ಮಿಸಿಬಿಲಿಟಿಯ ಬಗ್ಗೆಯೇ ಕ್ರಿಯಾಲೋಪ ಎತ್ತಿದ್ದಾರೆ. both the things are interlinked here. ಆದ್ದರಿಂದ ತಾವು this matter cannot be taken up and therefore I with-held my consent ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಈ ವಿಷಯ ಏನಿದ್ದರೂ ಆ ಸಭೆಯ ಸಭಾಪತಿಯವರ ವ್ಯಾಪ್ತಿಯಲ್ಲಿ ಬರುವ ವಿಷಯವಾದ್ದರಿಂದ, ಈ ಬಗ್ಗೆ ನಿಲುವಳಿ ಸೂಚನೆ ತರುವುದಕ್ಕೆ ಬರುವುದಿಲ್ಲ. ಆದ್ದರಿಂದ ನಿಮ್ಮ ನಿಲುವಳಿ ಸೂಚನೆಯನ್ನು ಒಪ್ಪಬಾರದೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಆ ಕಡೆಯವರ ವಾದವನ್ನು ನಾನು ಸಂಪೂರ್ಣವಾಗಿ ಕೇಳಿದ್ದೇನೆ. ಆದರೆ ನಾನು ಈ ಬಗ್ಗೆ ಯಾವ ಮಾತನ್ನು ಹೇಳಬೇಕೆಂದು ಹೊರಟಿದ್ದೇನೋ ಅದನ್ನು ಅವರು ಪೂರ್ತಿಯಾಗಿ ಕೇಳಿದ್ದರೆ, ಅವರು ಮಧ್ಯದಲ್ಲಿ ಕ್ರಿಯಾ ಲೋಪವನ್ನು ಎತ್ತುವ ಅವಶ್ಯಕತೆಯೇ ಇರಲಿಲ್ಲ. ಈಗ ಇಲ್ಲಿರುವ ಪ್ರಶ್ನೆ ಏನೆಂದರೆ, ಆ ಸಭೆಯನ್ನು ಏನು ಮುಂದೂಡಲಾಗಿದೆ......

ಶ್ರೀ ರಾಜವರ್ಧನ್.—ಇದರ ಬಗ್ಗೆ ಚರ್ಚೆ ಮಾಡುವುದು ಸರಿಯಲ್ಲ ಎಂದು ಹೇಳುತ್ತಿರುವಾಗ ಅವರು ಮತ್ತೆ ಅದನ್ನೇ ಹೇಳಲು ಹೊರಟಿದ್ದಾರೆ ?

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ತಾವು ಅವರು ಎತ್ತಿರುವಂತಹ ಕ್ರಿಯಾ ಲೋಪದ ಬಗ್ಗೆ ಮಾತ್ರ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಎತ್ತಿರುವ ಕ್ರಿಯಾಲೋಪ ಸರಿಯೋ ಅಥವಾ ತಪ್ಪೋ ಎಂದು ತಾವು ಹೇಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಮೊದಲು ನಾವು ಆ ಬಗ್ಗೆ ಹೇಳುವುದು ಬೇಡವೇ ?

೧-೦೦ ಪಿ. ಎಂ.

ಶ್ರೀ ವೀರಪ್ಪ ಮೊಯಿಲಿ.—ತಾವು ಅನುಮತಿ ಕೊಟ್ಟರೆ ಕ್ರಿಯಾಲೋಪದ ಬಗ್ಗೆ ನಾನೂ ಕೂಡ ಪ್ರತ್ಯೇಕವಾಗಿ ಮಾತನಾಡಬೇಕೆಂದಿದ್ದೇನೆ. ಆ ಕಡೆಯಿಂದ ಮೂರು ನಾಲ್ಕು ಜನ ಎದ್ದುನಿಂತು ಮಾತನಾಡಿದರೂ ಕೂಡ ನಾವು ಆಕ್ಷೇಪಣೆ ಮಾಡಲಿಲ್ಲ. ಈಗ ಏನಾಗಿದೆಯೆಂದರೆ, ಇಂಗ್ಲೀಷಿನಲ್ಲಿ ವ್ಯವಹಾರ ಮಾಡಿ ಮಾಡಿ ಕನ್ನಡದಲ್ಲಿ ಆ ಪದವನ್ನು ಬಳಸಲಿಕ್ಕೆ ಕಷ್ಟವಾಗುತ್ತದೆ. ಸನ್ಮಾನ್ಯ ಮಂತ್ರಿಗಳು ಸಹಾ ಓದಿದರು. ನನಗನ್ನಿಸುತ್ತದೆ ಇದರ ಬಗ್ಗೆ ಅವರಿಗೆಲ್ಲಾ ಓರಿಯೆಂಟೇಷನ್ ಕ್ಲಾಸ್ ಮಾಡಿದರೆ ಒಳ್ಳೆಯದು. ಎಂದರೆ ಇಂಗ್ಲೀಷ್‌ನಿಂದ ಕನ್ನಡಕ್ಕೆ, ಕನ್ನಡದಿಂದ ಇಂಗ್ಲೀಷಗೆ ಅನುವಾದ ಎಂಬುದರ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ.—ಸಭಾಧ್ಯಕ್ಷರೇ ನಿಲುವಳಿ ಸೂಚನೆಗಾಗಿ ತಮ್ಮ ಒಪ್ಪಿಗೆಯನ್ನು ಪಡೆಯುವುದಕ್ಕೋಸ್ಕರ ನಾವು ಪ್ರಯತ್ನ ಪಡತಕ್ಕ ಸಂದರ್ಭದಲ್ಲಿ, ಕ್ರಿಯಾಲೋಪ ಎತ್ತಿರತಕ್ಕ ವಿಚಾರದಲ್ಲಿ ತಾವು ಹೇಳಿದಿರಿ ಕ್ರಿಯಾಲೋಪದ ಬಗೆ ಮಾತನಾಡಿ, ನಿಲುವಳಿ ಸೂಚನೆ ಒಪ್ಪಬೇಕೋ ಬಿಡಬೇಕೋ ಎನ್ನತಕ್ಕ ವಿಚಾರ ಮತ್ತೊಂದು ಪ್ರಶ್ನೆ ಎನ್ನುವುದನ್ನು ತಾವು ಹೇಳಿದಿರಿ. ಕ್ರಿಯಾಲೋಪವನ್ನು ಮಾನ್ಯ ಸಚಿವರು ಎತ್ತಿರತಕ್ಕ ಸಂದರ್ಭದಲ್ಲಿ ಯಾವ ಒಂದು ನಿಲುವಳಿ ಸೂಚನೆಯನ್ನು ತಮ್ಮ ಒಪ್ಪಿಗೆಗೋಸ್ಕರ ಕಳುಹಿಸಿಕೊಟ್ಟಿದ್ದೇವೆ, ಅದೇ ನಿಲುವಳಿ ಸೂಚನೆಯನ್ನು ಉಲ್ಲೇಖ ಮಾಡಿ ಅವರು ಕೂಡ ಮಾತನಾಡಿದ್ದಾರೆ. ಕ್ರಿಯಾಲೋಪದ ಹೆಸರಿನಲ್ಲಿ ಪ್ರಸ್ತಾಪ ಮಾಡಿದರೂ ಕೂಡ, ಈ ವಿಚಾರ ಪ್ರಸ್ತಾಪ ಆಗುವುದಕ್ಕೆ ಅಧಿಕಾರವಿಲ್ಲ ಎನ್ನತಕ್ಕ ಮಾತು ಹೇಳಿದಾಗ ಅಂತಿಮವಾಗಿ ಈ ನಿಲುವಳಿ ಸೂಚನೆಯನ್ನು ತಾವು ಒಪ್ಪಿಗೆಗಾಗಿ ಒಳಪಡಿಸುವುದಕ್ಕೆ ಅವಕಾಶ ಕೊಡಬಾರದು, ಇದನ್ನು ಚರ್ಚೆ ಮಾಡತಕ್ಕ ಅವಶ್ಯಕತೆ ಇಲ್ಲ ಎನ್ನುವುದೇ ಇದರ ಅರ್ಥ.

ಅಧ್ಯಕ್ಷರು.—ನಿಲುವಳಿ ಸೂಚನೆಯಾಗಿ ಈ ಸದನದ ವ್ಯಾಪ್ತಿಯಲ್ಲಿ ಇದು ಬರುವುದಿಲ್ಲ ಎನ್ನುವುದು ಅವರ ವಾದ.

ಶ್ರೀ ಎಸ್. ಬಂಗಾರಪ್ಪ.—ಅವರು ಎಷ್ಟೇ ಕ್ರಿಯಾಲೋಪ ಎತ್ತಿದರೂ ಅದು, admissibility or is Admissibility of the Adjournment ಬಂದು ನಿಲ್ಲುತ್ತದೆ.

ಅಧ್ಯಕ್ಷರು.—ಪ್ರೈಮಾಫೇಸಿಯಾಗಿ ಈ ನಿಲುವಳಿ ಸೂಚನೆಗೆ ಅವಕಾಶ ಇಲ್ಲವೆಂದು ಕಂಡು ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಕ್ರಿಯಾಲೋಪ ಎತ್ತಿ ಹೇಳತಕ್ಕ ಅವಶ್ಯಕತೆ ಇಲ್ಲ. ಅದಕ್ಕಾಗಿ ನಾನು ಒಂದು ಮಾತನ್ನು ಹೇಳುತ್ತಾ ಇದ್ದೇನೆ. ಅದೆಂದರೆ, ಸಂವಿಧಾನದ ಪ್ರಕಾರ in the

Composition of legislature refers to three wings, ಯಾವುವೆಂದರೆ, ಗವರ್ನರ್, ವಿಧಾನಸಭೆ, ಮತ್ತು ವಿಧಾನಪರಿಷತ್, ಇದರಲ್ಲಿ ಒಂದು ಇಲ್ಲವೆಂದರೆ ಸಂವಿಧಾನದ ಪ್ರಕಾರ ಬ್ರೇಕ್ ಡೌನ್ ಆಗುತ್ತದೆ. ಇದು ಬಹಳ ಮುಖ್ಯವಾದುದು.

ಶ್ರೀ ಎಂ. ರಘುಪತಿ.—ಅದು ಏನು ಎಂದು ಎಕ್ಸ್‌ಪ್ಲೈನ್ ಮಾಡಿ ಹೇಳಿ. ಇಲ್ಲದಿದ್ದರೆ ಸಂವಿಧಾನ ಬ್ರೇಕ್ ಡೌನ್ ಬರುತ್ತದೆ ಸಂವಿಧಾನದಲ್ಲಿ ಈ ರೀತಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣ ಕುಮಾರ್. ಅಧ್ಯಕ್ಷರೇ, ವಿಷಯ ತರಲೇಬಾರದು ಎನ್ನುವಾಗ ನೀವು ಹೊಸ ಅಧ್ಯಯ ಮಾಡಲಿಕ್ಕೆ ಹೋದರೆ ಅದು ತಮಗೆ ಬಿಟ್ಟಿದ್ದುದು.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ನಾಳೆ ಲೋಕಸಭೆ ಬಗ್ಗೆ ಚರ್ಚೆ ಮಾಡುವುದಕ್ಕೆ ಇಲ್ಲಿ ಆಗುತ್ತದೆಯೋ ? ತಮ್ಮ ಛೇಂಬರ್‌ನಲ್ಲೆಯೇ ಇದನ್ನು ರಿಜೆಕ್ಟ್ ಮಾಡಬೇಕಾಗಿತ್ತು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ರಘುಪತಿಯವರೇ, ನಿಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದ ಬಡ್ಜೆಟ್ ಮೇಲೆ ಭಾಷಣ ಮಾಡಿದರು. ಕೇಂದ್ರ ಸರ್ಕಾರದವರು ಉತ್ತರ ಕೊಡುವುದಕ್ಕೆ ಇಲ್ಲಿಗೆ ಬಂದಿದ್ದರೇ ? ಕೇಂದ್ರ ಸರ್ಕಾರದ ಬಡ್ಜೆಟ್ ಬಗ್ಗೆ ನೂರಾರು ಸಾರಿ ಮಾತನಾಡಿದ್ದೀರಿ.

ಶ್ರೀ ಎಂ. ರಘುಪತಿ.—ಇದರ ಬಗ್ಗೆ ಅವಕಾಶ ಇಲ್ಲ ಇದು ಮೊಂಡುವಾದ ಇದು ಸರಿಯಾದ ವಾದವಲ್ಲ. ಪಾರ್ಲಿಮೆಂಟ್ ಬಗ್ಗೆ ಮಾತನಾಡಲಿಲ್ಲ ಅವರು, ಪಾರ್ಲಿಮೆಂಟ್‌ನಲ್ಲಿ ಮಂಡನೆಯಾಗಿರುವ ವಿಷಯದ ಬಗ್ಗೆ ಮಾತನಾಡಿದರು. ಬಡ್ಜೆಟ್ ಬಗ್ಗೆ ಚರ್ಚೆ ಮಾಡಲಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಪಾಯಿಂಟ್ ಆಫ್ ಆರ್ಡರ್ ಹೇಳಿದ್ದಾರೆ. ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ. ನಂತರ ನಿಮಗೆ ರೂಲಿಂಗ್ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ ನಾವು ಯಾವ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೆವೋ ಅದರ ಬಗ್ಗೆ ಅಂತಿಮವಾಗಿ ನಿರ್ಣಯ ಕೊಡತಕ್ಕವರು ನೀವು. ಏನನ್ನು ನಾವು ಹೇಳಬೇಕೋ ಅದನ್ನು ನೀವೇ ಹೇಳಿಕೊಟ್ಟು ಬಿಡಿ. ಮಾನ್ಯ ರಘುಪತಿಯವರು ಏನೋ ಇವತ್ತು ಬಹಳ ವೇಗವಾಗಿ ಇದ್ದ ಹಾಗೆ ಕಾಣುತ್ತದೆ.

ಅಧ್ಯಕ್ಷರು.—ನಾನೇನು ಹೇಳಿಕೊಡಲಿ.

ಶ್ರೀ ಎಂ. ರಘುಪತಿ.—ನ್ಯಾಯವಾಗಿ ಇದ್ದಿದ್ದರೆ ಈ ರೀತಿ ಮಾತನಾಡುತ್ತಿರಲಿಲ್ಲ. ವಿಧಾನ ಸಭೆಯ ಸಂಪ್ರದಾಯವನ್ನು ನೀವು ಮುರಿಯುತ್ತಾ ಇದ್ದೀರಿ ಮೂಲಭೂತವಾಗಿ ಈ ವಿಷಯವನ್ನು ಯಾರೂ ಒಪ್ಪಿಕೊಳ್ಳುವುದಿಲ್ಲ. ಅಧ್ಯಕ್ಷರೇ ಇಷ್ಟೊತ್ತಿಗಾಗಲೇ ತಾವು ರೂಲಿಂಗ್ ಕೊಡಬೇಕಾಗಿತ್ತು. ಅದಕ್ಕೆ ನಾನು ವೇಗವಾಗಿರುವುದು.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ—ಅಧ್ಯಕ್ಷರೇ ಈ ವಿಚಾರವನ್ನು ಪ್ರಸ್ತಾಪ ಮಾಡಿದ ಕೂಡಲೇ ಇವರ ಸೀರಿಯಸ್ ವಾದವನ್ನು ಕೇಳುವುದಕ್ಕಲ್ಲ ನಾವು ವಿಚಾರ ಪ್ರಸ್ತಾಪ ಮಾಡುವುದು. ನಮಗಿರತಕ್ಕ ಹಕ್ಕನ್ನು ಚಲಾವಣೆ ಮಾಡಲು ತಾವು ನಮಗೆ ರಕ್ಷಣೆಯನ್ನು ಕೊಡಬೇಕು. ಏಕೆಂದರೆ ವಿಚಾರವನ್ನು ಪ್ರಸ್ತಾಪ ಮಾಡಿ ಕಾಲಕ್ಕಾಗಿ ಪರದಾಡತಕ್ಕ ಸಂಧರ್ಭ, ತಮ್ಮ ಕಾಲದಲ್ಲಿ ಉದ್ಭವವಾಗುವುದಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ ಆ ಒಂದು ಜವಾಬ್ದಾರಿ ತಮಗಿದೆ ಅದಕ್ಕೆ ಸಂಪೂರ್ಣವಾದ ಸಹಕಾರವನ್ನು ನಾವು ಕೊಡುತ್ತೇವೆ.

ಅಧ್ಯಕ್ಷರು.—ನೀವು ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಹೇಳಿ.

SRI S. BANGARAPPA- point of order is linked with the admissibility or other wise of the motion. ಅವರು ಏನು ಹೇಳಿದ್ದಾರೆ ಎಂಬುದು ರೇಕಾರ್ಡ್‌ನಲ್ಲಿದೆ.

ಅಧ್ಯಕ್ಷರು.—ಅವರು ಈ ವಿಷಯುವನ್ನು ಎತ್ತಲೇ ಬಾರದು ಎಂದು ಹೇಳಿದ್ದಾರೆ. ಇದು ಕೌನ್ಸಿಲ್ ಚೇರ್‌ಮೇನ್‌ರವರಿಗೆ ಸಂಬಂಧಪಟ್ಟ ವಿಷಯ. ಈ ವಿಷಯ ಈ ಸದನದ ವ್ಯಾಪ್ತಿಯಲ್ಲಿ ಮತ್ತು ಈ ಸದನದ ಸದಸ್ಯರ ಹಕ್ಕಿನ ಚೌಕಟ್ಟಿನೊಳಗೆ ಬರುವುದಿಲ್ಲ ಎಂಬುದು ಅವರ ವಾದ. ಆ ಚೌಕಟ್ಟಿನೊಳಗೆ ಬರದಿದ್ದರೆ ನೀವು ಹೇಳಿ ? ಈ ವಿಷಯದಲ್ಲಿ ಸ್ಪೀಕರ್‌ಗೆ ಹಕ್ಕು ಇದೆ ಎನ್ನುವುದರ ಬಗ್ಗೆ ಯಾವುದಾದರೊಂದು ರೂಲಿಂಗ್ ಇದ್ದರೆ ನೀವು ತೋರಿಸಿ.

ಶ್ರೀ ಎಸ್. ಬಂಗಾರಪ್ಪ.—ಆ ಸದನಕ್ಕೆ ಸಂಬಂಧಪಟ್ಟ ಕಾರ್ಯಕಲಾಪಗಳೇ ಇರಬಹುದು ಅಥವಾ ಬೇರೆ ವಿಚಾರಗಳೇ ಇರಬಹುದು. ಈ ಸದನದಲ್ಲಿ ಚರ್ಚೆಗೆ ಬರಬಾರದು ಎನ್ನತಕ್ಕ ವಿಚಾರವನ್ನು ವ್ಯಕ್ತಪಡಿಸಿದ್ದೀರಿ. ಹೇಗೆ ಬರಬಹುದು, ಯಾವ ರೂಪದಲ್ಲಿ ಬರಬಹುದು ಎಂಬುದು ಹೇಳುವುದು ನಮ್ಮ ಕರ್ತವ್ಯದ ಪ್ರಶ್ನೆ.

ಅಧ್ಯಕ್ಷರು.—ಅವರು ಏನು ಹೇಳುತ್ತಾರೆಂದರೆ, ಈ ವಿಷಯ ಈ ಸದನದ ವ್ಯಾಪ್ತಿಗೆ ಬರುವುದಿಲ್ಲ. ಆ ಸದನವನ್ನು ಕೌನ್ಸಿಲ್ ಚೇರ್‌ಮೇನ್ ಮುಂದಕ್ಕೆ ಹಾಕಿದ್ದಾರೆ. ಆ ಮೇಲೆ ನಿಲುವಳಿ ಸೂಚನೆ ನೀವು ತಂದಿದ್ದೀರಿ. ಅವರು ಈ ಬಗ್ಗೆ ಏನು ಹೇಳುತ್ತಾರೆಂದರೆ ಈ ನಿಲುವಳಿ ಸೂಚನೆ ಈ ವ್ಯಾಪ್ತಿಯೊಳಗೆ ಬರುವುದಿಲ್ಲ. ಆದ್ದರಿಂದ ಅನುಮತಿ ಕೊಡುವುದರ ಬಗ್ಗೆ ಸಹಿತ ಚರ್ಚೆಗೆ ಅವಕಾಶ ಕೊಡಬಾರದು. ಈ ವಿಷಯವನ್ನು ನಿಮ್ಮ ಚೆಂಬರ್‌ನಲ್ಲೇ ರಿಜೆಕ್ಟ್ ಮಾಡಬೇಕಾಗಿತ್ತು, ಪ್ರಿಲಿಮಿನರಿ ಚರ್ಚೆ ಮಾಡುವುದಕ್ಕೆ ಸಹಾ ಈ ವಿಷಯ ಬರುವುದಿಲ್ಲ ಎಂಬುದು ಅವರ ವಾದ ಅವರ ಬಗ್ಗೆ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಆ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ನೀವೇ ತೀರ್ಮಾನ ಕೊಡಬೇಕು.

ಅಧ್ಯಕ್ಷರು.—ವಿಷಯ ಡಿವಿಯೇಷನ್ ಆಗಬಾರದೆಂದು ತಮ್ಮ ನೆನಪಿಗೆ ತಂದಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳತಕ್ಕ ವಾದವನ್ನು ಪುನಃ ನಮ್ಮ ನೆನಪಿಗೆ ತಂದು ಕೊಟ್ಟಿದ್ದೀರಿ. ಅದರ ಬಗ್ಗೆ ತಮಗೆ ಅಭಿನಂದಿಸುತ್ತೇನೆ

ಯಾವಾಗಲೂ ಎರಡೇ ಹಳಿ ಇರಬೇಕು. ೮-೧೦ ಹಳಿ ಇದ್ದರೆ ತೊಂದರೆಯಾಗುತ್ತದೆ. ನಾನು ಹಳಿಯ ಮೇಲೇ ಹೋಗುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೇ, ಇವತ್ತು ತಾವು ಮುಂದಿಟ್ಟಿರತಕ್ಕ ವಿಚಾರದ ಮೇಲೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಅವರು ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿದ್ದಾರೆ. ಅದರ ಬಗ್ಗೆ ಮಾತ್ರ ನೀವು ಮಾತನಾಡಿ,

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳುವುದನ್ನು ಕೇಳತಕ್ಕಂಥ ಸೌಜನ್ಯವನ್ನು ತಾವು ತೋರಿಸಿದರೆ ಬಹಳ ಉಪಕಾರವಾಗುತ್ತದೆ. ಅವರು ಆಗಲೇ ಹೇಳಿ ಆಯಿತು.

ಶ್ರೀ ರಾಜನರ್ಧನ್.—ಅವರು ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾತನಾಡುತ್ತಿಲ್ಲ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ,

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಈ ಕಾರ್ಯಕಲಾಪವನ್ನು ಅವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ,

(ಗೊಂದಲ)

ಅಧ್ಯಕ್ಷರು.—ರೂಲಿಂಗ್ ಕೊಡುವವನು ನಾನು. ನೀವೂ ಅಲ್ಲ, ಅವರೂ ಅಲ್ಲ. ಮಾನ್ಯ ಮಂತ್ರಿಗಳು ತಮ್ಮ ಉತ್ತರವನ್ನು ಕೊಟ್ಟಿದ್ದಾರೆ. ನೀವು ಅದರ ಬಗ್ಗೆ ಹೇಳುವುದನ್ನು ನಾನು ಕೇಳಿ ಅನಂತರ

ರೂಲಿಂಗ್ ಕೊಡುತ್ತೇನೆ. ನೀವು ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಮಾತ್ರ ಮಾತನಾಡಿ. ತಾವು ವಿಷಯಾಂತರ ಮಾಡಬೇಡಿ ಬಂಗಾರಪ್ಪನವರೇ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಈ ಸದನದಲ್ಲಿ ಮಾತನಾಡತಕ್ಕಂಥ ಅವಕಾಶ ವನ್ನು ಕಲ್ಪಿಸಿಕೊಳ್ಳುವುದಕ್ಕೇ ಚರ್ಚೆ ಮಾಡಬೇಕೋ ಏನೋ ಎಂದೆನಿಸುತ್ತದೆ ವಿರೋಧ ಪಕ್ಷದ ಅಧಿಕಾರ ವನ್ನು ಚಲಾವಣೆ ಮಾಡುವುದಕ್ಕೆ ನಮಗೆ ನೀವು ರಕ್ಷಣೆ ಕೊಡಬೇಕು. ನಮ್ಮ ಹಕ್ಕನ್ನು ರಕ್ಷಿಸತಕ್ಕವರು ತಾವು ನೀವು ನಮಗೆ ರಕ್ಷಣೆ ಕೊಡುತ್ತೀರೆಂದು ನಾನು ನಂಬಿಕೊಂಡಿದ್ದೇನೆ.

ಶ್ರೀ ಜಿ. ನಾರಾಯಣಕುಮಾರ್.—ಸದನದಲ್ಲಿ ಸಮಯದಲ್ಲಿ ದುರುಪಯೋಗ ವಾಗಬಾರದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನಾವು ಮಾತನಾಡುವುದು ಬೇಡ ಎಂದರೆ ನಮ್ಮ ಅಭ್ಯಂತರ ಏನೂ ಇಲ್ಲ. ಬರೀ ಅವರಿಂದಲೇ ಕೇಳುತ್ತೇವೆಂದರೂ ನಮ್ಮ ಅಭ್ಯಂತರ ಇಲ್ಲ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ನೀವು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ. ನಾನು ತಮ್ಮ ಅವಗಾಹನೆಗೆ ತರುವುದೇ ನೆಂದರೆ ಈ ವಿಷಯವನ್ನು ಮಂಡನೆ ಮಾಡಿದ ಸಂದರ್ಭದಲ್ಲಿ ಮಾನ್ಯ ಸಚಿವರುಗಳಾದ ಲಕ್ಷ್ಮೀಸಾಗರ್ ರವರು, ಬೊಮ್ಮಾಯಿಯವರು ಹಾಗೂ ದೇವೇಗೌಡರು ಎತ್ತಿರತಕ್ಕಂಥ ಕ್ರಿಯಾಲೋಪದ ಬಗ್ಗೆ ನಾನು ಮಾತನಾಡುತ್ತೇನೆ. ಈ ದೃಷ್ಟಿಯಿಂದ ಈ ವಿಚಾರವನ್ನು ನಾನು ಸ್ವಲ್ಪ ಹೇಳಬೇಕಾಗಿದೆ ಲೆಜಿಸ್ಲೇಚರ್ ಎನ್ನತಕ್ಕ ವ್ಯಾಖ್ಯಾನ ಏನು ಇದೆ, ಇದರಲ್ಲಿ ಗೌರ್ನರ್, ಶಾಸನ ಸಭೆಗಳಾದ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಬರುತ್ತದೆ. ಸಭೆಯಲ್ಲಿ ಅಧ್ಯಕ್ಷರು ಇರುತ್ತಾರೆ, ಅಧ್ಯಕ್ಷರು ಕೊಡುವಂಥ ರೂಲಿಂಗ್‌ಗೆ ನಾವೆಲ್ಲರೂ ತಲೆ ಬಾಗಬೇಕಾಗುತ್ತದೆ. ನಿರ್ಣಯ ಕೊಡಬೇಕಾದಾಗ ಆ ಕಡೆಯ ಸದಸ್ಯರುಗಳ ಮತ್ತು ಈ ಕಡೆಯ ಸದಸ್ಯರುಗಳ ಅಭಿಪ್ರಾಯಗಳನ್ನು ಕೇಳಿ ರೂಲಿಂಗ್ ಕೊಡುವುದು ಸಂಪ್ರದಾಯ. ಆದರೆ ಇಲ್ಲಿ ಸರ್ಕಾರದವರು ಏನಾದರೂ ಮಾಡಿ ಈ ಬಾಟ್ಲಿಂಗ್ ಹಗರಣವನ್ನು ಮೇಲ್ಮನೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬಾರದೆಂದು ಈ ತಂತ್ರವನ್ನು ಮಾಡಿದ್ದಾರೆ. ಆ ಸದನವನ್ನು ಮುಂದೂಡುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಿದ್ದಾರೆ.

ಶ್ರೀ ಎಂ ರಘುಪತಿ.—ಸದನವನ್ನು ಮುಂದೂಡುವುದಕ್ಕೆ ಪರಿಷತ್ತಿನ ಸಭಾಪತಿಯವರು ರೂಲಿಂಗ್ ಕೊಟ್ಟಿದ್ದಾರೆ. ಇದರಲ್ಲಿ ಸರ್ಕಾರದ ಕೈವಾಡ ಏನೂ ಇಲ್ಲ.

(ಗೊಂದಲ)

ಇದರಲ್ಲಿ ಸರ್ಕಾರದ ಹಸ್ತಕ್ಷೇಪ ಏನೂ ಇಲ್ಲ.

(ಗೊಂದಲ)

ಆ ಸದನದ ಚೇರ್ಮನ್‌ರ ನಡವಳಿಕೆಗಳ ಬಗ್ಗೆ ಇಲ್ಲಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಈ ಸದನದ ಹಕ್ಕುಗಳು ಏನು ಇವೆ, ಅದನ್ನು ಮಿತಿಮೀರಿ ಕೆಲಸ ಮಾಡುತ್ತಿದ್ದೀರಿ. ಏನು ರೂಲ್ಸ್‌ಗಳು ಇವೆ, ಅವನ್ನು ಬಿಟ್ಟು ನೀವು ಕೆಲಸ ಮಾಡುತ್ತಿದ್ದೀರಿ. ಆ ಸದನದಲ್ಲಿ ನಡೆದಿರುವ ಚರ್ಚೆಯ ಬಗ್ಗೆಯಾಗಲೀ ರೂಲಿಂಗ್ ಬಗ್ಗೆಯಾಗಲೀ ಈ ಸದನದಲ್ಲಿ ಮಾತನಾಡುವುದಕ್ಕೆ ಹಕ್ಕು ಇಲ್ಲವೆಂದು ಆಗ ವಿಧಾನ ಪರಿಷತ್ತಿನ ಚೇರ್ಮನ್ ರಾಗಿದ್ದ ಶ್ರೀಮತಿ ಬಸವರಾಜೇಶ್ವರಿಯವರು ರೂಲಿಂಗ್ ಕೊಟ್ಟಿದ್ದಾರೆ. ಬೇಕಾದರೆ ಆ ರೂಲಿಂಗ್‌ನ್ನು ತರಿಸಿ ನೋಡಿ.

ಶ್ರೀ ಎಸ್. ಬಂಗಾರಪ್ಪ.—ಸಂಸದೀಯ ನಡವಳಿಕೆಯಲ್ಲಿ ಕೂಡ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ನಡವಳಿಕೆಗಳಿಗೆ ಸಮಾನ ಅಧಿಕಾರ ಇರುತ್ತದೆ ಎಂದು ವ್ಯಾಖ್ಯಾನ ಮಾಡಿದ್ದಾರೆ.

ಶ್ರೀ ಎಂ. ರಘುಪತಿ.—ತಾವು ಆ ರೀತಿ ಮಾತನಾಡಬೇಡಿ. ಒಳ್ಳೆಯ ಸಂಪ್ರದಾಯವನ್ನು ಹಾಕಿ. ಅಧ್ಯಕ್ಷರೇ ತಾವು ಇದಕ್ಕೆ ಅವಕಾಶ ಕೊಡಬೇಡಿ. ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಮಾತ್ರ ಅವರು ಮಾತನಾಡಲಿ.

SRI R. VENKATARAMAIAH.—Artical 208 of the Constitution reads thus :

" Rules of procedure,—(i) A House of the Legislature of a State may make rules for regulating, subject to the provisions of this Constitution, its procedure and the conduct of its business. "

Article 211 refers to the Restriction on discussion in the Legislature. It reads ;

" No discussion shall take place in the Legislature of a State with respect to the conduct of any judge of the Supreme Court or of a High Court in the discharge of his duties. "

So here this is also not applicable. If we take our own Rules of Procedure. Rule 61 lays down the restrictions on right to move a motion. These restriction also are not applicable here. So there are no restrictions. There fore, I don't think it is not permitted.

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಅಧ್ಯಕ್ಷರೆ. ಕಾನ್ಸ್ಟಿಟ್ಯೂಷನ್ ಪ್ರಕಾರ ಕಾಂಪೋಸಿಷನ್ ಆಫ್ ದ ಸ್ಟೇಟ್ ಲೆಜಿಸ್ಲೇಚರ್, ವಿಚಾರವನ್ನು ಇಲ್ಲಿ ನಾವು ಗ್ರಹಿಸಿದರೆ, ಈ ವ್ಯವಸ್ಥೆಯಲ್ಲಿ ಒಂದು ಕಾನ್ಸ್ಟಿಟ್ಯೂಷನಲ್ ಬ್ರೇಕ್ ಡೌನ್ ಬರುತ್ತದೆ ಎಂದು ನಾನು ಹೇಳುತ್ತೇನೆ. ಇವೊತ್ತು ಆ ಸದನ ಕೆಲಸ ಮಾಡುತ್ತಾ ಇಲ್ಲ ಎಂದು ಅದಕ್ಕೆ ನಾವು ಹೋಗುವುದಿಲ್ಲ. Here we see that there is a break down of the constitutional position, th t is the point which I wanted to make out. ಇವೊತ್ತು ಕೌನ್ಸಿಲ್ ಇಲ್ಲ ಎಂದರೆ, ಅದನ್ನು ೧೭ನೇ ತಾರೀಖಿನ ವರೆಗೆ ಮುಂದಕ್ಕೆ ಹಾಕಲಾಗಿದೆ ಎಂದರೆ, ಕಲಾಪಗಳನ್ನು ನಡೆಸತಕ್ಕಂತಹ ಪರಮಾಧಿಕಾರತ್ವದಲ್ಲಿ ಅದು ಯಾವ ಕಾರ್ಯ ಕಲಾಪಗಳನ್ನು ನಡೆಸ ಬೇಕಾಗಿತ್ತು, ಅದನ್ನು ಕಿತ್ತು ಹಾಕಲಾಗಿದೆ. ಚರ್ಚೆಗೆ ಅವಕಾಶ ಕೊಡದೆ ಹಾಗೆ ವಿವಾದಗೂ ಮಾಡಿ ನಿಲ್ಲಿಸಬೇಕೆಂದು ಮಾಡಿದ್ದೀರಿ. ಇದರ ಹೊಣೆಯನ್ನು ಸರಕಾರ ಹೊರಬೇಕಾಗುತ್ತದೆ. Government has played all these gimmics and adopted the tactics to see that this matter does not come up for diseussion in that House.

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.--ಅಧ್ಯಕ್ಷರೆ......

ಶ್ರೀ ಎಸ್. ಬಂಗಾರಪ್ಪ —ಅಧ್ಯಕ್ಷರೆ, ಇವೊತ್ತು ಆ ಸದನ......

ಶ್ರೀ ಎಸ್. ಆರ್. ಬೊಮ್ಮಾಯಿ.--ಅಧ್ಯಕ್ಷರೆ, ಇವೊತ್ತು ಏನೇ ವಿಚಾರ......

ಶ್ರೀ ಎಸ್. ಬಂಗಾರಪ್ಪ.--ಮಾನ್ಯ ಬೊಮ್ಮಾಯಿಯವರು ನನ್ನ ಮಾತನ್ನು ನಾನು ಮುಗಿಸಿದ ಮೇಲೆ ಮಾತನಾಡಬಹುದಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.--ಮಾನ್ಯರು ಸರಕಾರದ ವಿಚಾರ ಹೇಳಲಿ, ಯಾವುದೇ ವಿಚಾರ ಹೇಳಲಿ. ಈವೊತ್ತು ಇಲ್ಲಿ ಹೇಳಿದಂತಹ ವಿಚಾರಗಳು ರೆಕಾರ್ಡ್‌ನಲ್ಲಿ ಉಳಿಯುವುದಕ್ಕೆ ಸರಿಯಾದುದು ಅಲ್ಲ. ಅವರು ಹೇಳಿದಂತಹ ವಿಚಾರಗಳು ರಿಕಾರ್ಡ್‌ನಲ್ಲಿ ಉಳಿಯ ಕೂಡದು ಎಂದು ನಾನು ಹೇಳುತ್ತಿದ್ದೇನೆ, ಅದಕ್ಕೆ ಪಾಯಿಂಟ್ ಆಫ್ ಆರ್ಡರ್ ನನ್ನದು.

ಶ್ರೀ ಎಸ್. ಬಂಗಾರಪ್ಪ.—ನೀವು ಹೇಗೆ ರಿಕಾರ್ಡ್‌ನಿಂದ ತೆಗೆದು ಹಾಕುತ್ತೀರಿ ? ಅದರಲ್ಲಿ ಅನ್‌ಪಾರ್ಲಿಮೆಂಟರಿ ಏನಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.--......

ಶ್ರೀ ಎಸ್. ಬಂಗಾರಪ್ಪ.—ಸರಕಾರ ಎಂದ ಮೇಲೆ ಗೌರ್ನರ್, ಕೌನ್ಸಿಲ್, ಅಸೆಂಬ್ಲಿ ಎಲ್ಲವೂ ಇರಬೇಕಾಗುತ್ತದೆ. ಅದರಲ್ಲಿ ಒಂದೂ ಇಲ್ಲ ಎಂದರೂ ಆಗುವುದಿಲ್ಲ.

SRI S.R. BOMMAI. I raise to a point of order.

Sri K H. SRINIVAS.—There cannot be a point of order on a point of order.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಎಲ್ಲರೂ ಒಮ್ಮೆಗೆ ಮಾತನಾಡಿದರೆ ಹೇಗೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ನಾನು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳುತ್ತಾ ಇದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಪಾಯಿಂಟ್ ಆಫ್ ಆರ್ಡರ್ ಮೊದಲೇ ಇದೆಯಲ್ಲ?

(ಗೊಂದಲ)

ಶ್ರೀ ಎಂ. ರಘುಪತಿ.—ಈಗ ಈ ಸದನದಲ್ಲಿ ಒಂದು ರೆಸಲ್ಯೂಷನ್ ತರುತ್ತೇವೆ. ವಿರೋಧ ಪಕ್ಷದವರ ನೀತಿ ಸರಿಯಿಲ್ಲ ಎಂದು ನಿಲುವಳಿ ಸೂಚನೆ ತಂದರೆ ಅದಕ್ಕೆ ಅವಕಾಶ ಇದೆಯೆ? ಅಲ್ಲಿನ ಕಾರ್ಯಕಲಾಪಗಳನ್ನು ನಡೆಸುವುದು ಸಭಾಪತಿಗಳಿಗೆ ಬಿಟ್ಟಿದ್ದುದು. ಇದನ್ನು ಇಲ್ಲಿ ವಿಚಾರ ಮಾಡುವುದು ತಪ್ಪು.

ಶ್ರೀ ಜಿ. ನಾರಾಯಣ ಕುಮಾರ್.—ನಮಗೂ ಮಾತನಾಡಲಿಕ್ಕೆ ಅವಕಾಶ ಕೊಡಿ. ನಮಗೆ ಹಕ್ಕಿಲ್ಲವೆ?

SRI S. BANGARAPPA.—You have no right to direct the Speaker.

(INTERRUPTION)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಕ್ರಿಯಾಲೋಪದ ಬಗ್ಗೆ ನಾನು ರೂಲಿಂಗ್ ಕೊಡುತ್ತೇನೆ. ಎರಡು ಕಡೆಯವರು ಕೇಳಿ. ನಾನು ರೂಲಿಂಗ್ ಕೊಡಬೇಕೊ ಬೇಡವೊ

ಶ್ರೀ ಎಸ್. ಬಂಗಾರಪ್ಪ.—ಒಂದು ಕ್ರಿಯಾಲೋಪದ ಮೇಲೆ ಇನ್ನೊಂದು ಕ್ರಿಯಾಲೋಪ ಬರಬಹುದೆ?

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ಪಾಯಿಂಟ್ ಆಫ್ ಆರ್ಡರ್ ಮೇಲೆ ಆ ಕಡೆಯವರು ಹೇಳಿದ್ದನ್ನು ಕೇಳಿ, ನಮ್ಮವರದ್ದನ್ನೂ ಕೇಳಿದ ಮೇಲೆ ಏನಾದರೂ ವಿವರಣೆ ಕೇಳಬೇಕಾಗಿದ್ದರೆ ಅವರು ಕೇಳಲಿ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಅವರು ಏನು ಹೇಳುತ್ತಾರೆ ಹೇಳಲಿ. ಅವರಿಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಿ ಮುಗಿಸಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ತಾವುಗಳು ಈ ವಿಚಾರದಲ್ಲಿ ರೂಲ್ಸ್ ಬಿಟ್ಟು ಕಲಾಪಗಳನ್ನು ನಡೆಸುವುದಕ್ಕೆ ಆಗುತ್ತದೆಯೇ? ಮಾನ್ಯ ಮಂತ್ರಿಗಳು ಎಂದು ಹೇಳಿದ ಮಾತ್ರಕ್ಕೆ ಹೀಗೆ ಮಾಡುವುದಕ್ಕೆ ಆಗುತ್ತದೆಯೇ? ಇದು ಸರಿಯಿಲ್ಲ. ಎಲ್ಲಾ ರೂಲ್ಸ್‌ಗಳನ್ನು ಬದಿಗೊತ್ತಿ ಸಚಿವರಿಗೆ ಅವಕಾಶ ಕೊಡುವುದು ಸರಿಯಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವಕಾಶ ಮಾಡಿಕೊಡಲಿಕ್ಕೆ ಸಭಾಧ್ಯಕ್ಷರಿಗೆ ಅಧಿಕಾರ ಇದೆ.

ಅಧ್ಯಕ್ಷರು.—ರಾಜಿ ಮಾಡಿದವರಿಗೆ ಎಲ್ಲರಿಗೂ ಅವಕಾಶ ಕೊಡತಕ್ಕಂತಹ ಅವಶ್ಯಕತೆ ಇಲ್ಲ ಎಂದು ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ಪಾಯಿಂಟ್ ಆಫ್ ಆರ್ಡರ್ ಮೇಲೆ ನಮಗೆ ಅವಕಾಶ ಇದೆ ಯೆಂದು ಹೇಳುತ್ತಿದ್ದೇವೆ.

ಶ್ರೀ ಪಟ್ಟಮಕ್ಕಿ ರತ್ನಾಕರ್.—ಈಗ ಚರ್ಚೆ ನಡೆಯುತ್ತಿರುವುದು ಪಾಯಿಂಟ್ ಆಫ್ ಆರ್ಡರ್ ಮೇಲೆ ಅಲ್ಲವೆ?

೧–೩೦ ಪಿ.ಎಂ.

ಅಧ್ಯಕ್ಷರು.—ಇಷ್ಟೊತ್ತಿಗೆ ಅವರು ಮುಗಿಸಿ ಬಿಡುತ್ತಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ.—ಒಂದು ಪಾಯಿಂಟ್ ಆಫ್ ಆರ್ಡರ್ ಮೇಲೆ ಮತ್ತೊಂದು ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ಅವಕಾಶ ಇಲ್ಲ.

(ಗೊಂದಲ)

ಶ್ರೀ ಎಸ್.ಆರ್. ಬೊಮ್ಮಾಯಿ.—ಅದೇ ವಿಚಾರದ ಬಗ್ಗೆ ನಾನೂ ಸಹ ಪ್ರಸ್ತಾಪ ಮಾಡುತ್ತೇನೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಯಮಗಳ ಪ್ರಕಾರ ಆ ರೀತಿ ಆಗುವುದಿಲ್ಲ. ತಾವು ದಯಮಾಡಿ ಆ ರೀತಿ ಅಪ್ಪಣೆ ಕೊಡಿಸಬೇಡಿ.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಅವರೂ ಸಹ ಮಾತನಾಡುತ್ತಾರೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಒಂದು ಪಾಯಿಂಟ್ ಆಫ್ ಆರ್ಡರ್ ಮೇಲೆ ಮತ್ತೊಂದು ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ಅವಕಾಶವೇ ಇಲ್ಲ.

(ಗೊಂದಲ)

ಶ್ರೀ ಧರ್ಮಸಿಂಗ್.—ಯಾವ ರೀತಿಯಲ್ಲಿ ಅವರು ಮತ್ತೊಂದು ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ಅವಕಾಶ ಇದೆ?

(ಗೊಂದಲ)

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ಮೇಲ್ಮನೆಯ ವಿಷಯವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡುವುದು ಅಪರಾಧವಾಗುತ್ತದೆ. ದಯಮಾಡಿ ಇದಕ್ಕೆ ಅವಕಾಶ ಕೊಡಬೇಡಿ.

(ಗೊಂದಲ)

ಆ ರೀತಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟರೆ ಅದು ಒಂದು ಕೆಟ್ಟ ಸಂಪ್ರದಾಯ ವನ್ನು ನಾವೇ ಹಾಕಿ ಕೊಟ್ಟಂತೆ ಆಗುತ್ತದೆ.

(ಗೊಂದಲ)

ಅಧ್ಯಕ್ಷರು.—ಈಗ ಮಾನ್ಯ ಬೊಮ್ಮಾಯಿಯವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಿ ಮುಗಿಸುತ್ತಾರೆ. ದಯಮಾಡಿ ಬಂಗಾರಪ್ಪನವರೇ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಮೊದಲು ನನಗೆ ಅವಕಾಶ ಮಾಡಿ ಕೊಟ್ಟಿದ್ದೀರಿ. ನಾನು ಮಾತನಾಡಿ ಮುಗಿಸಿದ ಮೇಲೆ ಅವರಿಗೆ ಅವಕಾಶ ಕೊಡಿ ಬೇಡವೆಂದು ನಾನು ಹೇಳುವುದಿಲ್ಲ.

(ಗೊಂದಲ)

ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ನಾವು ವಿಷಯವನ್ನು ಪ್ರಸ್ತಾಪ ಮಾಡುತ್ತೇವೆ. ಅವರ ಉತ್ತರವನ್ನು ಕೇಳುವುದಕ್ಕೆ ನಾವು ಬಂದಿಲ್ಲ. ನಾವು ನಮ್ಮ ವಿಚಾರವನ್ನು ಮಂಡನೆ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ನಿಯಮಗಳ ಪ್ರಕಾರ......

(ಗೊಂದಲ)

ಅಧ್ಯಕ್ಷರು.—ಅವರು ಏನು ಹೇಳುತ್ತಾರೋ ಮೊದಲು ಕೇಳೋಣ......

(ಗೊಂದಲ)

ಅಧ್ಯಕ್ಷರು.—ನತಿಂಗ್ ವಿಲ್ ಗೋ ಆನ್ ರೆಕಾರ್ಡ್. x x x

(ಗೊಂದಲ)

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ಅವರು ಏನು ಹೇಳುತ್ತಾರೋ ಕೇಳೋಣ, ತಾವು ಏನು ಹೇಳುತ್ತೀರೋ ಕೇಳಿಕೊಂಡು ಆಮೇಲೆ ನಾನು ರೂಲಿಂಗ್ ಕೊಡುತ್ತೇನೆ. ರೂಲಿಂಗ್ ಕೊಡುವ ಮೊದಲು ಎರಡೂ ಕಡೆಯ ಪ್ರಿಲಿಮಿನರಿ ಹಿಯರಿಂಗ್ ಮಾಡಬೇಕಲ್ಲವೇ. ಆದ್ದರಿಂದ ದಯಮಾಡಿ ಎಲ್ಲರೂ ನನಗೆ ಸಹಕಾರ ಕೊಡಿ. ಮಾನ್ಯ ಬೊಮ್ಮಾಯಿಯವರು ಇಷ್ಟೊತ್ತಿಗೆ ಮುಗಿಸುತ್ತಿದ್ದರು.

ಶ್ರೀ ಎಂ. ರಘುಪತಿ.—ಅವರಿಗೆ ಸ್ವಲ್ಪ ಬುದ್ಧಿ ಹೇಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಮಗೆ ಬುದ್ಧಿವಾದ ಹೇಳತಕ್ಕಂಥ ಅವಕಾಶ ಇಲ್ಲ. ಬುದ್ಧಿವಾದ ಹೇಳಿಸಿಕೊಂಡು ಕೆಲಸ ಮಾಡುವುದಕ್ಕೆ ಇಲ್ಲಿಗೆ ಬಂದಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ನಾನು ನಿಮಗೆ ಅವಕಾಶ ಕೊಡುತ್ತೇನೆ......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನೀವು ಮೊದಲು ನನ್ನನ್ನು ಕರೆದಿದ್ದೀರಿ?

ಅಧ್ಯಕ್ಷರು.—ಎರಡೇ ಎರಡು ನಿಮಿಷಗಳಲ್ಲಿ ಅವರು ಮುಗಿಸಿಬಿಡುತ್ತಿದ್ದರು.

ಶ್ರೀ ಎಸ್. ಬಂಗಾರಪ್ಪ.—ಇಲ್ಲ. ನನಗೆ ಅವಕಾಶ ಮಾಡಿ ಕೊಟ್ಟಿದ್ದೀರಿ...

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರೆಲ್ಲರೂ ಅವರವರ ಜಾಗಗಳಲ್ಲಿ ಕುಳಿತುಕೊಳ್ಳುವವರೆಗೆ ನತಿಂಗ್ ವಿಲ್ ಗೋ ಆನ್ ರೇಕಾರ್ಡ್.

(ಗೊಂದಲ)

ಅಧ್ಯಕ್ಷರು.—ನೋಡಿ ನಾನು ಈಗ ಒಂದು ತೀರ್ಮಾನಕ್ಕೆ ಬಂದಿದ್ದೇನೆ, ಎರಡೂ ಕಡೆ ಕೇಳಿ ರೂಲಿಂಗ್ ಕೊಡಬೇಕಾಗಿದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಇಲ್ಲ......

---

* Not recorded as ordered by the Chair

ಅಧ್ಯಕ್ಷರು.—ನಾನು ನಿಮಗೂ ಅವಕಾಶ ಕೊಡಬೇಕು ಅವರಿಗೂ ಅವಕಾಶ ಕೊಡಬೇಕು. ಈಗ ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡಲಿ.

(ಗೊಂದಲ)

* * * * *

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳು ತ್ತಿದ್ದಾರೆ.

ಅಧ್ಯಕ್ಷರು.—ಹುಡುಗಾಟಿಕೆ ಎನ್ನುವ ಪದವನ್ನು ನಾನು ಎಕ್ಸ್‌ಪಂಜ್ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನತಿಂಗ್ ವಿಲ್ ಗೋ ಆನ್ ರೇಕಾರ್ಡ್.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾವು ನೋಟಿಸ್ ಕೊಟ್ಟಿದ್ದೇವೆ. ನಾವು ಮಾತನಾಡಲಿಲ್ಲವೆಂದರೆ ಹೇಗೆ ?

ಅಧ್ಯಕ್ಷರು. - ಮಾನ್ಯ ಬೊಮ್ಮಾಯಿಯವರು ಏನು ಹೇಳುತ್ತಾರೋ ನೋಡೋಣ. ಆಮೇಲೆ ನಿಮಗೂ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ......

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿರಿ. ಈಗ ಯಾರು ಮಾತನಾಡಿದರೂ ಸಹ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ನಥಿಂಗ್ ವಿಲ್ ಗೋ ಆನ್ ರೆಕಾರ್ಡ್ ದಯವಿಟ್ಟು ಎಲ್ಲರೂ ಕೂಡಿರಿ, ರೆಕಾರ್ಡ್‌ಗೆ ಏನೂ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.- ಈ ರೀತಿ ಆದರೆ ಸಭೆ ನಡೆಸುವುದು ಕಷ್ಟವಾಗುತ್ತದೆ. ರೂಲಿಂಗ್ ಕೊಡು ವವನು ನಾನು. ನನಗೆ ಎನ್‌ಲೈಟೆನ್ ಮಾಡುವುದಕ್ಕೆ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿ ದ್ದಾರೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಇಲ್ಲಿಯವರೆಗೆ ಸಭೆ ನಡೆಸಿಕೊಂಡು ಬರಲಿಲ್ಲವೇ ?........................

(ಗೊಂದಲ)

ಅಧ್ಯಕ್ಷರು.—ಅವರು ಹೇಳಿದ ಕೂಡಲೇ ನಾನು ರೂಲಿಂಗ್ ಕೊಡುವುದಿಲ್ಲ......

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ದಯವಿಟ್ಟು ಬಂಗಾರಪ್ಪನವರು ಹೇಳುವುದನ್ನು ಆರಿಸಬೇಕು.........

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ಅವಕಾಶ ಕೊಟ್ಟಿದ್ದಾರೆ........

(ಗೊಂದಲ)

** ಅಧ್ಯಕ್ಷರ ಅಪ್ಪಣೆಯ ಮೇರೆಗೆ ಗುರುತಿಸಿರುವ ಭಾಗವನ್ನು ತೆಗೆದು ಹಾಕಲಾಗಿದೆ.

ಅಧ್ಯಕ್ಷರು.– ಅವರು ಮುಗಿಸಲಿ ತಡೆಯಿರಿ. ನಾನು ಯಾರಿಗೂ ಅಲೋ ಮಾಡುವುದಿಲ್ಲ. ಅವರನ್ನು ಕರೆದಿದ್ದೇನೆ. ಅವರು ಏನು ಹೇಳುತ್ತಾರೋ ಹೇಳಲಿ......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—......ಅದು ಸಾಧ್ಯ ಆಗುವುದಿಲ್ಲ......

ಅಧ್ಯಕ್ಷರು.—ನಾನು ಅವರನ್ನು ಕರೆದಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ತಮಗೆ ಅವಕಾಶ ಕೊಟ್ಟು ರೂಲಿಂಗ್ ಕೊಡುತ್ತೇನೆ. ಏಕ್‌ದಮ್ ರೂಲಿಂಗ್ ಕೊಡುವುದಿಲ್ಲ. ನಿಯಮ ೩೦೮ರ ಪ್ರಕಾರ ನನಗೆ ಹಕ್ಕು ಇದೆ. ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರು ಏನು ವಿಷಯ ಹೇಳುತ್ತಾರೆ ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ, ಅವರು ಹೇಳಬಹುದು ಎಂದರೆ ನಾನೇನು ಇಲ್ಲಿ ಜಾಗಟೆ ಹೊಡೆಯಲಿಕ್ಕೆ ಬಂದಿದ್ದೇವೆಯೇ ?

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕೂಡಿರಿ. ಮಾನ್ಯ ಮೊಯಿಲಿಯವರೇ ೩೦೮ನೇ ರೂಲ್ ನೋಡಿರಿ. ೩೦೮ನೇ ನಿಯಮದ ಪ್ರಕಾರ ನನಗೆ ಅಧಿಕಾರ ಇದೆ. ಈಗ ರೆಕಾರ್ಡ್‌ಗೆ ಏನೂ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ. ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಏನು ಹೇಳುತ್ತಾರೆ ಕೇಳೋಣ. ಆಮೇಲೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಂ. ರಘುಪತಿ.—೩೦೮ನೇ ನಿಯಮ ಓದಿ ಎಂದು ಅವರಿಗೆ ಹೇಳಿರಿ.

ಶ್ರೀ ಎಸ್. ಬಂಗಾರಪ್ಪ.—ಅದು ನಮ್ಮ ಹತ್ತಿರ ಇದೆ... ..

> "ನಿಯಮ ೩೦೮. ಒಬ್ಬ ಸದಸ್ಯನು ಮಾತನಾಡಲು ಎದ್ದು ನಿಂತರೆ, ಅಧ್ಯಕ್ಷರು ಅವರ ಹೆಸರನ್ನು ಕರೆಯತಕ್ಕದ್ದು, ಒಬ್ಬರಿಗಿಂತ ಹೆಚ್ಚು ಸದಸ್ಯರು ಏಕಕಾಲದಲ್ಲಿ ಎದ್ದು ನಿಂತರೆ ಅಧ್ಯಕ್ಷರು ಹೆಸರು ಕರೆದಿರುವ ಸದಸ್ಯರಿಗೆ ಮಾತನಾಡಲು ಹಕ್ಕಿರುವುದು"

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಬೊಮ್ಮಾಯಿಯವರನ್ನು ಕರೆದಿರುವುದಕ್ಕಿಂತ ಮೊದಲು ನನ್ನನ್ನು ಕರೆದಿದ್ದಾರೆ, ಆದುದರಿಂದ ಮಾತನಾಡಲು ನನಗೇ ಹಕ್ಕಿರುವುದು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ಮೊದಲು ನಿಮ್ಮನ್ನು ಕರೆದಿದ್ದೇನೆ. ಮಾನ್ಯ ಬೊಮ್ಮಾಯಿಯವರನ್ನು ಈಗ ಕರೆದಿದ್ದೇನೆ, ಅವರು ಏನು ಹೇಳುತ್ತಾರೆ ಕೇಳಿರಿ.

ಶ್ರೀ ಎಂ. ರಘುಪತಿ.—ನಿಯಮವನ್ನು ಇಂಗ್ಲಿಷ್‌ನಲ್ಲಿ ಓದಿರಿ...

(ಗೊಂದಲ)

ಅಧ್ಯಕ್ಷರು.—ಮಾನ್ಯ ರಘುಪತಿಯವರೇ ಆ ನಿಯಮ ನನಗೆ ಗೊತ್ತಿದೆ. ದಯವಿಟ್ಟು ಎಲ್ಲರೂ ಕೂಡಿರಿ.

ಶ್ರೀ ಎಸ್. ಬಂಗಾರಪ್ಪ.—ರೂಲ್ ೩೦೮......

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ಆ ನಿಯಮ ನನಗೆ ಗೊತ್ತಿದೆ... ....ಎಲ್ಲರೂ ಕೂಡಿರಿ.

ಶ್ರೀ ಎಸ್ ಬಂಗಾರಪ್ಪ.—ಮಾನ್ಯ ರಘುಪತಿಯವರು ಇಂಗ್ಲೀಷ್‌ನಲ್ಲಿ ಓದಿ ಎಂದು ಹೇಳಿದ್ದಾರೆ. ಇಂಗ್ಲೀಷ್‌ನಲ್ಲಿ ಓದುತ್ತೇನೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ನಿಯಮ ೩೦೮ ನನಗೆ ಗೊತ್ತಿದೆ.

ಶ್ರೀ ಎಸ್. ಬಗಾರಪ್ಪ.—ಎಷ್ಟು ಗೊತ್ತಿದ್ದರೂ ಕೂಡಾ ಇನ್ನೊಂದು ಸಲ ಓದುವುದು ಒಳ್ಳೆಯದು ರಘುಪತಿಯವರು ಹೇಳಿದ್ದಾರೆ......

(ಗೊಂದಲ)

SIR K.H. PATIL.—May I make a mention ? I am not on a point of order. I would like to submit that, ಈ ನಿಲುವಳಿ ಸೂಚನೆಯ ಪ್ರಸ್ತಾವನ್ನು ಒಪ್ಪಿಕೊಳ್ಳುವುದು ಬಿಡುವುದು ತಮಗೆ ಬಿಟ್ಟದ್ದು. ಇದರ ಬಗ್ಗೆ ವ್ಯಾಖ್ಯಾನ ಮಾಡಬೇಕೆನ್ನುವುದರ ಬಗ್ಗೆ ತಾವು ಬಂಗಾರಪ್ಪನವರನ್ನು ಕರೆದಿದ್ದೀರಿ. ನಂತರ ಮಾನ್ಯ ಮಂತ್ರಿವರ್ಯರು ಇದು ವಾಸ್ತವ ಆಗುವುದಿಲ್ಲ ಎನ್ನುವ ವಿಧಿಬಿಂದುವಿನ ಬಗ್ಗೆ ಸಾಕಷ್ಟು ವಿವರವಾಗಿ ಸಭೆಗೆ ಹೇಳಿದ್ದಾರೆ. ಈಗ ಮಾನ್ಯ ಬಂಗಾರಪ್ಪನವರು ಹೇಳಿದ್ದು ಮುಗಿದ ನಂತರ ತಮಗೆ ಅವಶ್ಯ ಕಂಡು ಬಂದರೆ ಮತ್ತೊಬ್ಬರನ್ನು ಕರೆಯಬಹುದು. ಅಥವಾ ರೂಲಿಂಗ್ ಕೊಡಬಹುದು. ತಮಗಿರುವ ಹಕ್ಕನ್ನು ಯಾರೂ ಚ್ಯುತಿ ಮಾಡುವುದಿಲ್ಲ. ಯಾವುದೇ ಸಂಪ್ರದಾಯದ ಒಳಗೂ ಯಾರಾದರೂ ಒಬ್ಬರು ಮನುಷ್ಯರು ತಾವು ಎದ್ದು ನಿಂತಾಗ, ಮಾತನಾಡುತ್ತಿರುವವರನ್ನು ಕೇಳಬಹುದು. ಅದೇ ರೀತಿ ಮಾನ್ಯ ಬೊಮ್ಮಾಯಿಯವರು ಸೌಜನ್ಯಯುತವಾಗಿ ಬಂಗಾರಪ್ಪನವರಿಗೆ ಈಲ್ಡ್ ಆಗಿ ಎಂದು ಕೇಳಿದ್ದರೆ, ನಂತರ ತಾವು ಅವರ ಹೆಸರನ್ನು ಕರೆಯಬಹುದು.

ಶ್ರೀ ಧರ್ಮ ಸಿಂಗ್.—ಏತಕ್ಕೆ ಈಲ್ಡ್ ಆಗಬೇಕು .. ...

ಶ್ರೀ ಕೆ ಹೆಚ್. ಪಾಟೀಲ್.—ಸ್ವಲ್ಪ ತಾಳಿರಿ. ಆದುದರಿಂದ ಈಗಲೇ ತಾವು ಅವರ ಹೆಸರನ್ನು ಕರೆಯುವುದಕ್ಕೆ ಆಗುವುದಿಲ್ಲ. ಈ ದೃಷ್ಟಿಯಿಂದ ಇದನ್ನು ಸರಕಾರದವರೂ ಒಪ್ಪುತ್ತಾರೆ. ತಮಗೆ ವಿಶಾಲವಾದ ಅಧಿಕಾರ ಇದೆ. ತಾವು ಇದನ್ನು ಮಾಡಬಹುದು ಬಿಡಬಹುದು. ಇದನ್ನು ಚುಟುಕು ಗೊಳಿಸಿದರೂ ಗೊಳಿಸಬಹುದು. ಎಲ್ಲಾ ಅಧಿಕಾರ ತಮಗೆ ಇದೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಡಿ. ಅವರದು ಮುಗಿಯಲಿಕ್ಕೆ ಬಂದಿದೆ. ಅವಶ್ಯ ಇದ್ದರೆ ಬೊಮ್ಮಾಯಿಯವರನ್ನು ಕರೆಯಿರಿ. ಅವರು ಹೇಳಬಹುದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ವಿರೋಧ ಪಕ್ಷದ ನಾಯಕರು ಈಲ್ಡ್ ಆಗಬೇಕೆಂದು ಕೇಳುತ್ತಿದ್ದೇನೆ. ದಯವಿಟ್ಟು ಈಲ್ಡ್ ಆಗಿ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ, ತಮಗೆ ಅವಕಾಶ ಕೊಡುತ್ತೇನೆ. ಇದೊಂದು ರಿಕ್ವೆಸ್ಟ್ ತಮಗೆ. ಅವರದ್ದು ಮುಗಿಯಲಿ ತಮಗೂ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಏನು ಹೇಳುತ್ತೇನೆ, ತಾವು ದಯವಿಟ್ಟು ಕೇಳಿರಿ. ದಯವಿಟ್ಟು ತಾವು ಕೇಳಿ,

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ......

ಶ್ರೀ ಎಸ್.ಆರ್. ಬೊಮ್ಮಾಯಿ.—ಅವರು ಮಾತನಾಡಲಿ......

ಅಧ್ಯಕ್ಷರು—ಅವರೇ ಆಮೇಲೆ ಮಾತನಾಡುತ್ತಾರಂತೆ.

ಅಧ್ಯಕ್ಷರು.—ನಾನು ಅನುಮತಿ ಕೊಟ್ಟಿದ್ದೆ. ಆದರೆ, ನೀವು ಮಾತನಾಡಿದ ಮೇಲೆ, ನಾನು ಮಾತನಾಡುತ್ತೇನೆಂದು ಅವರು, ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈ ಸದನದಲ್ಲಿ ಮಾನ್ಯ ಸಚಿವರು ಇರಬಹುದು, ಅಥವಾ ಮಾನ್ಯ ಸದಸ್ಯರು ಇರಬಹುದು. ಯಾರೇ ಆಗಲೀ, ಅವರು ಮಾತನಾಡತಕ್ಕ ಹಕ್ಕನ್ನು ಮೊಟಕು ಮಾಡುವುದಕಾಗುವುದಿಲ್ಲ. ಮಾನ್ಯ ಸಭಾಧ್ಯಕ್ಷರೇ, ತಮ್ಮ ಆದೇಶದ ಪ್ರಕಾರ, ೩-೪ ಜನ ಸಚಿವರೂ ಮಾತನಾಡಿದರೂ ಕೂಡ, ನಮ್ಮ ಕಡೆಯಿಂದ ಯಾರೂ ಕೂಡ ಹೇಳುವುದಕ್ಕೆ ಹೋಗಿಲ್ಲ. ನಾನು ಮಾತನಾಡು

ವುದಕ್ಕೆ ಹೊರಟೆ, ಆದರೆ ಮಧ್ಯೆ, ಮಾಧ್ಯೆ ಮಾನ್ಯ ಸಚಿವರು ಎದ್ದರು. ತಾವು ನನ್ನನ್ನು ಕರೆದಿರಿ, ಆದರೆ ಮಾನ್ಯ ಬೊಮ್ಮಾಯಿಯವರು ಎದ್ದರು. ನಿಯಮ ೩೦೮ರ ಪ್ರಕಾರ ಒಂದುಸಾರಿ ಒಬ್ಬರನ್ನು ಕರೆದಮೇಲೆ ಮತ್ತೊಂದು ಸಾರಿ ಇನ್ನೊಬ್ಬರನ್ನು ಕರೆಯುವುದಕ್ಕೆ ಅವಕಾಶ ಇಲ್ಲ. ಆದರೂ ಕೂಡ ಈಗ ಮಾನ್ಯ ಸಚಿವರು ಎದ್ದಿದ್ದಾರೆ, ಅವರು ಮಾತನಾಡಲಿ, ಆಮೇಲೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು.— ಇವೆಲ್ಲವನ್ನೂ ನೋಡಿದಾಗ, ನಿಮ್ಮಲ್ಲೂ ದೊಡ್ಡ ಗುಣ ಇದೆ, ಅವರಲ್ಲೂ ದೊಡ್ಡ ಗುಣ ಇದೆ ಎಂದು ಹೇಳಬಹುದು.

ಶ್ರೀ ಎಸ್.ಆರ್. ಬೊಮ್ಮಾಯಿ.— ಈ ಚರ್ಚೆ ನಡೆಯುತ್ತಿರುವಾಗ, ಸಾಂಪ್ರದಾಯಿಕವಾಗಿ ಮತ್ತೊಬ್ಬ ಸದಸ್ಯರು ಮಾತನಾಡುವುದಕ್ಕೆ ಎದ್ದರೆ, ಚರ್ಚೆಗೆ ಧಕ್ಕೆಯಾಗುತ್ತದೆ. ಅನೇಕಸಲ ಚರ್ಚೆಯಲ್ಲಿ ಅವಶ್ಯ ಇದ್ದಾಗ ಮಾತನಾಡುವುದಕ್ಕೆ ಹೋಗುತ್ತಾರೆ. ಸಭಾಧ್ಯಕ್ಷರು ಒಂದು ಸಾರಿ ಕರೆದ ಮೇಲೆ ಎಲ್ಲರೂ, ಅದಕ್ಕೆ ಗೌರವ ಕೊಡಬೇಕಾಗುತ್ತದೆ. ವಿಧಿಬಿಂದು ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಈ ಮನೆಗೆ ಅವಕಾಶ ಇದೆ. ಹಾಗೂ ಅಧಿಕಾರ ಇದೆ ಎನ್ನತಕ್ಕ ಮಾತನ್ನು ಹೇಳಿದೇವೆ. ಪಾಯಿಂಟ್ ಆಫ್ ಆರ್ಡರ್ ಬಗ್ಗೆ ರೂಲಿಂಗ್ ಕೊಡುವ ಬಗ್ಗೆ ನಮ್ಮ ಅಭಿಪ್ರಾಯ ಮತ್ತು ವಿರೋಧ ಪಕ್ಷದ ನಾಯಕರ ಅಭಿಪ್ರಾಯವನ್ನು ಕೇಳುತ್ತೇನೆಂದೂ ಕೂಡ ಹೇಳಿದ್ದಾರೆ. ಪಾಯಿಂಟ್ ಆಫ್ ಆರ್ಡರ್‌ಗೆ ವ್ಯಾಲಿಡ್ ಇದೆಯೋ ಇಲ್ಲವೋ ಆ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಮೂಲ ವಿಷಯವನ್ನು ಚರ್ಚೆ ಮಾಡುವುದಕ್ಕೆ ಹೊರಟರೆ, ಪಾಯಿಂಟ್ ಆಫ್ ಆರ್ಡರ್ ಗತಿ ಏನು ? ವಾದ ಮಾಡುವಾಗ, ಪಾಯಿಂಟ್ ಆಫ್ ಆರ್ಡರ್ ಕಾನೂನು ಬದ್ಧವಾಗಿಲ್ಲ, ನಿಯಮಕ್ಕನುಗುಣವಾಗಿಲ್ಲ ಇದನ್ನು ತೆಗೆದುಹಾಕಿ ಎನ್ನುವುದರ ಬಗ್ಗೆ ವಾದ ಮಾಡಬಹುದು. ಮಾನ್ಯ ಬಂಗಾರಪ್ಪನವರು ಪ್ರಸ್ತಾಪ ಮಾಡಿದರು, ಇದೆಲ್ಲಾ ಸರ್ಕಾರದ ಏನು ನಿರಂಕುಶ ಪ್ರವೃತ್ತಿ, ಇದೆಲ್ಲಾ ಏಕೆ ಬರುತ್ತದೆ. ಚೇರ್ಮನ್ನರು ಸಭೆ ಮುಂದೆ ಹಾಕಿದ ವಿಚಾರ ಬರುತ್ತದೆ. ಅದಕ್ಕಾಗಿ ನಾನು ಹೇಳುತ್ತೇನೆ ಈ ವಿಚಾರಗಳೆಲ್ಲಾ ರೆಕಾರ್ಡ್‌ನಲ್ಲಿ ಇರತಕ್ಕಂತದ್ದು. ಪಾಯಿಂಟ್ ಆಫ್ ಆರ್ಡರ್ ವಿಚಾರ ಹೇಳುವುದು ಬಿಟ್ಟು, ಚೇರ್ಮನ್ ಬಗ್ಗೆ ಹೇಳುವುದು ಸರಿಯಲ್ಲ. ಬ್ರೇಕ್‌ಡೌನ್ ಆಫ್ ಕಾನ್‌ಸ್ಟಿಟ್ಯೂಷನ್, ಚೇರ್ಮನ್, ಈ ರೀತಿ ಹೇಳಿಕೊಂಡು ಹೋದರೆ, it directly or indirectly reflects on conduct of the Chairman.

ಇವತ್ತು ಸರ್ಕಾರದ ಅಭಿಪ್ರಾಯ ಕೇಳಿಕೊಂಡು. ವಿರೋಧಪಕ್ಷದವರ ಅಭಿಪ್ರಾಯನ್ನೂ ಕೇಳಿಕೊಂಡು, ಅಧ್ಯಕ್ಷರು ಒಂದು ನಿರ್ಣಯ ಕೊಡಬಹುದು. ಅಥವಾ ಸಭೆಯನ್ನು ಆಡ್ಜರ್ನ್ ಮಾಡಬಹುದು. ಇವತ್ತು ತಾವು ಏನು ಹೇಳುತ್ತೀದ್ದಿರಿ. ಈ ಮನೆಯಲ್ಲಿ ಚರ್ಚೆಗೆ ಅವಕಾಶ ಇಲ್ಲವಂತೆ, ಸರ್ಕಾರದ ನಡತೆಯ ಬಗ್ಗೆ ಹೇಳುತ್ತಿದ್ದೀರಿ. ಇದು ಚೇರ್ಮನ್ ನಡತೆ ಹೇಳಿದಹಾಗೆ ಆಗುತ್ತದೆ. ಈ ದೃಷ್ಟಿಯಿಂದ ಇದು ರೆಕಾರ್ಡ್‌ಗೆ ಹೋಗುವಂಥದಲ್ಲ.

ಶ್ರೀ ಎಸ್ ಬಂಗಾರಪ್ಪ — ಮಾನ್ಯ ಸಭಾಧ್ಯಕ್ಷರೇ, ನಾನು ಮೊದಲೇ ಪ್ರಸ್ತಾಪ ಮಾಡಿದ್ದೇನೆ. ನಾನು ಇಲ್ಲಿ ನಿಲುವಳಿ ಸೂಚನೆ ಕಳುಹಿಸಿಕೊಟ್ಟಿದ್ದೇನೆ ಇದಕ್ಕೆ ಮತ್ತೊಂದು ಪ್ರಶ್ನೆ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ವಿಧಿಬಿಂದು ಎತ್ತುವುದರ ಮುಖಾಂತರ, ಮೊದಲು ವಿಷಯವನ್ನು ಚರ್ಚೆ ಮಾಡಬೇಕೇ, ಬಿಡಬೇಕೇ ಎಂಬ ವಿಚಾರವನ್ನು ಹೇಳಬೇಕಾದರೆ, ಮೂಲ ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಈ ಸೂಚನೆಯ ವಿಚಾರವನ್ನು ಪ್ರಸ್ತಾಪ ಮಾಡಿ ಪಾಯಿಂಟ್ ಆಫ್ ಆರ್ಡರ್ ಎತ್ತಿ ಮಾನ್ಯ ಸಚಿವರೂ ಸದಸ್ಯರೂ ಕೆಲವರು ಮಾತನಾಡಿದ್ದಾರೆ. That is why I said these two things are linked very much independent of what exactly the motion contains. You cannot speek on your own ನಾವು ಮಾತನಾಡಿದರೂ, ನೀವು ಮಾತನಾಡಿದರೂ, ಆ ರೀತಿ ಮಾಡುವುದಕ್ಕೆ ಬರುವುದಿಲ್ಲ ಇವತ್ತು ಸರ್ಕಾರ ಏನು ಮಾಡಿದೆ ಎನ್ನತಕ್ಕಂಥದ್ದನ್ನು ಹೇಳಬೇಕಾದರೆ, ಚೇರ್ಮನ್‌ರು ಏನು ಮಾಡಿದರೂ ಎಂಬುದು ನಮ್ಮ ಅಭಿಪ್ರಾಯ. ನಮ್ಮ ಅಭಿಪ್ರಾಯದಲ್ಲಿ ಸರ್ಕಾರ ಎಂದರೆ ಈ ಸದನಕ್ಕೆ ಸೀಮಿತಗೊಂಡಿದೆ ಎಂದಲ್ಲ, ಈ ಸರ್ಕಾರ ಆ ಸದನಕ್ಕೂ, ಅಲ್ಲಿಯ ಕಾರ್ಯಕಲಾಪಗಳಿಗೂ ಕೂಡ ಬದ್ಧವಾಗಿದೆ. ಸರ್ಕಾರಕ್ಕೆ ಅಲ್ಲಿಯ ಕಾರ್ಯಕಲಾಪಗಳ ಜವಾಬ್ದಾರಿಯೂ ಇದೆ. ಸರ್ಕಾರದ ಒಂದು ನಡತೆ ಅಥವಾ ನಿಲುವನ್ನು ಈ ಸದನದಲ್ಲಿ ತಾಳಿದರೆ, ಆ ನಡತೆ ಏನು ಎನ್ನತಕ್ಕ ವಿಚಾರವನ್ನು ಪ್ರಶ್ನೆ ಮಾಡತಕ್ಕಂಥ

ಹಕ್ಕು ನಮಗೂ ಇದೆ. ನಾನು ಚೇರ್ಮನ್ ಬಗ್ಗೆ ಹೇಳಲಿಲ್ಲ ಅವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ನಾನು ತೃಣ ಮಾತ್ರವೂ ಅವರ ಗೌರವವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.— ಚೇರ್ಮನ್ನರು ತಮ್ಮ ಒತ್ತಡಕ್ಕೆ ಮಣಿದು, ಈ ನಿಲುವನ್ನು ತಾಳಿದರು ಎಂಬುದು ಸರಿಯೇ ? ತಾವು ಇದರ ಬಗ್ಗೆ ಆಲೋಚನೆ ಮಾಡಿ, ಆರ್ಡರ್ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.— ಇವತ್ತು ಸದನದಲ್ಲಿ ಚರ್ಚೆ ಮಾಡತಕ್ಕಂಥ ಅನೇಕ ವಿಚಾರಗಳು ಇದ್ದವು. ಬರಗಾಲದ ವಿಚಾರಗಳು ಇದ್ದವು ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಇನ್ನೂ ಮಹತ್ವದ ಹತ್ತೆಂಟು ವಿಚಾರಗಳೂ ಇದ್ದರೂ ಕೂಡ ಒಂದೇ ಒಂದು ಕಾರಣಕ್ಕಾಗಿ ಸಭೆಯನ್ನು ಮುಂದಕ್ಕೆ ಹಾಕ ಬಹುದು ಎನ್ನತಕ್ಕಂಥ ವಿಚಾರಧಾರೆ ಸರ್ಕಾರಕ್ಕೆ ಇತ್ತು. ಆ ಚರ್ಚೆಗೆ ಅವಕಾಶ ಕೊಡಬಾರದು ಎಂಬುದೇ ನಿಮ್ಮ ಗುರಿ ಎಂಬುದು ನಮ್ಮ ಅಭಿಪ್ರಾಯ. ಇದನ್ನು ತಾವು ಒಪ್ಪಬಹುದು ಅಥವಾ ಬಿಡಬಹುದು. ಮಾನ್ಯ ಸಭಾಧ್ಯಕ್ಷರೇ, ಈ ಸದನಕ್ಕೆ ಇರತಕ್ಕಂಥ ಪರಮೋಚ್ಚ ಅಧಿಕಾರದ ಚೌಕಟ್ಟಿನಲ್ಲಿ ವಿಚಾರಗಳನ್ನು ಚರ್ಚೆಗೆ ಒಳಪಡಿಸುವುದು, ಅದರಲ್ಲಿ ಮಾನ್ಯಸದಸ್ಯರು ಭಾಗವಹಿಸಿ, ವಿಷಯದ ಮೇಲೆ ಬೆಳಕನ್ನು ಚೆಲ್ಲಿ, ಕರ್ನಾಟಕ ರಾಜ್ಯದ ಗಮನಕ್ಕೆ ತರತಕ್ಕಂಥದ್ದು ಇದೆ. ಆ ಹಕ್ಕನ್ನು ಮೊಟಕು ಮಾಡುವುದಕ್ಕೆ ಸರ್ಕಾರ ಕಾರಣವಾಗಿದೆ ಎಂದು ಹೇಳುವುದಕ್ಕೋಸ್ಕರ ನಾವು ಈ ವಿಷಯ ವನ್ನು ಎತ್ತಿದ್ದೇವೆ. ಸರ್ಕಾರದ ನೀತಿ, ನಡತೆ, ಈ ಸದನದಲ್ಲಿ ಏನು ನಡೆದಿದೆ, ಅದು ಕಾನೂನು ಬಾಹಿರ, ರಾಜ್ಯಾಂಗ ವಿರೋಧಿ ಮತ್ತು ನ್ಯಾಯ ಸಮ್ಮತವಾದುದಲ್ಲ. ಸರ್ಕಾರ ಈ ವಿಚಾರದಲ್ಲಿ ಯಾವ ಯಾವ ಕಾಲಕ್ಕೆ ಏನೇನು ನೀತಿಯನ್ನು ಅನುಸರಿಸಿದರು, ಏನೇನು ತಂತ್ರವನ್ನು ಬಳಸಿದರು ಎನ್ನತಕ್ಕಂಥ ವಿಚಾರಗಳನ್ನು ತಿಳಿಯುವುದಕ್ಕೋಸ್ಕರ ನಾವು ಈ ನಿಲುವಳಿ ಸೂಚನೆಯನ್ನು ಮಾನ್ಯ ಸದಸ್ಯರ ಗಮನಕ್ಕೆ ತಂದಿರತಕ್ಕಂಥದ್ದು. ದಯವಿಟ್ಟು ತಾವು ಇದಕ್ಕೆ ಒಪ್ಪಿಗೆ ಕೊಡಬೇಕು. ಅಲ್ಲದೆ ಈ ವಿಚಾರದಲ್ಲಿ ಸಂಪೂರ್ಣವಾಗಿ ನಾನೊಬ್ಬನೇ ಮಾತನಾಡಿರುತ್ತೇನೆ. ನಿರ್ಣಯನ್ನು ಕಳುಹಿಸಿದವರು ನಾವಾದರೂ, ಆ ಕಡೆಯವರೇ ಹೆಚ್ಚು ಮಾತನಾಡಿದ್ದಾರೆ. ವಿರೋಧ ಪಕ್ಷಗಳಿಗೆ ಇರತಕ್ಕಂಥ ಅಧಿಕಾರವನ್ನು ಚಲಾವಣೆ ಮಾಡುವುದಕ್ಕೆ ತಾವು ಅವಕಾಶ ಮತ್ತು ರಕ್ಷಣೆ ಕೊಡಬೇಕು. ಯಾರು ಸಹಿ ಮಾಡಿದ್ದಾರೆ ಅವರೇ ಅಲ್ಲದೆ, ಇನ್ನಿತರ ಸದಸ್ಯರೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.— ನಿಲುವಳಿ ಸೂಚನೆಗೆ ಅನುಮತಿ ಕೊಟ್ಟರೆ, ಸಹಿ ಹಾಕಿರುವವರಿಗೆಲ್ಲಾ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಬೇರೆ ಸದಸ್ಯರೂ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ.

ಅಧ್ಯಕ್ಷರು.— ಎಲ್ಲರಿಗೂ ಅವಕಾಶ ಕೊಡುತ್ತಾ ಹೋದರೆ ಇಡೀ ದಿವಸ ಇದನ್ನು ಚರ್ಚೆ ಮಾಡಬೇಕಾಗುತ್ತದೆ.

೨-೦೦ ಪಿ. ಎಂ.

ಮಾನ್ಯ ಸಭಾಧ್ಯಕ್ಷರೇ, ನಮ್ಮ ಈ ಕಡೆ ಕುಳಿತಿರುವ ೬೬ ಜನ ಸದಸ್ಯರಿಗೂ ಮಾತನಾಡಲಿಕ್ಕೆ ಅವಕಾಶ ಕೊಡಿ ಎಂದಲ್ಲ, ಈ ನಿಲುವಳಿ ಸೂಚನೆಯಲ್ಲಿ ಯಾರು ರುಜು ಮಾಡಿರುತ್ತಾರೋ ಅಂಥಾವರಿಗೆ ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ನಾವು ಕೇಳುತ್ತಾ ಇರುವುದು, ಇದರಿಂದ ನಿಮಗೆ ರೂಲಿಂಗ್ ಕೊಡುವುದಕ್ಕೂ ಸಹ ಅನುಕೂಲವಾಗುತ್ತದೆ. ನಾಲ್ಕಾರು ಜನ ಸದಸ್ಯರಿಗೆ ಮಾತ ನಾಡುವುದಕ್ಕೆ ತಾವು ಅವಕಾಶ ಕೊಟ್ಟರೆ ಅವರು ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಅನುಕೂಲ ವಾಗುತ್ತದೆ.

ಅಧ್ಯಕ್ಷರು.—ನನ್ನ ಮರ್ಜಿಯನ್ನು ನನಗೆ ಬಿಡಿ. ನಿಮಗೆ ಮಾತನಾಡುವುದಕ್ಕೆ ಅವಕಾಶ ಇಲ್ಲದಿದ್ದರೂ ಕೂಡ ನನ್ನ ಮರ್ಜಿ ಉಪಯೋಗಿಸಿ ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟೆನೋ ಇಲ್ಲವೋ ಹೇಳಿ ?

ಶ್ರೀ ಎಸ್. ಬಂಗಾರಪ್ಪ.— ಇದರಿಂದ ಏನು ನಾನು ಇಟ್ಟುಕೊಂಡಿಲ್ಲ. ನಮಗೆ ಪುಣ್ಯ ಸಿಕ್ಕಿತು ಎನ್ನುವ ಭಾವನೆ ಬೇಡ. ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ನಮ್ಮ ಹಕ್ಕು ಏನು ಇದೆ ಅದನ್ನು ಸದಾ

ಚಲಾಯಿಸುವುದಕ್ಕೆ ತಾವು ಅವಕಾಶ ಕೊಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಈ ಬಗ್ಗೆ ನಾಲ್ಕಾರು ಜನ ಮಾತನಾಡಿದ ಮೇಲೆ ಅಂತಿಮವಾಗಿ ತಾವು ರೂಲಿಂಗ್ ಕೊಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.---ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳುತ್ತೇನೆ.

ಅಧ್ಯಕ್ಷರು.---ದಯವಿಟ್ಟು ಕೂಡಿರಿ. ಈಗಾಗಲೇ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಮಾನ್ಯ ಬಂಗಾರಪ್ಪನವರು ಅಡ್ಮಿಸಿಬಿಲಿಟಿ ಬಗ್ಗೆ ಮತ್ತು ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಇನ್ನು ಸಾಕು. ಯಾವುದಕ್ಕೆ ಅವಕಾಶ ಕೊಡಬೇಕು, ಯಾವುದಕ್ಕೆ ಅವಕಾಶ ಕೊಡಬಾರದು ಎನ್ನುವುದು ನನ್ನ ಮರ್ಜಿಗೆ ಸೇರಿದ್ದು.

ಶ್ರೀ ಎಸ್. ಬಂಗಾರಪ್ಪ.---ಆದರೆ ಸದಸ್ಯರ ಹಕ್ಕನ್ನು ಮೊಟಕು ಮಾಡುವುದು ಸರಿಯಲ್ಲ. ಸದಸ್ಯರ ಹಕ್ಕನ್ನು ಮೊಟಕು ಮಾಡಬಾರದು.

(ಗೊಂದಲ)

ಅಧ್ಯಕ್ಷರು.---ಸದಸ್ಯರ ಹಕ್ಕನ್ನು ಯಾರೂ ಮೊಟಕು ಮಾಡುವುದಿಲ್ಲ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ಪುಸ್ತಕ ಏನು ಇದೆ ಈ ಪ್ರಕಾರ ನನಗೆ ಅಧಿಕಾರ ಕೊಟ್ಟಿದ್ದೀರಿ. ಅದರ ಪ್ರಕಾರ ನಾನು ಮಾಡುತ್ತೇನೆ. ದಯವಿಟ್ಟು ತಾವೆಲ್ಲಾ ಈಗ ಕುಳಿತುಕೊಳ್ಳಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.---ಈ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ತಾವು ನಮ್ಮ ಅಭಿಪ್ರಾಯವನ್ನೂ ಕೇಳಬೇಕು.

ಅಧ್ಯಕ್ಷರು.---ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈಗಾಗಲೇ ಈ ವಿಚಾರದಲ್ಲಿ ಮಾತನಾಡುವುದಕ್ಕೆ ನಾನು ಸಾಕಷ್ಟು ಕಾಲಾವಕಾಶ ಕೊಟ್ಟಿದ್ದೇನೆ. ದಯವಿಟ್ಟು ತಾವು ಕೂಡಿರಿ.

(ಗೊಂದಲ)

SRI M. VEERAPPA MOILY.---There is a crisis in the legislature.

ಶ್ರೀ ಎಸ್. ಬಂಗಾರಪ್ಪ.---ಪಾಯಿಂಟ್ ಆಫ್ ಆರ್ಡರ್ ಬಗ್ಗೆ ನಮ್ಮ ಕಡೆಯವರದ್ದೂ ತಾವು ಕೇಳಬೇಕು.

ಅಧ್ಯಕ್ಷರು.---ಅವಕಾಶ ಕೊಡಬಾರದು ಎಂದು ಅವರು ಎತ್ತಿದ್ದರು. ಆದರೂ ಕೂಡ ನಾನು ತಮಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.---ನಮಗೂ ಸಹ ತಾವು ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಪಟವಂಕಿ ರತ್ನಾಕರ್.---ಇನ್ನೂ ಕೆಲವು ಹೊಸ ವಿಚಾರಗಳು ಇರುವುದರಿಂದ ಅವರಿಗೂ ಕೂಡ ಮಾತನಾಡುವುದಕ್ಕೆ ತಾವು ಅವಕಾಶ ಕೊಡಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ್.---ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ.

ಅಧ್ಯಕ್ಷರು.---ಮೊದಲೇ ಒಂದು ಪಾಯಿಂಟ್ ಆಫ್ ಆರ್ಡರ್ ಇರುವುದರಿಂದ ಅದರ ಮೇಲೆ ಇನ್ನೊಂದು ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.---ಎರಡನೇ ಪಾಯಿಂಟ್ ಆಫ್ ಆರ್ಡರ್ ಎತ್ತಬಹುದು, ಇದೆ. ಅದರ ಬಗ್ಗೆ ನಾನು ಕನ್‌ವಿನ್ಸ್ ಮಾಡುತ್ತೇನೆ, ಕೇಳಿ.

ಅಧ್ಯಕ್ಷರು ---ವಿರೋಧ ಪಕ್ಷದ ನಾಯಕರು ಎಲ್ಲವನ್ನೂ ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.---ವಿರೋಧ ಪಕ್ಷದ ನಾಯಕರು ಎಲ್ಲವನ್ನೂ ಹೇಳಿದ್ದಾರೆ ಎಂದರೆ ಹಾಗಾದರೆ ನಾವೇನು ಹೇಳುವುದು ಬೇಡವೋ ? ಬೇಡ ಎಂದರೆ ನಾವು ಇಲ್ಲಿಂದ ಹೋಗಿ ಬಿಡುತ್ತೇವೆ, ನೀವಿಬ್ಬರೇ ಏನು ಬೇಕಾದರೂ ಮಾಡಿಕೊಳ್ಳಿ.

(ಗೊಂದಲ)

ಅಧ್ಯಕ್ಷರು.--ಎಲ್ಲರ ಪರವಾಗಿ ಬಂಗಾರಪ್ಪನವರು ಹೇಳಿದ್ದಾರೆ. ಕನ್‌ವೆನ್‌ಷನ್ ಏನು ಇದೆ ಎಂದರೆ ನಿಲುವಳಿ ಸೂಚನೆ ತಂದಾಗ ವಿರೋಧಪಕ್ಷದ ನಾಯಕರೊಬ್ಬರೇ ಮಾತನಾಡುತ್ತಿದ್ದರು, ಆದುದರಿಂದ ಅವರಿಗೆ ಹೆಚ್ಚು ಅವಕಾಶ ಕೊಟ್ಟಿದ್ದೇವೆ. ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದರೂ ಕೂಡ ನಾನು ನನ್ನ ಮರ್ಜಿಯನ್ನು ಉಪಯೋಗಿಸಿ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಹೀಗೆಲ್ಲಾ ಎಲ್ಲಾ ಸದಸ್ಯರೂ ಎದ್ದು ನಿಂತುಕೊಂಡು ಮಾತನಾಡಿದರೆ ಅವೆಲ್ಲಾ, ರಿಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಮ್ಮ ರಿಕಾರ್ಡ್ ಕಟ್ಟಿಕೊಂಡು ನನಗೆ ಏನು ಬೇಕು. ನಾನು ಇದರ ಬಗ್ಗೆ ಮಾತನಾಡಲೇ ಬೇಕು. ಬೇಡ ಎಂದರೆ ನನ್ನನ್ನು ಹೊರಗೆ ಹಾಕಿಸಿ, ನಾನು ಕುಳಿತುಕೊಳ್ಳುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಅವರ ಹಕ್ಕನ್ನು ಚಲಾಯಿಸುತ್ತಿದ್ದಾರೆ, ನೀವು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಅವರಿಗೆ ಅವಕಾಶ ಕೊಡುವುದಿಲ್ಲ ಎಂದರೆ ಹಾಗಾದರೆ ಈ ಸದನವನ್ನು ನೀವೇ ನಡೆಸಿ. ಅವಕಾಶ ಕೊಡುವುದಿಲ್ಲ ಎಂದರೆ ಅದು ಸರಿಯಲ್ಲ.

(ಗೊ ಂ ದ ಲ)

ಅಧ್ಯಕ್ಷರು.—ನೀವು ಸಾಕಷ್ಟು ಹೇಳಿದ್ದೀರಿ, ನಾನು ಕೇಳಿದ್ದೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯಿಲಿ.—ಇದು ನಮ್ಮ ಮೂಲಭೂತವಾದ ಹಕ್ಕು. ಸದಸ್ಯರ ಹಕ್ಕನ್ನು ತಾವು ಕಾದಿರಿಸಬೇಕು. ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನನ್ನ ಪಾಯಿಂಟ್ ಆಫ್ ಆರ್ಡರ್ ಏನು ಇದೆ ಎನ್ನುವುದು ಕೇಳಿ.

ಅಧ್ಯಕ್ಷರು.—ಹೇಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನನ್ನ ಪಾಯಿಂಟ್ ಆಫ್ ಆರ್ಡರ್ ಈ ರೀತಿ ಇದೆ. ಶ್ರೀಮಾನ್ ಎಸ್. ಆರ್. ಬೊಮ್ಮಾಯಿಯವರು ಅವರು ಎತ್ತಿದ ಪಾಯಿಂಟ್ ಆಫ್ ಆರ್ಡರ್ ಏನು ಅಂದರೆ ನಾವು ಈಗ ಕಳುಹಿಸಿರತಕ್ಕಂಥ ನಿಲುವಳಿ ಸೂಚನೆಗೆ ಅನುಮತಿಯನ್ನು ಕೊಡುವ ವಿಚಾರದಲ್ಲಿ ಪೂರ್ವಭಾವಿಯಾಗಿ ಯಾವುದೇ ರೀತಿಯ ಅವಕಾಶ ಕೊಡಕೂಡದು ಎನ್ನುವುದೇ ಅವರ ಪಾಯಿಂಟ್ ಆಫ್ ಆರ್ಡರ್. ಅವರ ಪಾಯಿಂಟ್ ಆಫ್ ಆರ್ಡರ್ ಸರಿಯಲ್ಲ ಎನ್ನುವುದು ಈ ನಿಯಮಾವಳಿಯಲ್ಲಿ ಏನು ಇದೆ ಎನ್ನುವುದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ನಿಯಮಾವಳಿಯ ರೂಲು ೫೯ರಲ್ಲಿ ಈ ರೀತಿ ಹೇಳಿದೆ : ಏನೆಂದರೆ—

"ಈ ನಿಯಮಗಳ ಉಪಬಂಧಗಳಿಗೊಳಪಟ್ಟು, ಸಾರ್ವಜನಿಕವಾಗಿ ಅತ್ಯಂತ ಮಹತ್ವವುಳ್ಳ ಒಂದು ನಿರ್ಧಿಷ್ಟ ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ಸದನದ ಕಾರ್ಯಕಲಾಪಗಳ ನಿಲುವಳಿ ಬಗ್ಗೆ ಸೂಚನೆಯನ್ನು ತರಬಹುದು'' ಎಂದು ಇದೆ. ಈ ಮೂಲಭೂತವಾದ ಒಂದು ರೂಲು ಇದೆ.

ಹಾಗೆಯೇ ಈ ನಿಯಮ ೬೩ (೧)ರಲ್ಲಿ ಈ ರೀತಿ ಹೇಳಿದೆ. ಏನೆಂದರೆ—

"ಅಧ್ಯಕ್ಷರು, ೬೦ನೇ ನಿಯಮದ ಮೇರೆಗೆ ಒಪ್ಪಿಗೆ ಕೊಟ್ಟರೆ ಮತ್ತು ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿದೆಯೆಂದು ಅಭಿಪ್ರಾಯಪಟ್ಟರೆ ಪ್ರಶ್ನೋತ್ತರಗಳ ತರುವಾಯ ಹಾಗೂ ಕಾರ್ಯಕ್ರಮಗಳ ಪಟ್ಟಿಯಲ್ಲಿರುವ ಇತರ ವಿಷಯಗಳನ್ನು ಪ್ರಾರಂಭಿಸುವುದಕ್ಕೆ ಮುಂಚೆ ಸಂಬಂಧಪಟ್ಟ ಸದಸ್ಯನ ಹೆಸರನ್ನು ಕರೆಯಬೇಕು. ಅಂಥ ಸದಸ್ಯನು ತನ್ನ ಸ್ಥಾನದಲ್ಲಿ ಎದ್ದು ನಿಂತು ಸದನದಲ್ಲಿ ನಿಲವಳಿ ಸೂಚನೆಯನ್ನು ತರಲು ಅನುಮತಿ ಕೇಳತಕ್ಕದ್ದು, ಎಂದು ಇದೆ.

ಹಾಗೆಯೇ ಮುಂದುವರೆದು ಹೇಳುತ್ತೇನೆ—ಏನೆಂದರೆ

"ಪರಂತು, ಅಧ್ಯಕ್ಷರು, ೭೦ನೇ ನಿಯಮದ ಮೇರೆಗೆ ತನ್ನ ಒಪ್ಪಿಗೆ ನೀಡಲು ನಿರಾಕರಿಸಿದರೆ ಅಥವಾ ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟರೆ ತಾನು ಅವಶ್ಯಕವೆಂದು ಭಾವಿಸಿದರೆ ನಿಲುವಳಿ ಸೂಚನೆಯನ್ನು ಓದಿ ಹೇಳಬಹುದು ಮತ್ತು ತಾನು ನಿಲುವಳಿ ಸೂಚನೆಯನ್ನು ತರಲು ಒಪ್ಪಿಗೆಯನ್ನು ನಿರಾಕರಿಸುವುದರ ಹಾಗೂ ನಿಲುವಳಿ ಸೂಚನೆ ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟ ಕಾರಣಗಳನ್ನು ತಿಳಿಸಬಹುದು" ಎಂದು ಇದೆ.

ಹಾಗೆಯೇ ಮುಂದುವರೆದು ಹೇಳುತ್ತೇನೆ :

"ಮತ್ತು ಪರಂತು ನಿಲುವಳಿ ಸೂಚನೆಯಲ್ಲಿ ತಿಳಿಸಿರುವ ವಿಷಯದ ಬಗ್ಗೆ, ಪೂರ್ಣ ಸಂಗತಿ ಅಧ್ಯಕ್ಷರ ಬಳಿ ಇಲ್ಲದಿದ್ದರೆ ಅವರು ಒಪ್ಪಿಗೆ ಕೊಡುವ ಅಥವಾ ನಿರಾಕರಿಸುವುದಕ್ಕೆ ಮುಂಚೆ ನಿಲುವಳಿ ಸೂಚನೆಯನ್ನು ಸದನದಲ್ಲಿ ಓದಬೇಕು ಹಾಗೂ ಮಂತ್ರಿಯಿಂದ ಅಥವಾ ಸಂಬಂಧಪಟ್ಟ ಸದಸ್ಯರಿಂದ ಸಂಕ್ಷಿಪ್ತ ವಿವರಣೆಯನ್ನು ಪಡೆಯಬೇಕು. ಅನಂತರ ನಿಲುವಳಿ ಸೂಚನೆಯನ್ನು ಅಂಗೀಕರಿಸುವ ವಿಷಯದಲ್ಲಿ ತನ್ನ ನಿರ್ಣಯವನ್ನು ತಿಳಿಸತಕ್ಕದು" ಎಂದು ಇದೆ.

ಈ ನಿಯಮಾವಳಿ ಪ್ರಕಾರ ಈ ರೀತಿ ಇದೆ.

ಮಾನ್ಯ ಅಧ್ಯಕ್ಷರೆ, ಇವೊತ್ತು ಏನಾಯಿತು ಎಂದರೆ ನಾವು ಬೆಳಿಗ್ಗೆ ೧೦-೫೫ ಕ್ಕೆ ನಮ್ಮ ನಿಲುವಳಿ ಸೂಚನೆಯನ್ನು ತಮಗೆ ಕೊಟ್ಟೆವು. ತಮಗೆ ಒಂದು ಗಂಟೆ ಮುಂಚಿತವಾಗಿ ಕೊಟ್ಟಿದ್ದರೆ ತಾವು ಛೇಂಬರಿನಲ್ಲಿ ವಿಚಾರ ಮಾಡುವುದಕ್ಕೆ ಅವಕಾಶವಾಗುತ್ತಿತ್ತು. ತಾವು ಸದನಕ್ಕೆ ಬಂದ ತಕ್ಷಣ ತಮ್ಮ ರೂಲಿಂಗ್ ಹೇಗಿರುತ್ತದೆ ಅಂದರೆ ಒಮ್ಮೊಮ್ಮೆ ಬಾಯಲ್ಲಿ ರೂಲಿಂಗ್ ಕೊಡುತ್ತೀರಿ ಒಮ್ಮೊಮ್ಮೆ ನಿಮ್ಮ ವರ್ತನೆಯೇ ರೂಲಿಂಗಾಗಿ ಪರಿವರ್ತನೆಯಾಗುತ್ತದೆ.

(ಗೊಂದಲ)

ಅಧ್ಯಕ್ಷರು.— ಈಗ ತಾವು ರೂಲ್ ಓದಿ ಹೇಳಿದಿರಲ್ಲ, ನನಗೆ ಗೊತ್ತಾಯಿತು.

ಶ್ರೀ ಕೆ. ಹೆಚ್. ಶ್ರೀನಿವಾಸ್.— ನಾನು ಕನ್ನಡದಲ್ಲಿ ಹೇಳಿದರೆ ಅವರಿಗೆ ಅರ್ಥವಾಗುವುದಿಲ್ಲವೆಂದು ಕಾಣಿಸುತ್ತದೆ.

ಅಧ್ಯಕ್ಷರು.— ನೀವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ನಾನು ಪೂರ್ತಿ ಹೇಳುತ್ತೇನೆ ಕೇಳಿ.

ಅಧ್ಯಕ್ಷರು.— ನೀವು ರೂಲ್ ಓದಿದ್ದನ್ನು ನಾನು ತಿಳಿದುಕೊಂಡೆ.

(ಗೊಂದಲ)

ಅಧ್ಯಕ್ಷರು.— ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ಬಿ. ಎಸ್. ಬಚ್ಚೇಗೌಡ.— ಅಧ್ಯಕ್ಷರಿಗೆ ಬುದ್ಧಿ ಕಲಿಸುವ ಮಟ್ಟಕ್ಕೆ ಇವರು ಬಂದಿದ್ದಾರೆ,

ಶ್ರೀ ಕೆ. ಹೆಚ್. ಶ್ರೀನಿವಾಸ್.— ನಾನು ಕನ್ನಡದಲ್ಲಿ ಏನು ಹೇಳಿದೆ ಎನ್ನುವುದನ್ನು ಇಂಗ್ಲೀಷ್ ನಲ್ಲಿ ಹೇಳುತ್ತೇನೆ. The exact translation of that is, Hon'ble Speaker's ruling need not be explicit' sometimes implicitly also. ನೀವು ಒಬ್ಬರನ್ನು ಮಾತನಾಡಿ ಎಂದರೆ, ಅವರು ನನಗೆ ಮಾತನಾಡಲಿಕ್ಕೆ ಅಪ್ಪಣೆ ಕೊಟ್ಟಿದ್ದಾರೆ ಎಂದು ಹೇಳುವುದಿಲ್ಲ. ನೀವುಹೆಸರನ್ನು ಹೇಳಿದರೆ ಅಪ್ಪಣೆ ಕೊಟ್ಟಿದ್ದೀರಿ ಎಂದಾಗುತ್ತದೆ ಎನ್ನುವ ಅರ್ಥದಲ್ಲಿ ನಾನು ಹೇಳಿದರೆ, ಅವರು ನಿಮ್ಮ ಮೇಲೆ ನಾನು ಏನೋ ಹೇಳಿಬಿಟ್ಟೆ ಎಂದರೆ ನಾನು ಏನೂ ಹೇಳಿಲ್ಲ.

ಶ್ರೀ ಜಿ. ನಾರಾಯಕುಮಾರ್.— ಅವರು ತಮ್ಮ ಪೀಠಕ್ಕೆ ಅವಮಾನ ಮಾಡಿದ್ದಾರೆ. ಅದನ್ನು ಅವರು ವಾಪಸ್ ತೆಗೆದುಕೊಳ್ಳಬೇಕು. ತಮ್ಮ ವರ್ತನೆ ಸರಿಯಿಲ್ಲ ಎಂದು ಹೇಳಿದ್ದಾರೆ.

ಅಧ್ಯಕ್ಷರು,— ಈ ರೀತಿ ಮಾತನಾಡಿದರೆ ಯಾವುದೂ ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಇವೊತ್ತು ಸಭೆಗೆ ತಾವು ಬಂದ ತಕ್ಷಣವೇ ತಾವು ಅದರ ಬಗ್ಗೆ...

ಶ್ರೀ ಜಿ. ನಾರಾಯಣಕುಮಾರ್.— ಮೊದಲು ಅವರು ಕ್ಷಮಾಪಣೆ ಕೇಳಬೇಕು. ಅವರು ತಮಗೆ, ತಮ್ಮ ಪೀಠಕ್ಕೆ ಅವಮಾನ ಮಾಡಿದ್ದಾರೆ, ತಾವು ಕಡತ ತೆಗೆಸಿನೋಡಿ. ಅವರು ತಮಗೆ ಕ್ಷಮಾಪಣೆ ಕೇಳಬೇಕು. ಸದನಕ್ಕೆ ಕ್ಷಮಾಪಣೆ ಕೇಳಬೇಕು ಸಭಾಧ್ಯಕ್ಷರಿಗೆ ಅಪಮಾನ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು.— ದಯಮಾಡಿಟ್ಟು ಎಲ್ಲರೂ ಕೂಡಿರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ತಮಗೆ ಅವಮಾನ ಮಾಡಿದ್ದೇನೆಂದು ತಾವು ಹೇಳಿದರೆ ಒಪ್ಪಿಕೊಳ್ಳುತ್ತೇನೆ. ನಾನು ಹೇಳಿದ ತಾತ್ಪರ್ಯ ಏನೆಂದರೆ, ರೂಲಿಂಗ್ ಎನ್ನತಕ್ಕಂಥಾದ್ದು ಯಾರಿಗೂ ಬಾಯಲ್ಲಿ ಅಧ್ಯಕ್ಷರೇ ಹೇಳಬೇಕಾದ್ದಿಲ್ಲ, ಕೆಲವು ಸಂದರ್ಭದಲ್ಲಿ ಯಾರಿಗೆ ಅವಕಾಶ ಕೊಡುತ್ತೀರೋ ಅದು ರೂಲಿಂಗ್ ಆಗಿ ಇಂಪ್ಲೈಡಾಗಿ ಪರಿವರ್ತನೆಯಾಗುತ್ತದೆ ಎಂದು ನಾನು ಹೇಳಿದ್ದುದು. ಇವೊತ್ತು ಬೆಳಿಗ್ಗೆ ತಾವು ಮಾನ್ಯ ವಿರೋಧ ಪಕ್ಷದ ನಾಯಕರಾದ ಬಂಗಾರಪ್ಪನವರು ನಿಂತುಕೊಳ್ಳುವುದಕ್ಕೆ ಮುಂಚಿತವಾಗಿ......

ಶ್ರೀ ಜಿ. ನಾರಾಯಣಕುಮಾರ್.— ಮೊದಲು ಅವರು ಕ್ಷಮಾಪಣೆ ಕೇಳಬೇಕು.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು.—ಈಗ ಬಂದಿರುವ ಮೂಲ ಪ್ರಶ್ನೆ ಏನೆಂದರೆ, ಇಷ್ಟು ದಿವಸ ಅಡ್ಜರ್ನ್‌ಮೆಂಟ್ ಮೋಷನ್‌ಗೆ...

ಶ್ರೀ ಎಂ. ಎಸ್. ಕೃಷ್ಣನ್.— ಸದನದ ಗೌರವವನ್ನು ಘನತೆಯನ್ನು ಎತ್ತಿಹಿಡಿಯುವುದಕ್ಕೋಸ್ಕರ ಎಲ್ಲಾ ಸದಸ್ಯರು ಇದ್ದಾರೆ. ಮಾನ್ಯ ಸಭಾಪತಿಗಳ ಗೌರವವನ್ನು ಕಾಪಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ. ಅವರಿಗೆ ಅಪಮಾನವಾಗುವ ರೀತಿಯಲ್ಲಿ ಯಾರೇ ಹೇಳಿದರೂ ಸಹ ಅದು ಅಷ್ಟು ಸಮಂಜಸವಾದುದಲ್ಲ, ಅಷ್ಟು ಗೌರವವೂ ಅಲ್ಲ ಎನ್ನುವುದು ನನ್ನ ಅಭಿಪ್ರಾಯ. ಆದರೆ ಆ ರೀತಿ ಆಗಿದೆಯೋ ಎನ್ನುವುದು ಇಲ್ಲಿರುವ ಪ್ರಶ್ನೆ. ನನಗೆ ಕಂಡು ಬಂದಹಾಗೆ ಒಂದು ಮಾತು ತಪ್ಪೋ ಏನೋ ? ಆ ರೀತಿ ಮಾನ್ಯ ಶ್ರೀನಿವಾಸ್‌ರವರು ಸಭಾಧ್ಯಕ್ಷರ ವರ್ತನೆ ಕೆಲವು ಸಮಯ...

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.— ಕೆಲವು ಸಮಯ ಬರೆದು ಲಿಖಿತ ಮೂಲಕವಾಗಿ, ಕೆಲವು ಸಮಯ ಬಾಯಿ ಮೂಲಕವಾಗಿ ಕೊಡಲಾಗುತ್ತದೆ. ಕೆಲವು ಸಮಯ ಹೀಗಾಗುತ್ತದೆ ಎಂದು ಹೇಳಿದರು. ಆದರೆ ಅವರು ವರ್ತನೆ ಎನ್ನುವ ಪದವನ್ನು ಉಪಯೋಗ ಮಾಡದೇ ಇದ್ದರೆ ಚೆನ್ನಾಗಿರುತ್ತಿತ್ತು.

ಅಧ್ಯಕ್ಷರು.— ಈಗ ಅಡ್ಮಿಸಿಬಿಲಿಟಿ ಬಗ್ಗೆ ಸ್ವಲ್ಪ ಹೇಳಿ.

ಶ್ರೀ ಜಿ. ನಾರಾಯಣಕುಮಾರ್.— ಸಭಾಧ್ಯಕ್ಷರೆ, ತಾವು ತಪ್ಪಾಗಿ ವರ್ತಿಸಿದ್ದೀರಾ ಹೇಳಿ, ಅವರು ಅದನ್ನು ವಾಪಸ್ ತೆಗೆದುಕೊಳ್ಳಬೇಕು, ಕ್ಷಮಾಪಣೆ ಕೇಳಬೇಕು.

ಶ್ರೀ ಕೆ. ಹೆಚ್. ಶ್ರೀನಿವಾಸ್.— ನಮ್ಮ ಮೋಷನ್ ಇರತಕ್ಕಂಥಾದ್ದು ವಿಧಾನ ಪರಿಷತ್ತಿನ ನಡವಳಿಕೆಯ ಬಗ್ಗೆ ಯಾವುದೇ ಕಾಮೆಂಟ್ ಮಾಡುವುದಕ್ಕೆ ಅಲ್ಲ. ಎರಡು ಸದನಗಳು ಇದ್ದರೂ ಕೂಡ ಸರ್ಕಾರ ಇರತಕ್ಕಂಥಾದ್ದು ಒಂದೇ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.— ಅವರು ತಮ್ಮ ಪೀಠಕ್ಕೆ ಅಗೌರವ ಮಾಡಿದ್ದಾರೆ, ಸದನಕ್ಕೆ ಅಗೌರವ ಮಾಡಿದ್ದಾರೆ.

ಅಧ್ಯಕ್ಷರು.— ಅಡ್ಮಿಸಿಬಿಲಿಟಿ ಪ್ರಶ್ನೆ ಬಂದಿದೆ, ಅದರ ಬಗ್ಗೆ ಮಾತನಾಡುವುದಕ್ಕೆ ಶ್ರೀನಿವಾಸ್‌ರವರಿಗೆ ಲಾಸ್ಟ್ ಛಾನ್ಸ್ ಕೊಟ್ಟಿದ್ದೇನೆ, ಅವರು ಮಾತನಾಡಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ.— ನಾನೂ ಮಾತನಾಡುತ್ತೇನೆ.

(ಗೊಂದಲ)

ಅಧ್ಯಕ್ಷರು.— ನೀವು ಸ್ವಲ್ಪ ಸಮಾಧಾನ ಮಾಡಿಕೊಳ್ಳಿ.

ಶ್ರೀ ಜಿ. ನಾರಾಯಣಕುಮಾರ್.— ಅವರು ನಿಮ್ಮ ವರ್ತನೆ ಸರಿಯಿಲ್ಲ ಎಂದು ಹೇಳಿರುವುದನ್ನು ಕಡತದಿಂದ ತೆಗೆಸಿ ಹಾಕಿ ದಯವಿಟ್ಟು.

ಶ್ರೀ ಜಿ. ನಾರಾಯಣಕುಮಾರ್.— ಇವತ್ತು ಸಭಾಧ್ಯಕ್ಷರನ್ನು ಟೀಕೆ ಮಾಡಿದ್ದಾರೆ, ನಾಳೆ ಬೆಳಿಗ್ಗೆ ಇನ್ನೊಂದು ಮಾಡುತ್ತಾರೆ.

ಅಧ್ಯಕ್ಷರು.— ಶ್ರೀನಿವಾಸ್‌ರವರೇ ತಾವು ಹೇಳಿದ್ದನ್ನು ನಾನು ತಿಳಿದುಕೊಂಡೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ಸದನಗಳು ಎರಡು ಇದ್ದರೂ ಕೂಡಾ ಸರ್ಕಾರ ಒಂದೇ ಇದೆ. ಸರ್ಕಾರ ಈ ಸದನಕ್ಕೆ ಜವಾಬ್ದಾರಿ...

ಶ್ರೀ ಬಿ. ಎನ್. ಬಚ್ಚೇಗೌಡ.—ಅಧ್ಯಕ್ಷರೆ, ತಮ್ಮ ಬಗ್ಗೆ ಅವರು ಬಹಳ ಹಗುರವಾಗಿ ಮಾತ ನಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು.— ಇದು ರಿಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.— ದಯವಿಟ್ಟು ಸ್ವಲ್ಪ ಕೂಡಿ. ಮಾನ್ಯ ನಾರಾಯಣಕುಮಾರ್‌ರವರೇ ದಯವಿಟ್ಟು ಕೂಡಿ. ನಾನು ರೂಲಿಂಗ್ ಕೊಡುತ್ತೇನೆ, ದಯವಿಟ್ಟು ಕೂಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ವಿಧಾನ ಪರಿಷತ್ತಿನ ಸಭಾಪತಿಗಳ ಯಾವ ವರ್ತನೆಯನ್ನೂ ನಾವು ಇಲ್ಲಿ ಖಂಡಿಸಲಿಕ್ಕಾಗಲೀ, ಚರ್ಚಿಸುವುದಕ್ಕಾಗಲಿ ನಾವು ಈ ಮೋಷನ್ ಕೊಟ್ಟಿಲ್ಲ. ವಿಧಾನ ಪರಿಷತ್ತು, ವಿಧಾನ ಸಭೆ ಬೇರೆ ಬೇರೆ ಇದ್ದರೂ ಕೂಡ...

ಶ್ರೀ ಜಿ. ನಾರಾಯಣಕುಮಾರ್.— ವರ್ತನೆ ಸರಿಯಿಲ್ಲ ಎಂದು ಹೇಳಿರುವುದನ್ನು ಕಡತದಲ್ಲಿ ನೋಡಿ ತೆಗೆಸಿ ಹಾಕಿ.

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಹೇಳುವುದೇನೆಂದರೆ ವಿಧಾನ ಪರಿಷತ್ತು ಮತ್ತು ವಿಧಾನಸಭೆ ಎಂದು ಎರಡು ಸಭೆಗಳಿದ್ದರೂ ಕೂಡ ಎರಡು ಸರ್ಕಾರವಿಲ್ಲ. ವಿಧಾನ ಪರಿಷತ್ತಿಗೆ ಬೇರೆ ಸರ್ಕಾರ, ವಿಧಾನಸಭೆಗೆ ಬೇರೆ ಸರ್ಕಾರವೆಂದು ಇಲ್ಲ. ಸರ್ಕಾರವಿರತಕ್ಕಂಥಾದ್ದು ಒಂದೇ. ನಾವು ಯಾವುದೇ ಒಂದು ಸೂಚನೆಯನ್ನು ಇಲ್ಲಿ ತಂದರೂ ಕೂಡ ಸರ್ಕಾರದ ಜವಾಬ್ದಾರಿಯ ಬಗ್ಗೆ ಮಾತನಾಡುತ್ತೇವೆಯೇ ಹೊರತು ಇನ್ನೊಂದು ಸಭೆಯ ಆಗುಹೋಗುಗಳ ಬಗ್ಗೆ ಅಲ್ಲ. ವಿಧಾನ ಪರಿಷತ್ತಿನ ನಡವಳಿಕೆಯನ್ನು ಒಂದುಕಡೆ ವಿಂಗಡಣೆ ಮಾಡಿದರೂ ಕೂಡ, ವಿಧಾನ ಪರಿಷತ್ತಿನಲ್ಲಿ ಇಂತಹ ವಿಚಾರ ಚರ್ಚೆಯಾಗುವುದಕ್ಕೆ ಅವಕಾಶ ಕೊಡದೆ ವಿಧಾನ ಪರಿಷತ್ತನ್ನು ಮುಂದೆ ಹಾಕುವಂತಹ ವಿಷಯವು ಸಾರ್ವಜನಿಕ ದೃಷ್ಟಿಯಲ್ಲಿ ಮಹತ್ವವನ್ನು ಪಡೆದಿದೆ. ಸಾರ್ವಜನಿಕ ಮಹತ್ವ ಇರತಕ್ಕಂತಹ ಯಾವುದೇ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಬಹುದು. ಅದಕ್ಕೆ ಚೌಕಟ್ಟನ್ನು ತಾವು ಹಾಕಬೇಕಾಗು ತ್ತದೆ. ಆ ಚೌಕಟ್ಟಿನೊಳಗೆ ನಾವು ಮಾತನಾಡಬೇಕಾಗುತ್ತದೆ. ನೆಗೋಸಿಯೇಷನ್ ಮೂಲಕ ಅದನ್ನು ಸರಿಪಡಿಸಬಹುದು ಅಥವಾ ಇಲ್ಲಿ ಮಾತನಾಡುವುದು ಬೇಡ ಒಳಗಡೆ ಮಾತನಾಡೋಣವೆಂದು ಹೇಳ ಬಹುದು. ಸರ್ಕಾರದ ಜವಾಬ್ದಾರಿಯ ಬಗ್ಗೆ ಅಂಥಾದ್ದನ್ನು ಗಮನಕ್ಕೆ ತಗೆದುಕೊಳ್ಳಬೇಕೆಂದು ಈ ಸೂಚನೆಯನ್ನು ತಂದಿದ್ದೇವೆ. ಈ ವಿಷಯದ ಚರ್ಚೆಯನ್ನು ಎದುರಿಸತಕ್ಕಂತಹ ಧೈರ್ಯ ಇವರಿಗಿಲ್ಲ ಎನ್ನತಕ್ಕಂಥಾದ್ದು ಜನಜನಿತವಾಗುತ್ತಿದೆ.

(ಗೊಂದಲ)

ಅಧ್ಯಕ್ಷರು.—ನಾನು ರೂಲಿಂಗ್ ಕೊಡುತ್ತೇನೆ ನನಗೆ ಅವಕಾಶ ಕೊಡಿ. ದಯವಿಟ್ಟು [illegible] ಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ನೀವು ಈ ರೀತಿ ಮಾತನಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಇಲ್ಲಿಯವರೆಗೆ ಸರಿಯಿತ್ತು. ಈಗ ಏಕೆ ಹೀಗೆ?...

ಅಧ್ಯಕ್ಷರು.—ಈ ಕಡೆಯವರಿಗೂ ಅವಕಾಶ ಕೊಡುವುದಿಲ್ಲ, ಆ ಕಡೆಯವರಿಗೂ ಕೊಡುವುದಿಲ್ಲ. ಯಾರಿಗೂ ಅವಕಾಶ ಕೊಡುವುದಿಲ್ಲ. ರೂಲಿಂಗ್ ಕೊಡುತ್ತೇನೆ ದಯವಿಟ್ಟು ಕುಳಿತುಕೊಳ್ಳಿ. ನೀವೇನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ರೆಕಾರ್ಡ್‌ಗೆ ಹೋಗದೇ ಇರತಕ್ಕಂತಹ ಅಪರಾಧವೇನು ಮಾಡಿದ್ದೇವೆ.

ಅಧ್ಯಕ್ಷರು.—ಇಬ್ಬರಿಗೆ ಅವಕಾಶ ಕೊಟ್ಟಿದ್ದೇನೆ. ವಿರೋಧಪಕ್ಷದ ನಾಯಕರಿಗೆ ಮಾತ್ರ...

(ಗೊಂದಲ)

ಅಧ್ಯಕ್ಷರು.—ಇದು ಸರಿಯಲ್ಲ. ನಾನು ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಈಗ ನನಗೆ ನೀವು ಅವಕಾಶ ಕೊಡುತ್ತೀರೋ ಇಲ್ಲವೋ? ವಿರೋಧಪಕ್ಷದ ನಾಯಕರು ಮತ್ತು ಶ್ರೀನಿವಾಸ್‌ರವರು ಸಾಕಷ್ಟು ಹೇಳಿದ್ದಾರೆ. ಈ ಕಡೆಯವರೂ ಹೇಳಿದ್ದಾರೆ. ನಾನು ಎರಡೂ ಕಡೆಯ ವಾದವನ್ನು ಕೇಳಿದ್ದೇನೆ. ಈಗ ನಾನು ಏನು ರೂಲಿಂಗ್ ಕೊಡಬೇಕೋ ಕೊಡುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ತಾವು ಸ್ವಲ್ಪ ಅವಕಾಶ ಕೊಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಆ ಕಡೆ ನಾಲ್ಕು ಜನರಿಗೆ ಅವಕಾಶ ಕೊಟ್ಟಿದ್ದೀರಿ. ನಮಗೂ ಅವಕಾಶ ಕೊಡಿ. ಪಾಯಿಂಟ್ ಆಫ್ ಆರ್ಡರ್ ಮೇಲೆ ಅವಕಾಶ ಕೊಡಿ ಇಲ್ಲವೇ ಅಡ್ಮಿಸಬಲಿಟಿ ಮೇಲೆ ಅವಕಾಶ ಕೊಡಿ. ಈ ಕಡೆ ಇಬ್ಬರಿಗೆ ಮಾತ್ರ ಅವಕಾಶ, ಅಲ್ಲಿ ನಾಲ್ಕು ಜನರಿಗೆ ಅವಕಾಶ ಸಿಕ್ಕಿದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೫ ನಿಮಿಷ ಅವಕಾಶ ಕೊಡಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ರೂಲ್ ೬೩ರಲ್ಲಿ ಇರುವುದು...
ಅಡ್ಮಿಸಬಲಿಟಿ ಬಗ್ಗೆ ಮಾತ್ರ ಹೇಳುತ್ತೇನೆ.

"Provided further that where the Speaker is not in possession of full facts about the matter mentioned therein, he may before giving or refusing his consent read the notice of the motion and hear from the Minister and/or members concerned a brief statement of facts and then give his decision on the admissibility of the motion."

ನಾನು ತಿಳಿದುಕೊಂಡಿರುವುದು ಅಡ್ಮಿಸಿಬಲಿಟಿ ಆಫ್ ಮೋಷನ್‌ಗೆ ಮೆಂಬರ್ಸ್ ಕನ್‌ಸರ್ನ್ಡ್ ಎಂದರೆ ನನ್ನ ಅಭಿಪ್ರಾಯದಲ್ಲಿ ಯಾರು ಯಾರು ಇಲ್ಲಿ ಬರೆದು ಕೊಟ್ಟಿದ್ದಾರೆ, ಅವರು ಮೆಂಬರ್ಸ್ ಕನ್‌ಸರ್ನ್ಡ್ ಎಂದು ಮಾನ್ಯ ಮೊಯಿಲಿಯವರು ಬರೆದು ಕೊಟ್ಟಿದ್ದರೆ, ಅವರು ಮೆಂಬರ್ಸ್ ಕನ್‌ಸರ್ನ್ಡ್. ಇದಕ್ಕೆ ಪರ್ಮಿಷನ್ ಇಲ್ಲದೇ ಹೋದರೆ ತೊಂದರೆಯಾಗುತ್ತದೆ.

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಸಹಕಾರ ಕೊಡಬೇಕು. ಮಾನ್ಯ ಮೊಯಿಲಿಯವರೇ ಎರಡು ನಿಮಿಷದಲ್ಲಿ ನೀವು ಮುಗಿಸಿಬಿಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ತಾವು ಅನುಮತಿ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಮರ್ಪಿಸುತ್ತಿದ್ದೇನೆ. ಈಗ ಸದನದ ಕಾರ್ಯಕಲಾಪಕ್ಕೆ ಸಂಪೂರ್ಣವಾದಂಥ ಸಹಕಾರ

ಕೊಡಬೇಕೆಂದು ನಮ್ಮ ಉದ್ದೇಶ. ಇದಕ್ಕೆ ಏನಾದರೂ ಆತಂಕ ತರಬೇಕೆಂದು ಉದ್ದೇಶ ಅಲ್ಲ' ನಿಮಗೇ ಗೊತ್ತಿದೆ, ನಮಗೆ ಬೇಕಾದ್ದಕ್ಕಿಂತ ಸ್ವಲ್ಪ ಕೂಡ ಹೆಚ್ಚು ಮಾತನಾಡುವುದಕ್ಕೆ ನನಗೆ ಮನಸ್ಸು ಇಲ್ಲ, ಮಾತನಾಡುವುದೂ ಇಲ್ಲ. ಇಲ್ಲಿ ಕೆಲವು ಮೂಲಭೂತವಾದಂತಹ ಪ್ರಶ್ನೆಗಳು ಉದ್ಭವವಾದದ್ದರಿಂದ ಅಡ್ಮಿಸಬಲಿಟಿ ಬಗ್ಗೆ, ಪಾಯಿಂಟ್ ಆಫ್ ಆರ್ಡರ್ ಬಗ್ಗೆ ನಾನು ಈ ಸದನದ ಮುಂದೆ ನನ್ನ ಕೆಲವು ವಿಚಾರಗಳನ್ನು ಮಂಡಿಸಬೇಕೆಂದು ಇಚ್ಛಿಪಟ್ಟಿದ್ದೇನೆ. ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆಯಾಯಿತು, ನಾನು ಅದನ್ನು ಪುನರ್ ಉಚ್ಚರಿಸಲಿಕ್ಕೆ ಇಷ್ಟಪಡುವುದಿಲ್ಲ. ನಿಲುವಳಿ ಸೂಚನೆಯನ್ನು ನಿರ್ಬಂಧಗೊಳಿಸತಕ್ಕಂತಹ ಹಕ್ಕು ೭೧ರಲ್ಲಿ ಸ್ಪಷ್ಟವಾಗಿದೆ ಯಾವುದನ್ನು ನಿರ್ಬಂಧ ಮಾಡಬೇಕೆಂದು. ಈ ನಿರ್ಬಂಧವನ್ನು ಹಾಕುವ ಮೊದಲು, ಈ ನಿಯಮವನ್ನು ರೂಪಿಸುವ ಮೊದಲು ಪಾರ್ಲಿಮೆಂಟ್‌ನ ಎರಡೂ ಸದನದಲ್ಲಿ ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂತಹ ಪರಂಪರೆಯನ್ನು ಭಟ್ಟಿ ಇಳಿಸಿ ಈ ನಿಯಮಗಳನ್ನು ನಾವು ರೂಪಿಸಿದ್ದೇವೆ. ಈಗ ಇಲ್ಲಿ ಬಂದಂತಹ ವಿಚಾರಗಳನ್ನು ನಿರ್ಬಂಧ ಮಾಡತಕ್ಕಂತಹ ಯಾವುದೇ ನಿಯಮ ಇಲ್ಲಿ ಇದೆಯೋ ಇಲ್ಲವೇ ಎಂಬುದನ್ನು ಪ್ರಮುಖವಾಗಿ ಪರಿಶೀಲನೆ ಮಾಡಬೇಕು. ನಿಲುವಳಿ ಸೂಚನೆಯು ಹಕ್ಕುಬಾಧ್ಯತೆಯನ್ನು ಪ್ರಶ್ನಿಸುವಂತೆ ಇರಕೂಡದು.

೨-೩೦ ಪಿ. ಎಂ.

ಇಟ್ ಕಾನ್‌ಸ್ಟಿಟ್ಯೂಟ್ಸ್ ಪ್ರಿವಿಲೇಜ್. ನಮ್ಮ ನಿಲುವಳಿ ಸೂಚನೆಯನ್ನು ಸ್ವಲ್ಪ ಪರಾಂಬರಿಸಿದರೆ ಸ್ಪಷ್ಟವಾದ ಅರಿವು ಈ ಸದನಕ್ಕೆ ಆಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ದೋಷ ಏನು, ಇಂಗ್ಲೀಷ್ ದೃಷ್ಟಿಯಿಂದ ಎಲ್ಲಾ ಕನ್ನಡ ಶಬ್ದಗಳನ್ನು ನೋಡಿದರೆ ನಾವು ಸ್ವಲ್ಪ ಗೊಂದಲಕ್ಕೆ ಈಡಾಗುತ್ತೇವೆ. ಈಗ ಏನಾಗಿದೆ ಕರ್ನಾಟಕ ವಿಧಾನ ಪರಿಷತ್ತು ಮುಂದೆ ನಿಗದಿಪಡಿಸಿದಂತಹ ತನ್ನ ಕಾರ್ಯಕಲಾಪಗಳನ್ನು ನಡೆಸದಂತೆ ಫೆಬ್ರವರಿ ೧೭ನೇ ತಾರೀಖಿನವರೆಗೆ ಮುಂದುವರಿಸಲ್ಪಟ್ಟಿದೆ. ಇದರಿಂದ ಅಲ್ಲಿಯ ಕಾರ್ಯಕಲಾಪಗಳು ನಿಂತುಹೋಗಿವೆ. ಆ ಸದನದ ಕಾರ್ಯಕಲಾಪ ಕ್ರಮ ಪ್ರಕಾರ ಅಲ್ಲದಿದ್ದರೂ ಸಾಮಾನ್ಯವಾಗಿ ಆ ಸಭೆ ನಡೆಯಬೇಕು. ಅಲ್ಲಿ ಕಾರ್ಯಕಲಾಪಗಳನ್ನು ಮಾಡುವುದಿಲ್ಲ ಎನ್ನುವುದು ಬರಬಾರದು. ಸಪೋಸ್ ಇಲ್ಲಿ ತಾವು ಸೈನ್‌ಡೈ ಮಾಡಿದರೆ ನಾವು ಹೊರಗಡೆ ಹೋಗುತ್ತೇವೆ. ಪರಿಷತ್ತಿನವರು ಕುಳಿತು ಏನು ಕೆಲಸ ಮಾಡಬೇಕು ? ಇಲ್ಲಿ ನಡವಳಿಕೆಗಳನ್ನು ಸ್ಟಾಪ್ ಮಾಡಬೇಕಾದರೂ ಒಂದು ಎಕ್ಸ್‌ಟ್ರಾರ್ಡಿನರಿ ಸರ್‌ಕಮ್‌ಸ್ಟೆನ್‌ಸಸ್ ಮೇಲೆ ಮಾಡಬೇಕಾಗುತ್ತದೆ. ನಾರ್‌ಮಲ್ ಸರ್‌ಕಮ್‌ಸ್ಟೆನ್‌ಸಸ್‌ನಲ್ಲಿ ಮಾಡಲಿಕ್ಕೆ ಆಗುವುದಿಲ್ಲ. ಆ ರೀತಿ ಇಲ್ಲಿ ಬಿಸಿನೆಸ್ ಸ್ಟಾಪ್ ಮಾಡಿದರೆ ಕೌನ್ಸಿಲ್‌ನವರು ಕುಳಿತುಕೊಂಡು ಏನು ಕೆಲಸ ಮಾಡಬೇಕು ? ಈ ಸದನದ ಕಾರ್ಯಕಲಾಪ ಮಾಡುವಾಗ ಸಾರ್ವಜನಿಕರ ಹಣದ ಪ್ರಶ್ನೆ ಬರುತ್ತದೆ. ಮೇಲ್ಮನೆಯಲ್ಲಿಯೂ ಸಹ ಸಾರ್ವಜನಿಕರ ಹಣದ ಪ್ರಶ್ನೆ ಬರುತ್ತದೆ. ಈ ಮನೆಯಲ್ಲಿ ಇಷ್ಟೊಂದು ಬಿಲ್ಲುಗಳನ್ನು ಹಾಕಿದ್ದೀರಿ, ಇವುಗಳನ್ನು ಏತಕ್ಕೆ ಚರ್ಚೆ ಮಾಡಬೇಕು ? ಇಲ್ಲಿ ಚರ್ಚೆ ಮಾಡಿದಂಥ ಬಿಲ್ಲುಗಳು ನೇರವಾಗಿ ರಾಜ್ಯಪಾಲರ ಅನುಮತಿಗೆ ಹೋಗುತ್ತದೆಯೋ ? ಅವರು ಅದಕ್ಕೆ 'ಎಸ್' ಎಂದು ಹೇಳುತ್ತಾರೆಯೋ ಇಲ್ಲ. ಇಲ್ಲಿಂದ ನೇರವಾಗಿ ರಾಜ್ಯಪಾಲರ ಅನುಮತಿಗೆ ಹೋಗುವುದಿಲ್ಲ. ಇಲ್ಲಿ ಚರ್ಚೆಯಾದನಂತರ ಕೌನ್ಸಿಲ್‌ಗೆ ಹೋಗಬೇಕಾಗುತ್ತದೆ. ಈಗ ಕೌನ್ಸಿಲ್ ಅಲ್ಲಿ ನಡೆಯದೇ ಮುಂದೆ ಹೋಗಿದೆ. ಆದ್ದರಿಂದ, ಇಲ್ಲಿ ಬಿಲ್ಲುಗಳನ್ನು ಏತಕ್ಕೆ ಚರ್ಚೆಗೆ ತೆಗೆದುಕೊಳ್ಳಬೇಕು ? ಇವೊತ್ತಿನ ನಿಲುವಳಿ ಸೂಚನೆ ಏನೆಂದರೆ, ಅಲ್ಲಿ ಕೌನ್ಸಿಲ್ ಕಾರ್ಯಕಲಾಪಗಳು ನಿಂತುಹೋಗಿವೆ. ನಾವು ಇದರ ಬಗ್ಗೆ ಇದ್ದಕ್ಕಿದ್ದ ಹಾಗೆ ಪ್ರಶ್ನೆ ಮಾಡತಕ್ಕದ್ದು ಅಲ್ಲ, ಇದರ ಬಗ್ಗೆ ವಿಶ್ಲೇಷಣೆ ಮಾಡಿ, ಅದರ ಅರ್ಥವನ್ನು ವ್ಯಾಪಕವಾಗಿ ಚರ್ಚೆ ಮಾಡಬೇಕು. ನಮ್ಮ ಸದನಕ್ಕೆ ಆ ವಿಚಾರ ಬರುವುದಿಲ್ಲ ಎಂದು ಹೇಳುವುದು ಅಷ್ಟು ಸುಲಭ ಅಲ್ಲ. ಇವೊತ್ತು ಅದರ ಸೂಕ್ಷ್ಮತೆಯನ್ನು ಅಳವಡಿಸತಕ್ಕ ಶಾಸಕಾಂಗದ ವ್ಯವಸ್ಥೆಯ ಚಲನವಲನವನ್ನು ಸಂಪೂರ್ಣವಾಗಿ ಗಮನಕ್ಕೆ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ, ಎನ್ನುವುದಕ್ಕೆ ಈ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಬಿಲ್ಲುಗಳನ್ನು ನಾವು ಇಲ್ಲಿ ಚರ್ಚೆ ಮಾಡಿ ಕೋಲ್ಡ್ ಸ್ಟೋರೇಜ್‌ನಲ್ಲಿ ಅಥವಾ ತಮ್ಮ ಕಪಾಟಿನಲ್ಲಿ ಇಡಲಿಕ್ಕೆ ಚರ್ಚೆ ಮಾಡುವುದು ಸರಿಯಲ್ಲ. ಇದು ಸುಲಲಿತವಾಗಿ ನಡೆಯಬೇಕಾದರೆ ಸರ್ಕಾರವೂ ಚಿಂತನೆ ಮಾಡಬೇಕಾಗುತ್ತದೆ. ನಾವು ಚಿಂತನೆ ಮಾಡಬೇಕಾಗುತ್ತದೆ. ಆ ಸದನದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಇದೆ, ಅದೇ ತರಹ ಬೇರೆ ಕಾರ್ಯಕಲಾಪಗಳು ಸಹ ಇವೆ. ಬಿಲ್ಲುಗಳು ಸಹ ಇಲ್ಲಿ ಚರ್ಚೆಯಾದನಂತರ ಅಲ್ಲಿ ಚರ್ಚೆಗೆ ಬರಬೇಕಾಗುತ್ತದೆ. ಇದು ಬಹಳ ಮಹತ್ವವಾದಂಥ ವಿಚಾರ. ಆದ್ದರಿಂದ, ಬಾಕಿ ಬಿಸಿನೆಸ್ ತೆಗೆದಿಟ್ಟು ಈ

ವಿಚಾರದ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳುತ್ತೇನೆ. ಲೆಜಿಸ್ಲೇಚರ್ ಅಂದರೆ, ಲೆಜಿಸ್ಲೇಟೀವ್ ಅಸೆಂಬ್ಲಿ, ಲೆಜಿಸ್ಲೇಟೀವ್ ಕೌನ್ಸಿಲ್, ಗೌರ್ನರ್ ಒಳಗೊಂಡಂತೆ ಇದೆ. ಯಾರೊಬ್ಬರು ಕಾರ್ಯ ಕ್ರಮ ಮಾಡದೇ ಇದ್ದರೂ ಇಡೀ ಶಾಸಕಾಂಗದ ವ್ಯವಸ್ಥೆ ಕುಸಿತ ಆಗುತ್ತದೆ. ಇಂತಹ ಪ್ರಸಂಗ ನಮ್ಮ ರಾಜ್ಯದಲ್ಲಿ ಅಥವಾ ಬೇರೆ ರಾಜ್ಯಗಳಲ್ಲಿ ಇಲ್ಲಿಯವರೆಗೆ ಬಾರದೇ ಇರಬಹುದು. ಅಂತಹ ಪ್ರಸಂಗ ನಮ್ಮ ಕರ್ನಾಟಕ ರಾಜ್ಯದಲ್ಲಿ ಉದ್ಭವವಾಗಿದೆ. ಅಸೆಂಬ್ಲಿ ಇವೊತ್ತು ನಡೆಯುತ್ತಿದೆ. ಅದರ ಬಗ್ಗೆ ವಿವರಿಸಿ ಹೇಳಬೇಕು ಎಂದರೆ ಹೆಚ್ಚು ಸಮಯ ಆಗುತ್ತದೆ. ತಾವು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಒಪ್ಪಿಗೆ ಕೊಟ್ಟರೆ ಹೇಳಬಹುದು. ಅದರಿಂದ ಇನ್ನೊಂದು ಪ್ರಶ್ನೆ ಉದ್ಭವವಾಗಬಹುದು. ನಾವು ಚರ್ಚೆ ಮಾಡತಕ್ಕ ವಿಷಯದ ಬಗ್ಗೆ ಆತಂಕವನ್ನು ತರಬಹುದೆಂದು ಕೌನ್ಸಿಲನ್ನು ಮುಚ್ಚಿದ್ದಾರೆ ಎಂದು ಹೇಳಬಹುದು. It may obstruct the legislative business of this house and that is why the council has been adjourned. I can charge the Government as it may look *prima-facie*. ಆದ್ದರಿಂದ, ಈ ವಿಚಾರವನ್ನು ಸಭೆಯ ಗಮನಕ್ಕೆ ತರಬೇಕೆಂದು ನಾನು ಎದ್ದುನಿಂತಾಗ ತಾವು ಹಿರಿಯ ಸದಸ್ಯರು ಎಂದು ಹೇಳಿದರೆ ನಾವು ಕುಳಿತುಕೊಳ್ಳಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಈ ರೀತಿಯ ಬಿಕ್ಕಟ್ಟು ಎಂದೂ ಬಂದಿರಲಿಲ್ಲ. ಒಮ್ಮೆ ಕೌನ್ಸಿಲ್‌ನಲ್ಲಿ ಸೈನ್‌ಡೈ ಅಡ್ಜರ್ನ್ ಆಗಿದ್ದು ಉಂಟು. ಅಸೆಂಬ್ಲಿ ಪ್ರೊಸೀಡಿಂಗ್ಸ್ ಮುಗಿದಮೇಲೆ ಇಲ್ಲಿನ ಬಿಲ್ಸ್ ಆ ಸದನಕ್ಕೆ ಹೋದಮೇಲೆ, ಅಸೆಂಬ್ಲಿ ಅಡ್ಜರ್ನ್ ಆದಮೇಲೆ ಎಕ್ಸಾಟ್ರಾರ್ಡಿನರಿ ಸರ್‌ಕಮ್‌ಸ್ಟೆನ್‌ಸಸ್‌ನಲ್ಲಿ ಛೇರಮನ್‌ರು ಹೌಸ್ ಅಡ್ಜರ್ನ್ ಮಾಡಿದ್ದಾರೆ. ಈ ತರಹ ಹಿಂದೆ ಆಗಿರಲಿಲ್ಲ. ಅಸೆಂಬ್ಲಿ ಬಿಸಿನೆಸ್ ನಡೆಯುವಾಗ, ಕೌನ್ಸಿಲ್ ಬಿಸಿನೆಸ್ ನಡೆಯುವಾಗ ಈ ತರಹ ಯಾವಾಗಲೂ ಆಗಿಲ್ಲ. ಅಲ್ಲಿ ಸಾಕಷ್ಟು ಬಿಸಿನೆಸ್ ಇದ್ದಾಗಲೂ ಸಭೆಯನ್ನು ಮುಂದೂಡಿದ್ದಾರೆ. ಇಲ್ಲಿ ಶಾಸನಗಳು ಪಾಸ್ ಆದನಂತರ ಅಲ್ಲಿಗೆ ಹೋಗಬೇಕಾಗುತ್ತದೆ. ಇಲ್ಲಿ ಪಾಸ್ ಮಾಡಿಕೊಂಡು ಅವುಗಳನ್ನು ಕೊಂಡೋಗಿ ಕಪಾಟಿನಲ್ಲಿ ಇಡುತ್ತೀರಾ ? ಆದ್ದರಿಂದ ಇದರ ಬಗ್ಗೆ ಚರ್ಚೆಯಾಗ ಬೇಕಾಗುತ್ತದೆ. It may be an extraordinary occasion. We are here to uphold the democractic values. I want the Hon. Speaker to stand up and stand by the Members. ಆದ್ದರಿಂದ, ಇದು ಅಗತ್ಯ ಇದೆ. ಇಂತಹ ಉಜ್ವಲ, ಸಿದ್ಧಾಂತಗಳನ್ನು ಎತ್ತಿ ಹಿಡಿಯತಕ್ಕ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಅದರ ಬಗ್ಗೆ ಮನದಟ್ಟುಮಾಡಲು ಬಾಕಿ ಬಿಸಿನೆಸ್ ಹಾಗೆಯೇ ಇಟ್ಟು ಇದನ್ನು ಚರ್ಚೆಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಶಾಸನ ಮಾಡತಕ್ಕದ್ದು ಎಲ್ಲಿಯೂ ಹೋಗುವುದಿಲ್ಲ ಏಕೆಂದರೆ, ಬಡ್ಜೆಟ್ ಮಂಡನೆ ಮಾಡತಕ್ಕದ್ದು ಬರುತ್ತದೆ, ಅದು ೧೭ನೇ ತಾರೀಖು ಅಥವಾ ಬೇರೆಯ ದಿವಸವೇ ಬರಬಹುದು. ಇಲ್ಲಿ ಬಡ್ಜೆಟ್ ಬಗ್ಗೆ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಆದನಂತರ ಮೇಲ್ಮನೆಗೆ ಹೋಗಬೇಕಾಗುತ್ತದೆ. ಅವರು ಇನ್ನೂ ಕೂಡ ಸಭೆಯನ್ನು ಅಡ್ಜರ್ನ್ ಮಾಡಬಹುದು. ಅದರ ಬಗ್ಗೆ ಗ್ಯಾರಂಟಿ ಏನಿದೆ ? ಪುನಃ ಅಡ್ಜರ್ನ್ ಮಾಡಬಹುದು. ಬಡ್ಜೆಟ್ ಸೆಷನ್ ಎಂದರೆ ಅದಕ್ಕೆ ಒಂದು ಪರಿಮಿತಿ ಇದೆ. ಇವತ್ತು ಇನ್ನೊಂದು ಹೌಸ್ ಅಡ್ಜರ್ನ್ ಮಾಡತಕ್ಕ ಯಾವ ಕೆಲಸ ನಡೆದಿದೆ, ಅದರ ಬಗ್ಗೆ ನಾವು ಚೇರ್ಮನ್ ಮೇಲೆ ಜವಾಬ್ದಾರಿಯನ್ನು ಹಾಕತಕ್ಕ ಪ್ರಶ್ನೆ ಅಲ್ಲ. ಅದರ ಬಗ್ಗೆ ಸನ್ಮಾನ್ಯ ಸಂಸದೀಯ ಸಚಿವರು ಕೌನ್ಸಿಲ್ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಮಂರೆತರು. ಪರಮೋಚ್ಚ ಅಧಿಕಾರ ಚೇರ್‌ಮನ್‌ರದು ಇದೆ, ಹೌದು. The House is adjourned by that Council. Council has adjourned that house and the Chairman must have acquired the power. ಈ ಒಂದು ವಿಚಾರವನ್ನು ಮಾತನಾಡುವಾಗ ನಾವು ಚೇರ್‌ಮನ್‌ರ ಮೇಲೆ ಮಾತನಾಡಲಿಕ್ಕೆ ಆಗುವುದಿಲ್ಲ/ It is against that body which got adjourned *sine die* or in some other way ಮೇಲ್ಮನೆಯಲ್ಲಿ ಚರ್ಚೆ ಮಾಡತಕ್ಕ ಲಿಸ್ಟ್ ಆಫ್ ಬಿಸಿನೆಸ್ ಇದ್ದಾಗ ಅದು ಅಡ್ಜರ್ನ್ ಆಗಿದೆ, ಆದ್ದರಿಂದ. ಇವೊತ್ತು ಪ್ರಜಾಪ್ರಭುತ್ವದಲ್ಲಿ ಶಾಸಕಾಂಗದ ವ್ಯವಸ್ಥೆಗೆ ಒಂದು ರೀತಿಯ ಬಾಧಕ ಬರತಕ್ಕ ಒಂದು ಕೆಲಸ ಕರ್ನಾಟಕ ರಾಜ್ಯದಲ್ಲಿ ಆಗಿದೆ. ಅದು ಕೌನ್ಸಿಲ್‌ನಲ್ಲಿ ಆಗಿರಬಹುದು ಅಥವಾ ಎಲ್ಲಿಯೋ ಆಗಿರಬಹುದು... It might have happened in Council today. It may happen in someother Corporate body.

This House has a right to discuss about it· We have got a right to discuss about the crisis consequent upon that particular act.

ನಾವು ಅಪ್ರಾಪ್ರಿಯೇಷನ್ ಬಿಲ್‌ನ್ನು ಪಾಸ್ ಮಾಡದಿದ್ದರೆ, ಸಂಬಳ ಸಿಕ್ಕುವುದಿಲ್ಲ. ಎಲ್ಲಾ ಕಾರ್ಯಕ್ರಮಗಳೂ ನಿಂತುಹೋಗುತ್ತವೆ. ಆಗ ಬಿಕ್ಕಟ್ಟಿನ ಪರಿಸ್ಥಿತಿ ಉದ್ಭವವಾಗುತ್ತದೆ. ತಾವು ದಯವಿಟ್ಟು ತಮ್ಮ ಒಪ್ಪಿಗೆಯನ್ನು ದಯಪಾಲಿಸಬೇಕು. ಅವರು ಪ್ರಜಾಪ್ರಭುತ್ವದಲ್ಲಿ ಮೌಲ್ಯಾಧಾರಿತ ರಾಜಕಾರಣವನ್ನು ಮಾಡತಕ್ಕವರು, ಅವರಿಗೆ ಆಸಕ್ತಿ ಇಲ್ಲದೇ ಇರಬಹುದು. ಈ ಬಾಟ್ಲಿಂಗ್ ವಿಚಾರದಲ್ಲಿ ಸರ್ಕಾರಕ್ಕೆ ಇಷ್ಟು ಸೂಕ್ಷ್ಮತೆ ಏಕೆ ? ಹೈಕೋರ್ಟಿನ ತೀರ್ಪಿನ ವಿಚಾರದಲ್ಲಿ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಕೂಡ ಅವರು ಒಪ್ಪಲಿಲ್ಲ. ಆ ಸದನದಲ್ಲಿ ಕೂಡ ಒಪ್ಪಲಿಲ್ಲ. ಹೆಜ್ಜೆ ಹೆಜ್ಜೆಗೂ ಈ ಹಗರಣದ ಬಗ್ಗೆ ಹಗರಣವನ್ನು ಮುಚ್ಚುವ ಪ್ರಯತ್ನ ಸರ್ಕಾರದವರು ಏಕೆ ಮಾಡುತ್ತಿದ್ದಾರೆ ? ಇದು ನನಗೆ ಅರ್ಥವಾಗುತ್ತಿಲ್ಲ. ಚರ್ಚೆಗೆ ತಾವು ಒಪ್ಪಿಗೆ ಕೊಟ್ಟರೆ ಇವೊತ್ತು ಕರ್ನಾಟಕ ಅಥವಾ ದೇಶದಲ್ಲಿ ಹಿಂದೆಂದೂ ನಡೆಯದೇ ಇರತಕ್ಕಂತಹ ಒಂದು ಮೇಲ್ಪಂಕ್ತಿ ಹಾಕಿಕೊಟ್ಟಂತೆ ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪಾಯಿಂಟ್ ಆಫ್ ಆರ್ಡರ್ ಮೇಲೆ ಅವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಯಾವುದೇ ಮನೆಯ ಸದಸ್ಯರ ಹಕ್ಕುಗಳಿಗೂ ಚ್ಯುತಿ ತರುವಂತಹ ಇಚ್ಛೆ ಯಾರಿಗೂ ಇಲ್ಲ. ಇದನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಮೇಲ್ಮನೆಯಲ್ಲೂ ಕೂಡ ಈ ಹಗರಣವನ್ನು ಚರ್ಚೆಮಾಡುವುದಕ್ಕೆ ಅವಕಾಶವಿದೆ, ಇದಕ್ಕೆ ಸರ್ಕಾರ ಒಪ್ಪಿಕೊಂಡಿದೆ. ನಾವು ಹಿಂದೇಟು ಹಾಕುತ್ತಿಲ್ಲ. ಅಂಜುವ ಅವಶ್ಯಕತೆಯೂ ಇಲ್ಲ. ಅದನ್ನು ಅಲ್ಲಿ ಮುಖ್ಯ ಮಂತ್ರಿಗಳೂ ಹೇಳಿದ್ದಾರೆ. ಈ ವಿಚಾರದ ಚರ್ಚೆಗಾಗಿ ಸಮಯ ನಿಗದಿ ಮಾಡೋಣ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕೂಡೋಣವೆನ್ನುವ ಮಾತನ್ನು ವಿಧಾನಪರಿಷತ್ತಿನಲ್ಲೂ ಹೇಳಿದ್ದಾರೆ. ಅಲ್ಲೂ ವಿರೋಧಪಕ್ಷದ ನಾಯಕರು ಕೂಡ ಮೊದಲು ಒಪ್ಪಿಕೊಂಡಿದ್ದರು. ನಂತರ ಆ ವಿಚಾರ ಕೈಬಿಟ್ಟರು. ಕಾರಣ ನನಗೆ ಗೊತ್ತಿಲ್ಲ. ಆ ಮನೆಯಲ್ಲೂ, ಈ ಮನೆಯಲ್ಲೂ ಈ ಹಗರಣದ ವಿಚಾರವಾಗಿ ಎಷ್ಟು ಬೇಕೋ ಅಷ್ಟು ಚರ್ಚೆ ಮಾಡೋಣ, ಚರ್ಚೆಗೆ ಸರ್ಕಾರ ಸಿದ್ಧವಿದೆ. ಇದನ್ನು ನೈತಿಕವಾಗಿಯೂ ಎದುರಿಸಲಿಕ್ಕೆ ಸರ್ಕಾರಕ್ಕೆ ಬಲವಿದೆ. ಸಂವಿಧಾನದ ಬಿಕ್ಕಟ್ಟಿನ ವಿಚಾರದಲ್ಲಿ ಹೇಳಿದ್ದಾರೆ. ಆ ಮನೆಯ ಕಾರ್ಯಕಲಾಪಗಳು ೭ನೇ ತಾರೀಖಿನ ವರೆಗೂ ನಡೆಯಬೇಕಾಗಿತ್ತು. ೫ನೇ ತಾರೀಖಿನವರೆಗೂ ಚರ್ಚೆ ನಡೆದಿದೆ. ಇನ್ನೂ ಒಂದು ದಿವಸ ಇತ್ತು. ಆ ಮನೆಯ ವಿರೋಧಪಕ್ಷದ ನಾಯಕರಿಗೂ ಗೊತ್ತಿದೆ. ಎರಡೂ ಮನೆಗಳು ಅನೇಕ ಸಲ ಬೇರೆಬೇರೆ ಸಮಯದಲ್ಲಿ ಕೂಡುತ್ತವೆ. ಅದು ರಾಜ್ಯಸಭೆ ಇರಬಹುದು, ವಿಧಾನಪರಿಷತ್ತು ಇರಬಹುದು. ಅಲ್ಪಾವಧಿ ಕಾಲ ಸೇರುತ್ತವೆ, ಹಿಂದೆಯೂ ಇದೇ ಸಂಪ್ರದಾಯ ನಡೆದುಕೊಂಡು ಬಂದಿದೆ. ಅಬ್‌ರಪ್ಟ್ ಆಗಿ ಏನೂ ಅದು ಸ್ಟಾಪ್ ಆಗಿಲ್ಲ. ಆ ಮನೆಯಲ್ಲಿ ಶ್ರೀಮತಿ ಬಸವರಾಜೇಶ್ವರಿ ಯವರು ೧೯೮೦ರಲ್ಲಿ ಅಧ್ಯಕ್ಷೆಯಾಗಿದ್ದರು. ಆ ಮನೆಯ ಮುಂದೆ ಕಾರ್ಯಕಲಾಪಗಳ ಪಟ್ಟಿ ಇತ್ತು. ಒಂದು ವಿಚಾರ ಚರ್ಚೆಗೆ ಬಂದಾಗ, ಅಬ್‌ರಪ್ಟಾಗಿ ಸೈನಡೆ ಮಾಡಿಸಭೆಯನ್ನು ಮುಂದೆ ಹಾಕಿದ್ದರು. ಇದು ಮೊದಲನೆಯ ಸಲ ಆಗಿಲ್ಲ. ೧೯೬೪ರಲ್ಲಿ ಶ್ರೀಮಾನ್ ಜಾಗೀರ್‌ದಾರ್ ಉಪ ಸಭಾಪತಿಗಳಾಗಿದ್ದಾಗ ಇಂಥದೇ ಪರಿಸ್ಥಿತಿ ಉಂಟಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ಆಗಿದ್ದುದು ಈ ಸದನ ಮುಗಿದಮೇಲೆ. ಅಬ್ರಪ್ಟಾಗಿ ಸ್ಟಾಪ್ ಆಗಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೬೪ರಲ್ಲಿ ಶ್ರೀ ಜಾಗೀರ್‌ದಾರ್ ಉಪ ಸಭಾಪತಿಗಳಾಗಿದ್ದಾಗ ಅಂದಿನ ಮುಖ್ಯಮಂತ್ರಿಗಳ ಮೇಲೆ ಹಕ್ಕು ಚ್ಯುತಿ ವಿಚಾರ ಚರ್ಚೆಗೆ ಬಂದಾಗ, ಒಂದು ನಿಗದಿಯಾದ ದಿನಾಂಕ ಮುಂದಿರಲಿಲ್ಲ. ಆಗ ಸದನವು ಸೈನಡೈ ಆಗಿ ಮುಂದಕ್ಕೆ ಹೋಯಿತು. ಇಂತಹ ಸನ್ನಿವೇಶ ಹಿಂದೆ ಯಾವುದೂ ಇಲ್ಲವೆಂದು ಹೇಳುವುದು ಸರಿಯಲ್ಲ. ದಾಖಲೆಯನ್ನು ನೋಡಿ ಬೇಕಾದರೆ. ಇಂದಿನ ದಿವಸ ಇಲ್ಲಿ ನಮ್ಮ ಹಕ್ಕು ಏನು ? ಆ ಮನೆಯ ಕಾರ್ಯಕಲಾಪಗಳ ಬಗ್ಗೆ, ಸಭಾಪತಿಗಳು ಬಗ್ಗೆ ನಿರ್ಣಯದ ಮೂಲಕ ಚರ್ಚೆಮಾಡಲು ಅವಕಾಶವಿಲ್ಲವೆಂದು ಹೇಳುತ್ತೇನೆ. ಈಗ ಪುನಃ ಮತ್ತೊಂದು ರೂಪದಲ್ಲಿ ಚರ್ಚೆಮಾಡುವ ಪ್ರಯತ್ನ ನಡೆಯುತ್ತಾ ಇದೆ. ಇಲ್ಲಿ ಪ್ರಜಾಪ್ರಭುತ್ವದ ಕೊಲೆಯ ಪ್ರಶ್ನೆ ಇಲ್ಲ. ಯಾವುದೇ ವಿಚಾರ ಇರಬಹುದು. ರಾಜ್ಯಪಾಲರ ಭಾಷಣದ ವಿಚಾರವಿರಬಹುದು, ಬರಗಾಲದ ವಿಚಾರವಿರಬಹುದು. ಚರ್ಚೆಮಾಡಲು ಸರ್ಕಾರ ಅವಕಾಶ ಮಾಡಿಕೊಟ್ಟಿದೆ.

ಅದನ್ನು ಉಪಯೋಗಿಸಿಕೊಳ್ಳಲು ಹಿಂದೆ ಬಿದ್ದಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಇವೊತ್ತು ವಿರೋಧಪಕ್ಷದ ನಾಯಕರು ಮತ್ತು ಆ ಕಡೆಯ ಸದಸ್ಯರು ಪ್ರಜಾಪ್ರಭುತ್ವದ ಒಂದು ತತ್ವದಲ್ಲಿ ಎಷ್ಟು ವಿಶ್ವಾಸ ಇಟ್ಟುಕೊಂಡಿದ್ದಾರೋ, ನಮಗೂ ಅಷ್ಟೇ ಇದೆ. ಆ ಬಗ್ಗೆ ಸರ್ಕಾರ ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡಿದೆ. ಮಾನ್ಯ ಸದಸ್ಯರು ಕೆಲವು ಮಾತುಗಳನ್ನು ಹೇಳಿದ್ದಾರೆ. ಅದನ್ನು ಮೇಲ್ಮನೆಯ ಸಭಾಪತಿಗಳ ಬಗ್ಗೆ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ನಮ್ಮ ಕಿಯಾಲೋಪವನ್ನು ಪುರಸ್ಕರಿಸಿ ವಿರೋಧಪಕ್ಷದ ನಾಯಕರ ಸೂಚನೆಯನ್ನು ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ಹೇಳಿದ್ದಾರೆ, ಆ ಸದನದಲ್ಲಿ ನಮ್ಮ ಪಕ್ಷದ ಸದಸ್ಯರು ಹಾಗೂ ವಿರೋಧಪಕ್ಷದ ಸದಸ್ಯರು ಚರ್ಚೆಗೆ ಕೆಲವು ವಿಚಾರ ಬಂದಾಗ, ಅದು ಬರಗಾಲ ಇರಬಹುದು, ರಾಜ್ಯಪಾಲರ ಭಾಷಣ ಇರಬಹುದು, ಆ ಬಗ್ಗೆ ಮಾತನಾಡಲು ಹಿಂದೇಟು ಹಾಕಿದ್ದಾರೆ ಎಂದು ಹೇಳಿದ್ದಾರೆ, ಅದು ಸರಿಯಲ್ಲ. ನಮ್ಮ ಪಕ್ಷದ ಸದಸ್ಯರು ಬರಗಾಲದ ಪರಿಸ್ಥಿತಿಯನ್ನು ಆ ಸದನದಲ್ಲಿ ಆಸಕ್ತಿ ಇಟ್ಟುಕೊಂಡು ಸಂಪೂರ್ಣವಾಗಿ ಹಾಜರಾಗಿದ್ದರು, ಹಾಗೆಯೇ ಬೇರೆ ಪಕ್ಷದ ಸದಸ್ಯರೂ ಕೂಡ ಹಾಜರಾಗಿದ್ದರು. ಮೊನ್ನೆ ಹೈಕೋರ್ಟ್ ತೀರ್ಪು ಬಂದಾಗ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಅವರು ಹೇಳಿದ್ದರು. ಆ ಸಂದರ್ಭದಲ್ಲಿ ನಮ್ಮ ಪಕ್ಷ ಹಿಂದೇಟು ಹಾಕುವ ಸಂದರ್ಭ ಉದ್ಭವವಾಗುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ.

ಅದರಿಂದಾಗಿ ನಾವು ಬೇರೆ ವಿಚಾರವನ್ನು ಪ್ರಸ್ತಾಪ ಮಾಡುವುದಿಲ್ಲ. ಶ್ರೀಮಾನ್ ವೀರಪ್ಪ ಮೊಯ್ಲಿಯವರು, ಶ್ರೀಮಾನ್ ಕೆ. ಎಚ್. ಶ್ರೀನಿವಾಸ್ ರವರು ಎಲ್ಲಾ ವಿವರಗಳನ್ನು ಹೇಳಿದ್ದಾರೆ. ತಮ್ಮ ತೀರ್ಪು ಕೊಡಬೇಕಾಗಿದೆ. ತಮ್ಮ ತೀರ್ಪಿಗೆ ಚಾರಿತ್ರ್ಯಕತೆ ಬರುತ್ತದೆ.

ಅಧ್ಯಕ್ಷರು.—ಆಯಿತು, ನೋಡೋಣ, ತಾವು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ತೀರ್ಪು ಚಾರಿತ್ರ್ಯಕತೆಯಿಂದ ಕೂಡಿರುವಂತಾಗಿರಬೇಕು.

ಶ್ರೀ ಕೆ. ಎಚ್. ಶ್ರೀನಿವಾಸ್.—ನಮ್ಮ ವಿಷಯವನ್ನು ಎತ್ತಿ ಹಿಡಿದು ತೀರ್ಪನ್ನು ಕೊಟ್ಟರೆ ಐತಿಹಾಸಿಕವಾದ ತೀರ್ಪು ಆಗುತ್ತದೆ. ಅವರ ಕಡೆ ತೀರ್ಪನ್ನು ಕೊಟ್ಟರೆ ಅದರಿಂದ ಪ್ರಯೋಜನವಾಗದಂತಹ ತೀರ್ಪು ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇದು ಒಂದು ಚಾರಿತ್ರ್ಯತೆಯ ಘಟನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಚಾರಿತ್ರ್ಯತೆಯನ್ನು ಭರಿಸಿಕೊಳ್ಳಬೇಕು.

Mr. SPEAKER —I do agree with you.

ಶ್ರೀ ಎಸ್. ಬಂಗಾರಪ್ಪ.—ತಾವು ತೀರ್ಪನ್ನು ಕೊಡಿ.

ಅಧ್ಯಕ್ಷರು.—ನನಗೆ ದೇವರು ಹೇಗೆ ಬುದ್ಧಿಯನ್ನು ಕೊಡುತ್ತಾನೋ. ನೋಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮನ್ನು ಹೊಗಳಿ ಹೊಗಳಿ ಹೊನ್ನ ಶೂಲಕ್ಕೆ ಏರಿಸುತ್ತಾರೆ. ದಯವಿಟ್ಟು ಹುಷಾರಾಗಿರಿ.

ಶ್ರೀ ಎಸ್. ಬಂಗಾರಪ್ಪ.—ಹೊಗಳುವಂತಹ ವಿಚಾರ ಸಭಾಧ್ಯಕ್ಷರ ಬಗ್ಗೆ ಬಂದಾಗ ಹೊಗಳಿ ಸಂತೋಷಪಡುತ್ತೇವೆ. ಹೊಗಳುವಂತಹ ಯಾವುದೇ ಸಲಹೆ ತಮ್ಮ ಹತ್ತಿರವೇ ಇದೆ

ಅಧ್ಯಕ್ಷರು.—ನನ್ನನ್ನು ಹೊಗಳಿದರೂ ಸಂತೋಷಪಡುತ್ತೇನೆ. ತೆಗಳಿದರೂ ಸಂತೋಷಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತೆಗಳಿದರೂ ಸಂತೋಷಪಡುತ್ತೇನೆಂಬ ಮಾತನ್ನು ತಾವು ಹೇಳಬಾರದು. ಹೆಚ್ಚು ಕಡಿಮೆಯಾದರೂ ಕೂಡ ತಾವು ಸಂತೋಷದಿಂದಿದ್ದೀರಿ ತಾವು ನಮ್ಮಗಳ ವಾದವನ್ನು ಆಲಿಸಿ ಮಾಡಿದ್ದೀರಿ. ದಯವಿಟ್ಟು ತಮ್ಮ ತೀರ್ಪನ್ನು ನಮ್ಮ ಪರವಾಗಿಯೇ ಕೊಡಬೇಕು. ತಾವು ಕೊಡುವಂತಹ ತೀರ್ಪು ನಮ್ಮ ಪರವಾಗಿದ್ದರೆ ಅವರಿಗೆ ತಡೆದುಕೊಳ್ಳುವಂತಹ ಶಕ್ತಿ ಇದೆ. ಆದರೆ ತಾವು ಕೊಡತಕ್ಕಂತಹ ತೀರ್ಪು ಅವರ ಪರವಾಗಿದ್ದರೆ ಅದನ್ನು ನಾವು ತಡೆದುಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ನನ್ನ ತೀರ್ಪನ್ನು ತಡೆದುಕೊಳ್ಳುವಂತಹ ಶಕ್ತಿ ನಿಮ್ಮ ಕಡೆಯುವರಿಗೂ ಇದೆ. ಆವರ ಕಡೆಯುವರಿಗೂ ಇದೆ. ಎಲ್ಲರಿಗೂ ಧನ್ಯವಾದ. ಈ ವಿಷಯುದ ಬಗ್ಗೆ ನಡೆದಂತಹ ವ್ಯಾಖ್ಯಾನ ವನ್ನು ಎರಡೂ ಕಡೆಯ ಮುಖಂಡರುಗಳಿಂದಲೂ ಕೇಳಿದ್ದೇನೆ. ತಮ್ಮ ನಿಲುವಳಿ ಸೂಚನೆ ನನಗೆ ಎಷ್ಟು ಗಂಟೆಗೆ ಬಂತು ಎಂದರೆ ೧೦-೫೫ ಗಂಟೆಗೆ ಬಂತು. ನಾವು ಕೆಲವು ಸಂಪ್ರದಾಯುಗಳನ್ನು ಇಟ್ಟುಕೊಂಡಿದ್ದೇನೆ. ಈ ವಿಷಯುವನ್ನು ನನ್ನ ಛೇಂಬರ್‌ನಲ್ಲೇ ರಿಜೆಕ್ಟ್ ಮಾಡುವಂತಹ ಹಕ್ಕು ನನಗೆ ಇದ್ದರೂ, ಆ ರೀತಿ ಮಾಡಬಾರದು ಎಂಬ ತೀರ್ಮಾನಕ್ಕೆ ಬಂದು ಇದಕ್ಕೆ ಅವಕಾಶ ಕೊಟ್ಟು ವಿಷಯುವನ್ನು ಕೇಳಿ ನಂತರ ತೀರ್ಪು ಕೊಡೋಣ, ಸಂಪ್ರದಾಯುವನ್ನು ಹಾಕೋಣ ಎಂಬುದಾಗಿ ತೀರ್ಮಾನಿಸಿದ್ದೇನೆ. ಹಿಂದೆ ಇಂಥ ವಿಷಯುಗಳಲ್ಲಿ ಛೇಂಬರ್‌ನಲ್ಲೇ ರಿಜೆಕ್ಟ್ ಮಾಡಿ ಸಂಬಂಧಪಟ್ಟವರಿಗೆ ಇಂಟಿಮೇಷನ್ ಕೊಡುತ್ತಿದ್ದರು. ಹಾಗೆ ಮಾಡಬಾರದು, ವಿಷಯುದ ತಿಳುವಳಿಕೆಗೆ ಅನುಕೂಲವಾಗಲಿ ಎಂಬುದಾಗಿ ತಿಳಿದುಕೊಂಡು ೧೦-೫೫ ಗಂಟೆಗೆ ಅವರ ನೋಟೀಸ್ ಬಂದಿದ್ದರೂ ಸಭೆಯಲ್ಲಿ ಅದನ್ನು ಪ್ರಾರಂಭಿಕವಾಗಿ ಅದರ ಅಡ್ಮಿಸಿಬಿಲಿಟಿಯು ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ನಂತರ ಅವರು ಪಾಯಿಂಟ್ ಆಫ್ ಆರ್ಡರ್ ತೆಗೆದು ಅಡ್ಮಿಸಿಬಿಲಿಟಿಯು ಬಗ್ಗೆಯೂ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲವೆಂದು, ಇನ್ನೊಂದು ಮನೆಯು ವಿಷಯುವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ತಮ್ಮ ಅನುಮತಿಗೋಸ್ಕರವಾಗಿಯೂ ಎತ್ತಬಾರದು ಎಂಬುದಾಗಿ ಹೇಳಿದ್ದಾರೆ. ನಿಮ್ಮನ್ನು ಕೇಳತಕ್ಕಂತಹದ್ದು ನಮ್ಮ ಕರ್ತವ್ಯವೆಂದು ತಿಳಿದುಕೊಂಡು ಅಡ್ಮಿಸಿಬಿಲಿಟಿಯು ಬಗ್ಗೆ ಹೇಳಿ ಎಂಬುದಾಗಿ ನಿಮಗೆ ಹೇಳಿದ್ದೇನೆ. ಮತ್ತೆ ಆ ಕಡೆಯುವರು ನಾನ್ ಅಡ್ಮಿಸಬಿಲಿಟಿಯು ಬಗ್ಗೆ ಮತ್ತೊಂದು ವಿಷಯುವನ್ನು ಅವರೂ ಹೇಳಿದ್ದಾರೆ. ನಿಮ್ಮ ನಿಲುವಳಿ ಸೂಚನೆಯಲ್ಲಿ ಏನಿದೆ ಎಂದರೆ

> "ಕರ್ನಾಟಕ ವಿಧಾನ ಪರಿಷತ್ತಿನ ಸಭೆಯು ಮುಂದೆ ನಿಗದಿಪಡಿಸಿದಂತಹ ತನ್ನ ಕಾರ್ಯ ಕಲಾಪಗಳನ್ನು ನಡೆಸುವುದಿದ್ದರೂ ಫೆಬ್ರುವರಿ ೧೬ನೇ ತಾರೀಖಿಗೆ ಮುಂದೂಡಿದ್ದು, ಇದು ಸಂಸದೀಯು ನಡವಳಿಕೆ ಹಾಗೂ ಸಂಸದೀಯು ಸಂಪ್ರದಾಯುಗಳನ್ನು ಕಡೆಗಣಿಸಿದಂತಾಗುತ್ತದೆ. ಸಂಸದೀಯು ನಡವಳಿಕೆಯು ಪ್ರಕಾರ ವಿಧಾನ ಪರಿಷತ್ತಿಗೂ ಹಾಗೂ ವಿಧಾನ ಸಭೆಗೂ ಸಮಾನ ಅವಕಾಶ, ಸಮಾನ ಅಧಿಕಾರ ಇದ್ದು, ಕೂಡಲೇ ವಿಧಾನ ಪರಿಷತ್ತು ತನ್ನ ಅಧಿವೇಶನವನ್ನು ನಡೆಯುವಂತೆ ಕ್ರಮ ಕೈಗೊಳ್ಳಬೇಕು"

ಎಂಬುದಾಗಿ ಹೇಳಿದ್ದೀರಿ. ಇಲ್ಲಿ ನಮಗೆ ಕೆಲವೊಂದು ಸಂಪ್ರದಾಯುಗಳಿವೆ. ಈ ಮನೆಯು ಅಧ್ಯಕ್ಷನನ್ನಾಗಿ ನನ್ನನ್ನು ನೀವೆಲ್ಲರೂ ಸೇರಿ ಆಯ್ಕೆ ಮಾಡಿದ್ದೀರು. ಅದೇ ರೀತಿ ವಿಧಾನ ಪರಿಷತ್ತಿಗೂ ಅಧ್ಯಕ್ಷರನ್ನಾಗಿ ಆ ಮನೆಯು ಎಲ್ಲಾ ಸದಸ್ಯರೂ ಸೇರಿ ಆಯ್ಕೆ ಮಾಡಿದ್ದಾರೆ. ಈ ಸಭೆಯು ಕಾರ್ಯ ಕಲಾಪಗಳನ್ನು ೫ ಗಂಟೆಯಿಂದ ೬ ಗಂಟೆಗೆ ಮುಂದುವರಿಸಬೇಕಾದರೆ, ರಾತ್ರಿ ೧೦ ಗಂಟೆಯುವರೆಗೂ ಮುಂದುವರಿಸರಿಸ ಬೇಕಾದರೂ, ಮಾರನೇಯು ದಿವಸಕ್ಕೆ ಮುಂದೂಡಬೇಕಾದರೂ ಹಾಗೂ ೪-೫ ದಿವಸ ಬಿಟ್ಟು ನಂತರ ಸದನವನ್ನು ಕರೆಯುವುದಕ್ಕೆ ನನಗೆ ಯಾವ ರೀತಿಯು ಅಧಿಕಾರ ಇದೆಯೋ, ಅದೇ ರೀತಿ ಅಧಿಕಾರ ಆ ಮನೆಯು ಅಧ್ಯಕ್ಷರಿಗೂ ಇದೆ.

> "The Chairman shall determine the time when a sitting of the Council shall be adjourned sine die or to a day or hour or part of the same day. Provided that the Chairman may, if he thinks fit, call a sitting of the Council before the date or time to which it has adjourned or at any time after the Council has been adjourned sine die."

ಈ ತರಹ ನಿಲುವಳಿ ಸೂಚನೆಯುನ್ನು ತರುವುದಾದರೂ ನಮ್ಮಲ್ಲಿರುವಂತಹ ಸಂಪ್ರದಾಯುದ ಪ್ರಕಾರ ಹಾಗೂ ಪಾರ್ಲಿಮೆಂಟರಿ ಪ್ರೊಸೀಜರ್ ಪ್ರಕಾರ Adjournment motion is nothing but a Censure motion against the Government. But here it is a censure motion against either the Speaker or against Council Chairman. ಅದಕ್ಕೋಸ್ಕರ ನೀವು ಕೊಟ್ಟಿರುವಂತಹ ನಿಲುವಳಿ ಸೂಚನೆಯಲ್ಲಿ ಏನಾಗಿದೆ ಎಂದರೆ

ನಿಲುವಳಿ ಸೂಚನೆಯಲ್ಲಿ ಆ ಮನೆಯ ಅಧ್ಯಕ್ಷರ ಮೇಲೆ ತಂದಿರುವಂತಿದೆ. ಆ ರೀತಿಯ ಅಭಿಪ್ರಾಯದಲ್ಲಿ ತಾವು ಈ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಬೋನಫೈಡ್ ಬಲೀಫ್ ಕೊಟ್ಟು ಹಾಗೆ ಕೊಟ್ಟಿದ್ದೀರಿ. ಈ ಒಂದು ನಿಲುವಳಿ ಸೂಚನೆಯನ್ನು ಚರ್ಚೆ ಮಾಡುವುದಕ್ಕೆ ನಮ್ಮ ಈ ಮನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಇದು ಕೌನ್ಸಿಲ್‌ನ ಛೇರ್ಮನ್‌ರವರ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ ಎನ್ನುವ ಅಭಿಪ್ರಾಯಕ್ಕೆ ನಾನು ಬಂದಿದ್ದೇನೆ. ಆದ್ದರಿಂದ ಈ ನಿಲುವಳಿ ಸೂಚನೆಯ ಬಗ್ಗೆ ಚರ್ಚೆ ಮಾಡುವುದು ಸರಿಯಲ್ಲವೆಂದು ಅವರ ಪಾಯಿಂಟ್ ಆಫ್ ಆರ್ಡರ್ ಮುಖಾಂತರ ಏನು ಹೇಳಿದ್ದಾರೆ ಅದರಲ್ಲಿ ಸತ್ಯಾಂಶ ಇದೆ. ಈ ಒಂದು ನಿಲುವಳಿ ಸೂಚನೆಯ ಅಡ್ಮಿಸಿಬಲಿಟಿ ಬಗ್ಗೆ ಕೆಲವೊಂದು ವಿಚಾರಗಳನ್ನು ನನಗೆ ತಾವು ಹೇಳಿದ್ದೀರಿ, ಏಕೆಂದರೆ ನನಗೂ ಕೆಲವು ವಿಚಾರಗಳನ್ನು ತಿಳಿಯುವ ಅವಕಾಶವಾಯಿತು. ಇದರಿಂದ ನಮಗೂ ಅನುಕೂಲವಾದ ಹಾಗೆ ಆಯಿತು. ಆದರೂ ತಮ್ಮ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ಕೊಡದೆ, ಅನುಮತಿಯ ನಿರಾಕರಣೆ ಮಾಡಿದ್ದೇನೆ. ಎಲ್ಲರಿಗೂ ಧನ್ಯವಾದಗಳು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ತಮ್ಮ ತೀರ್ಪನ್ನು ಪ್ರಶ್ನೆ ಮಾಡತಕ್ಕಂತಹ ಹಕ್ಕು ನಮಗ್ಯಾರಿಗೂ ಇಲ್ಲ. ನಾವು ಎಲ್ಲಾ ವಿಚಾರಗಳನ್ನು ಕೂಡ ಪ್ರಸ್ತಾಪ ಮಾಡಿಲ್ಲ. ತಮ್ಮ ಬಗ್ಗೆ ನಮಗೆ ಅಪಾರ ಗೌರವ ಇದೆ. ಸಭೆಯನ್ನು ಬಹಳ ಶಾಂತ ರೀತಿಯಿಂದ ನಡೆಸಿಕೊಂಡು ಬಂದಿದ್ದೀರಿ. ನಿಮ್ಮ ಅಭಿಪ್ರಾಯದ ಪ್ರಕಾರ ಈ ಸದನದಲ್ಲಿ ಸರ್ಕಾರದ ವಿರುದ್ಧ ಸೆನ್ಸಾರ್ ಮೋಷನ್ ಅನ್ನು ಮೂವ್ ಮಾಡಬೇಕೆಂದು ವಿರೋಧ ಪಕ್ಷದವರು ಇದ್ದರು, ಈ ವಿಚಾರ ಚರ್ಚೆಗೆ ಬಂದರೆ, ಸರ್ಕಾರ ಇಕ್ಕಟ್ಟಿಗೆ ಸಿಕ್ಕಂತಾಗುತ್ತದೆ, ಬಹುಮತ ಅವರಿಗೆ ಇಲ್ಲ......

ಶ್ರೀ ಎಂ. ಎಂ. ರಘುಪತಿ.—ಅಧ್ಯಕ್ಷರು ರೂಲಿಂಗ್ ಕೊಟ್ಟ ಮೇಲೂ ವ್ಯಾಖ್ಯಾನ ಮಾಡುವಂತಹದ್ದು ಎಲ್ಲಿಯೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಸ್ವಲ್ಪ ಹೇಳಬೇಕಾಗುತ್ತದೆ,

(ಗೊಂದಲ)

ಸೆನ್ಸಾರ್ ಮೋಷನ್ ಚರ್ಚೆಗೆ ಬರಬಾರದೆಂಬ ಉದ್ದೇಶದಿಂದ ತಾವು ತಂತ್ರವನ್ನು ಹೂಡಿ ಆ ಸದನವನ್ನು ಮುಂದೂಡಿದ್ದೀರಿ. ಇದು ಅಧ್ಯಕ್ಷರ ತಪ್ಪಲ್ಲ.

(ಗೊಂದಲ)

ಇದನ್ನು ಪ್ರತಿಭಟಿಸಿ ನಾವು ಸಭಾ ತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್‌ನ ಎಲ್ಲಾ ಮಾನ್ಯ ಸದಸ್ಯರು ಸಭೆಯಿಂದ ಹೊರಗಡೆ ಹೋದರು)

(ಗೊಂದಲ)

ಶ್ರೀ ಎಂ. ರಘುಪತಿ.—ನನ್ನ ಪಾಯಿಂಟ್ ಆಫ್ ಆರ್ಡರನ್ನು ತಾವು ಕೇಳಬೇಕು. ಒಂದು ತೀರ್ಮಾನವನ್ನು ಸಭಾಧ್ಯಕ್ಷರು ಕೊಟ್ಟ ಮೇಲೆ ಅದರ ಬಗ್ಗೆ ವ್ಯಾಖ್ಯಾನ ಮಾಡುವುದು ಎಂದೂ ಇಲ್ಲ. ಯಾವ ಚರಿತ್ರೆಯೂ ಇಲ್ಲ. ಅಂತಹ ವಿಷಯದ ಬಗ್ಗೆ ಇವೊತ್ತು ಅವರು ಚರ್ಚೆ ಮಾಡುತ್ತಿದ್ದಾರೆ. ಸರ್ಕಾರ ಇದರಲ್ಲಿ ಯಾವ ಆಸ್ಷಕ್ಷೇಪವನ್ನೂ ಮಾಡಿಲ್ಲ. ಈ ಸರ್ಕಾರಕ್ಕೆ ಯಾವ ಸಂಬಂಧವೂ ಇಲ್ಲ. ಆದ್ಧರಿಂದ ಅವರು ಏನು ವ್ಯಾಖ್ಯಾನ ಮಾಡಿದ್ದಾರೆ ಅದು ಅರ್ಥಹೀನವೆಂದು ಹೇಳುತ್ತಿದ್ದೇನೆ.

೩-೦೦ ಪಿ. ಎಂ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ ನಿಯಮ ೩೧೫ರ ಪ್ರಕಾರ...

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಕೆ. ಎಚ್. ಪಾಟೀಲ್‌ರವರೆ ತಮ್ಮ ಗಮನ ಸೆಳೆಯುವ ಸೂಚನೆಯನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— I want to give a personal explanation under rule 315.

ಅಧ್ಯಕ್ಷರು.— ತಾವು ನೋಟೀಸ್ ಕೊಡಿ.

ಶ್ರೀ ಎಂ. ಎಸ್. ಕೃಷ್ಣನ್.—ಇದಕ್ಕೆ ನೋಟೀಸ್ ಬೇಕಾಗಿಲ್ಲ. I don't think it requires notice.

ಅಧ್ಯಕ್ಷರು.—ತಾವು ನೋಟೀಸ್ ಕೊಟ್ಟಿದ್ದೀರೋ ಇಲ್ಲವೋ ಅದನ್ನು ನೋಡುತ್ತೇನೆ, ತಾವು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ನಿಂತುಕೊಂಡಿದ್ದೇನೆ ನನಗೆ ಮಾತನಾಡುವುದಕ್ಕೆ ಅವಕಾಶ ವನ್ನು ತಾವು ಕೊಡುತ್ತಿಲ್ಲ.

ಅಧ್ಯಕ್ಷರು.—ನಿಮ್ಮ ನೋಟೀಸ್ ಇದೆಯೋ ಇಲ್ಲವೋ ಅದನ್ನು ನೋಡುತ್ತೇನೆ ತಾವು ಕುಳಿತು ಕೊಳ್ಳಿ.

ಮಾನ್ಯ ಸದಸ್ಯರಾದ ಕುಶಾಲರವರು ತಮ್ಮ ಮನವಿಯನ್ನು ಸಭೆಯ ಮುಂದೆ ಮಂಡಿಸಿ. ಮಾನ್ಯ ಸದಸ್ಯರು ಸಭೆಯಲ್ಲಿಲ್ಲ.

ಗಮನ ಸೆಳೆಯುವ ಸೂಚನೆ

(V) ವಿರಾಜಪೇಟೆ ತಾಲ್ಲೂಕು ಕೋತೂರು ಗ್ರಾಮದಲ್ಲಿ ನಡೆದ ಕೊಲೆಯ ಬಗ್ಗೆ

ಶ್ರೀಮತಿ ಸುಮಾ ವಸಂತ.—ಮಾನ್ಯ ಅಧ್ಯಕ್ಷರೆ, ವಿರಾಜಪೇಟೆ ತಾಲ್ಲೂಕಿನ ಕೋತೂರು ಗ್ರಾಮ ದಲ್ಲಿ ದಿನಾಂಕ ೧೮ನೇ ಡಿಸೆಂಬರ್ ೧೯೮೫ರಂದು ನಡೆದ ಕೊಲೆಯ ವಿಚಾರದ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯಣಿಯವರು ಗಮನ ಸೆಳೆದಿರುವ ವಿಚಾರದ ಬಗ್ಗೆ ಈ ಕೆಳಕಂಡ ಹೇಳಿಕೆಯನ್ನು ಓದುತ್ತೇನೆ.

ದಿನಾಂಕ ೧೬-೧೨-೮೫ರಂದು ಸಂಜೆ ಸುಮಾರು ೭-೩೦ ಗಂಟೆ ಸಮಯದಲ್ಲಿ ಕೊತೂರು ಗ್ರಾಮದ ರಾಮಕೃಷ್ಣಹೊಳ್ಳ ಎಂಬುವರು ವೀರಾಜಪೇಟೆಯ ಆರಕ್ಷಕ ಉಪಾಧೀಕ್ಷಕರವರನ್ನು ಅವರ ಕಛೇರಿಯಲ್ಲಿ ಭೇಟಿ ಮಾಡಿ ಒಂದು ಅರ್ಜಿಯನ್ನು ಸಲ್ಲಿಸಿ ಈ ಕೆಳಕಂಡಂತೆ ಹೇಳಿರುತ್ತಾರೆ.

ಅವರ ಎದುರಾಳಿಗಳಾದ ಮಣ್ಣಕಮನೆ ಎಂ. ಬಿ. ಗಣೇಶ್ ಮತ್ತು ಅವರ ಕುಟುಂಬದ ಸದಸ್ಯರು ಅವರಿಗೆ ತೊಂದರೆಗಳನ್ನು ಉಂಟುಮಾಡಿ ಅವರ ಜಮೀನುಗಳನ್ನು ಶಾಂತಿಯಿಂದ ಅನುಭವಿ ಸುವುದಕ್ಕೆ ಬಿಡುತ್ತಾ ಇಲ್ಲವೆಂದು ತಿಳಿಸಿದರು. ಆತನು ಮಡಿಕೇರಿಯ ಸಿವಿಲ್ ನ್ಯಾಯಾಲಯದಿಂದ ಖಾಯಂ ನಿಷೇದಾಜ್ಞೆಯನ್ನು ಪಡೆದಿರುವುದಾಗಿಯೂ, ಆದರೆ ಶ್ರೀ ಎಂ. ಬಿ. ಗಣೇಶ್‌ರವರ ಪತ್ನಿಯು ವೀರಾಜಪೇಟೆಯ ನ್ಯಾಯಾಲಯದಿಂದ ತಾತ್ಕಾಲಿಕ ನಿಷೇದಾಜ್ಞೆಯನ್ನು ಪಡೆದಿದ್ದು ಮಣ್ಣಕಮನೆ ಕುಟುಂಬದವರು ಜಮೀನುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆಂದು ಹೇಳಿ ತನಗೆ ರಕ್ಷಣೆ ಕೊಡಬೇಕೆಂದು ಕೋರಿಕೊಂಡರು. ಅದರಂತೆ ವೀರಾಜಪೇಟೆಯ ಆರಕ್ಷಕ ಉಪಾಧೀಕ್ಷಕರು ಕುಟ್ಟ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರವರಿಗೆ ಅದೇ ದಿನ ಸುಮಾರು ೯-೩೦ ಗಂಟೆ ಸಮಯದಲ್ಲಿ ತಂತಿ ಸಂದೇಶವನ್ನು ಕಳುಹಿಸಿ ಅವರಿಗೆ ರಕ್ಷಣೆ ಕೊಟ್ಟು ವರದಿ ಮಾಡುವಂತೆ ಹೇಳಿದರು, ದಿನಾಂಕ ೧೭-೧೨-೮೫ರಂದು ಮಣ್ಣಕಮನೆ ಕುಟುಂಬದವರು ಸದರೀ ಗ್ರಾಮದ ಸರ್ವೆ ನಂ. ೧೫.೧ ರಲ್ಲಿ ಸುಮಾರು ಒಂದು ಎಕರೆ ಜಮೀನಿಗೆ ಬೇಲಿ ಹಾಕಿಸಲು ಪ್ರಾರಂಬಿಸಿದರು. ಆ ಸಂದರ್ಭದಲ್ಲಿ ರಾಮಕೃಷ್ಣ ಹೊಳ್ಳರವರು ಬೇಲಿ ಹಾಕುವುದನ್ನು ವಿರೋಧಿಸಿ ಕುಟ್ಟ ಪೋಲಿಸ್ ಠಾಣೆಗೆ ರಕ್ಷಣೆ ಕೊಡ ಬೇಕೆಂದು ಕೇಳಿಕೊಂಡರು.

ಕುಟ್ಟ ಪೋಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ತನ್ನ ಸಿಬ್ಬಂದಿಯೊಂದಿಗೆ ಸುಮಾರು ೧೧ ಗಂಟೆ ಸಮಯದಲ್ಲಿ ಸ್ಥಳಕ್ಕೆ ಭೇಟಿ ಕೊಟ್ಟು ಎರಡು ಪಕ್ಷದವರಿಗೂ ಸಮಾಧಾನ ಹೇಳಿ ಶಾಂತಿಯಿಂದ ಇರುವಂತೆ ಸೂಚಿಸಿ ವಾಪಸ್ ಹೋದರು. ಆದರೆ ಸುಮಾರು ೩-೩೦ ಗಂಟೆ ಸಮಯದಲ್ಲಿ ಮಣ್ಣ ಕಮನೆ ಕುಟುಂಬದ ಸದಸ್ಯರಾದ ಎಂ. ಬಿ. ಗಣೇಶ್ ಮತ್ತು ಇತರ ೫ ಜನರು ಬೇಲಿ ಹಾಕುವುದಕ್ಕೆ ಪ್ರಾರಂಭಿಸಿದರು. ಅದನ್ನು ನೋಡಿದ ರಾಮಕೃಷ್ಣ ಹೊಳ್ಳರವರು ತನ್ನ ಗನ್ನನ್ನು ತೆಗೆದುಕೊಂಡು ಎದುರಾಳಿಗಳ ಮೇಲೆ ಗುಂಡು ಹಾರಿಸುವುದಕ್ಕೆ ಪ್ರಾರಂಭಿಸಿದರು. ಸುಮಾರು ೫ ಗಂಟೆ ಸಮಯದಲ್ಲಿ